
VOLUME: 16 | 22 MARCH 2026 | ಭಾನುವಾರ | RS: 2 | PAGE: 06 ISSUE: 55 ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

ಶ್ರೀಲೀಲಾ ಕನ್ನಡದ ನಟಿ. ಈಗ ಅವರು ಪ್ಯಾನ್ ಇಂಡಿಯಾ ನಟಿಯಾಗಿ ಸಖತ್ ಮಿಂಚುತ್ತಿದ್ದಾರೆ. ತೆಲುಗಿನಲ್ಲಂತೂ ನಂಬರ್ 1 ನಟಿ ಎನಿಸಿಕೊಂಡಿದ್ದಾರೆ. ಮಹೇಶ್ ಬಾಬು, ಪವನ್ ಕಲ್ಯಾಣ್ ಇನ್ನೂ ಕೆಲವು ಸ್ಟಾರ್ ನಟರುಗಳೊಜ್ಜಿಗೆ ನಟಿಸಿದ್ದಾರೆ. ತಮಿಳಿನಲ್ಲೂ ಸಹ ಸ್ಟಾರ್ ನಟರುಗಳೊಜ್ಜಿಗೆ ನಟಿಸುತ್ತಿದ್ದಾರೆ.



BHARATHA SARATHI
KANNADA DAILY NEWS PAPER
CALL 9740160669

# ಭಾರತ ಸಾರಥಿ

RNI KARKAN2011/44806
ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ
ಗಂಡಸಿ ಸದಾನಂದಸ್ವಾಮಿ



# ಟಿಕೆಟ್ ಹಂಚಿಕೆಗೆ ಕಾಂಗ್ರೆಸ್ ಪರದಾಟ: ಇಂದು ಅಂತಿಮ...?

ಬೆಂಗಳೂರು: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆ ಕಗ್ಗಂಟು ಆಗಿರುವಂತೆಯೇ ನಾಳೆಯೊಳಗೆ ಹೆಸರು ಅಂತಿಮಗೊಳುವ ಸಾಧ್ಯತೆಯಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಪಕ್ಷದ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದ್ದಾರೆ. ವಿವಿಧ ನಾಯಕರೊಂದಿಗೆ ಸಮಾಲೋಚಿಸಿದ ನಂತರ ಮಾರ್ಚ್ 22 ರ ನಂತರ ಟಿಕೆಟ್ ಹಂಚಿಕೆಯ ಬಗ್ಗೆ ನಿರ್ಧಾರವಾಗುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

ಏಪ್ರಿಲ್ 9 ರಂದು ನಡೆಯಲಿರುವ ವಿಧಾನಸಭಾ ಉಪಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್‌ನಲ್ಲಿ ತೀವ್ರ ಲಾಬಿ ಮುಂದುವರೆದಿದ್ದು, ಆಕಾಂಕ್ಷಿಗಳು ಮತ್ತು



ಸಮುದಾಯದ ಮುಖಂಡರು ವರಿಷ್ಠರ ಮೇಲೆ ಹೆಚ್ಚಿನ ಒತ್ತಡ ಹೇರುತ್ತಿದ್ದಾರೆ.

ಈ ಕುರಿತ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸುರ್ಜೇವಾಲಾ, ಇಂದು ರಾತ್ರಿ ಅಥವಾ ನಾಳೆಯೊಳಗೆ ಮಾಡಲಾಗುವುದು. ಸಮಗ್ರ ಚರ್ಚೆಗೆ ಪಕ್ಷ ಬಯಸಿದೆ ಎಂದರು.

ನಾನು ಮೊದಲೇ ಹೇಳಿದಂತೆ, ಒಬ್ಬ ಸಾಮಾನ್ಯ ಕಾರ್ಯಕರ್ತ ಭಿನ್ನಾಭಿಪ್ರಾಯ ಹೊಂದಿದ್ದರೂ, ಅದನ್ನು ಕೇಳಬೇಕು. ಅದು ಕಾಂಗ್ರೆಸ್ ಪಕ್ಷ. ನಾವು ನಿರ್ಧಾರಗಳಿಗೆ ಬೆಲೆ ಕೊಡುತ್ತೇವೆ. ಎಲ್ಲರ ಮಾತನ್ನು ಕೇಳಿ ನಂತರ ನಿರ್ಧರಿಸುತ್ತೇವೆ. ಅಂತಿಮವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಶನಿವಾರ ತಡರಾತ್ರಿ ಎಲ್ಲರೊಂದಿಗೆ ಸಮಾಲೋಚನೆ ನಡೆಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಕರ್ನಾಟಕ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ ಕೆ ಶಿವಕುಮಾರ್ ಅವರಿಂದ ಶಿಫಾರಸು ಕಳುಹಿಸಲಾಗುವುದು. ಸಂಜೆ ಅಥವಾ ನಾಳೆಯೊಳಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಸುರ್ಜೇವಾಲಾ ಹೇಳಿದ್ದಾರೆ.

ಈ ಮಧ್ಯೆ ಅಭ್ಯರ್ಥಿಗಳ ಘೋಷಣೆ ವಿಳಂಬವಾಗುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸ್ಥಳೀಯ ನಾಯಕರು ಬಗೆಹರಿಸುತ್ತಾರೆ ಎಲ್ಲದಕ್ಕೂ ಪ್ರತಿಕ್ರಿಯಿಸಲಾರೆ ಎಂದರು. ದಾವಣಗೆರೆಯಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಟಿಕೆಟ್ ಕೊಡಿಸಲು ಸಚಿವ ಜಮೀರ್ ಅಹ್ಮದ್ ಖಾನ್ ಸೇರಿದಂತೆ ಹಲವು ನಾಯಕರು ಬಿಗಿಪಟ್ಟು ಹಿಡಿದಿದ್ದಾರೆ. ಈ ಬಿಗಿಪಟ್ಟಿನ ನಡುವೆ ತೋಟಗಾರಿಕೆ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಪುತ್ರ ಸಮರ್ಥ್ ಅವರಿಗೆ ಟಿಕೆಟ್ ಕೊಡಿಸಲು ಹಲವರು ಪ್ರಯತ್ನ ನಡೆಸಿದ್ದಾರೆ. ಬಾಗಲಕೋಟೆ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕುರಿತು ಸಮಾಲೋಚನೆ ನಡೆಸಲಾಗಿದ್ದು, ಎಚ್.ವೈ. ಮೇಟಿ ಅವರ ಕುಟುಂಬದ ಸದಸ್ಯರೊಬ್ಬರಿಗೆ ಟಿಕೆಟ್ ಅಂತಿಮಗೊಳಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

# ಇರಾನ್ ಜೊತೆ ಮೋದಿ ಮಾತುಕತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಅವರೊಂದಿಗೆ ಮಾತನಾಡಿದ್ದಾರೆ. ಇರಾನ್‌ನಾದ್ಯಂತ ನಿರ್ಣಾಯಕ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು ಮೋದಿ ಖಂಡಿಸಿದ್ದು, ಇದು ಪ್ರಾದೇಶಿಕ ಸ್ಥಿರತೆಗೆ ಬೆದರಿಕೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಎಕ್ಸ್‌ನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, "ಇರಾನ್ ಅಧ್ಯಕ್ಷ ಡಾ. ಮಸೌದ್ ಪೆಜೆಶ್ಕಿಯಾನ್ ಅವರೊಂದಿಗೆ ಮಾತನಾಡಿದೆ. ಈದ್ ಮತ್ತು ನೌರುಜ್ ಶುಭಾಶಯಗಳನ್ನು ತಿಳಿಸಿದೆ. ಈ ಹಬ್ಬದ ಋತುವು ಪಶ್ಚಿಮ ಏಷ್ಯಾಕ್ಕೆ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯನ್ನು ತರುತ್ತದೆ ಎಂದು ನಾವು ಭಾವಿಸುತ್ತೇವೆ" ಎಂದು ಬರೆದಿದ್ದಾರೆ.

ಇದೇವೇಳೆ ಪ್ರಧಾನಿ ಮೋದಿ ಸಂಚಾರದ ಸ್ವಾತಂತ್ರ್ಯವನ್ನು ರಕ್ಷಿಸುವ ಮಹತ್ವವನ್ನು ಪುನರುಚ್ಚರಿಸಿದ್ದಾರೆ. ಹಾರ್ಮುಜ್ ಜಲಸಂಧಿಯ ದಿಗ್ಬಂಧನದ ಮಧ್ಯೆ ಹಡಗು ಮಾರ್ಗಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅವರು ಕರೆ ನೀಡಿದ್ದಾರೆ. ಇದು ವಿಶ್ವದ ತೈಲ ಮತ್ತು ಗ್ಯಾಸ್ ವ್ಯಾಪಾರದ ಐದನೇ ಒಂದು ಭಾಗವನ್ನು ಹೊಂದಿರುವ ಪ್ರಮುಖ ಕಡಲ ಚಾಕ್‌ಪಾಯಿಂಟ್ ಜಾಗತಿಕವಾಗಿ ಇಂಧನ ಪೂರೈಕೆಯ ಮೇಲೆ ಪರಿಣಾಮ ಬೀರಿತು.

# ಅಕಾಲಿಕ ಮಳೆ: ವಿಶೇಷ ಪ್ಯಾಕೇಜ್ ಘೋಷಣೆಗೆ ಆಗ್ರಹ

ಬೆಂಗಳೂರು: ಮಳೆ ಹಾನಿಗೊಳಗಾದ ಜಿಲ್ಲೆಗಳಲ್ಲಿ ಜಂಟಿ ಸಮೀಕ್ಷೆ ನಡೆಸಿ ಬೆಳೆ ನಷ್ಟದ ನಿಖರ ವರದಿ ಪಡೆದು, ಅಕಾಲಿಕ ಮಳೆಯಿಂದ ಉಂಟಾದ ಪ್ರಾಣಹಾನಿ ಮತ್ತು ಆಸ್ತಿಪಾಸ್ತಿ ಹಾನಿಗೆ ತಕ್ಷಣದ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಯಾವುದೇ ವಿಳಂಬ ಮಾಡದೆ ಸಂಕಷ್ಟದಲ್ಲಿರುವ ರೈತರಿಗೆ ಎಕರೆವಾರು ವೈಜ್ಞಾನಿಕ ಪರಿಹಾರವನ್ನು ವಿತರಿಸಬೇಕು. ಸಂಕಷ್ಟದಲ್ಲಿರುವ ಅನ್ನದಾತನ ಕೈ ಹಿಡಿಯುವುದು ಸರ್ಕಾರದ ಪ್ರಥಮ ಆದ್ಯತೆಯಾಗಬೇಕು ಎಂದು ಆಗ್ರಹಿಸಿದ್ದಾರೆ.

ನೆರೆ, ಬರ ಸಂದರ್ಭದಲ್ಲಿ ಬೆಳೆ ಹಾನಿ ಸಮೀಕ್ಷೆ, ಪರಿಹಾರ ವಿತರಣೆಯಲ್ಲಿ ಈ ಹಿಂದೆ ವಿಳಂಬ ಮಾಡಿದಂತೆ ಈ ಬಾರಿಯೂ ಮಾಡಿದರೆ, ರೈತರ ಹಿತ ಕಾಯುವಲ್ಲಿ ನಿರ್ಲಕ್ಷ್ಯ ವಹಿಸಿದರೆ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ರಾಜ್ಯದಲ್ಲಿ ಕಳೆದ ಎರಡು ದಿನಗಳಿಂದ ಅಕಾಲಿಕವಾಗಿ ಸುರಿದ ಆಲಿಕಲ್ಲು ಮಳೆ ನಾಡಿನ ಅನ್ನದಾತರ ಬದುಕನ್ನು ಮತ್ತಷ್ಟು ದುಸ್ತರಗೊಳಿಸಿದ್ದು, 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಸಾವಿರಾರು ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಗದಗ ಜಿಲ್ಲೆಯಲ್ಲಿ ಸಿಡಿಲು ಬಡಿದು ರೈತರೊಬ್ಬರು ಮೃತಪಟ್ಟಿರುವುದು ಅತ್ಯಂತ ದುರದೃಷ್ಟಕರ ಸಂಗತಿ. ಅವರ ಕುಟುಂಬಕ್ಕೆ ಸರ್ಕಾರ ತಕ್ಷಣವೇ ಸೂಕ್ತ ಪರಿಹಾರ ಘೋಷಿಸಬೇಕು ಎಂದು ಆಗ್ರಹಿಸಿದ್ದಾರೆ.

ಧಾರವಾಡ, ಹಾವೇರಿ, ಗದಗ, ಕಲಬುರಗಿ, ವಿಜಯಪುರ ಸೇರಿದಂತೆ ಉತ್ತರ ಕರ್ನಾಟಕದ ಹಲವು ಸುಮಾರು 10 ಜಿಲ್ಲೆಗಳಲ್ಲಿ ಜೋಳ, ಕಡಲೆ, ಗೋಧಿ ಹಾಗೂ ಮೆಕ್ಕೆಜೋಳದ ಬೆಳೆಗಳು ನೆಲಕಚ್ಚಿವೆ. ಇತ್ತ ಹಳೇ ಮೈಸೂರು ಭಾಗದ ಹಾಸನ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮಾವು, ದ್ರಾಕ್ಷಿ, ಹಲಸು ಹಾಗೂ ಕಲ್ಲಂಗಡಿ ಬೆಳೆ ಹಾಳಾಗಿದೆ ಎಂದಿದ್ದಾರೆ.

# ಅಲ್-ಫಲಾಹ್ ವಿವಿ ಸರ್ಕಾರದ ಸುಪರ್ದಿಗೆ

ಚಂಡೀಗಢ: ದೆಹಲಿಯ ಕೆಂಪು ಕೋಟೆ ಬಳಿ ನಡೆದ ಸ್ಫೋಟದಲ್ಲಿ ಅಲ್-ಫಲಾಹ್ ವಿಶ್ವವಿದ್ಯಾಲಯದ ಮೂವರು ವೈದ್ಯರ ಭಾಗಿಯಾಗಿದ್ದು ಗೊತ್ತಾದ ಬಳಿಕ ಅತಂತ್ರಕ್ಕೊಳಗಾಗಿದ್ದ ವಿವಿಯನ್ನು ಹರಿಯಾಣ ಸರ್ಕಾರ ತನ್ನ ಸುಪರ್ದಿಗೆ ಪಡೆದಿದೆ. ಇನ್ನು ಮುಂದೆ ಅಲ್-ಫಲಾಹ್ ವಿಶ್ವವಿದ್ಯಾಲಯವನ್ನು ಸರ್ಕಾರ ನೇಮಿಸಿದ ಆಡಳಿತಾಧಿಕಾರಿಗಳು ಮುನ್ನಡೆಸಲಿದ್ದಾರೆ.

ತನಿಖೆಯಲ್ಲಿ ವಿದ್ಯಾಲಯದ ನಿರ್ವಹಣೆಯಲ್ಲಿ ನಿಯಮಗಳ ಉಲ್ಲಂಘನೆಯಾಗಿದೆ ಮತ್ತು ಅಕ್ರಮಗಳು ಕಂಡುಬಂದಿವೆ. ಇದೇ ಕಾರಣಕ್ಕೆ ಹರಿಯಾಣ ಸರ್ಕಾರ ಮಧ್ಯಪ್ರವೇಶಿಸಿದೆ.

ಹಿರಿಯ ಐಎಎಸ್ ಅಧಿಕಾರಿ ಅಮಿತ್ ಅಗರ್ವಾಲ್ ಅವರನ್ನು ಅಲ್-ಫಲಾಹ್‌ನಲ್ಲಿ ಆಡಳಿತಾಧಿಕಾರಿಯಾಗಿ ನೇಮಿಸಲಾಗಿದೆ. ಬುಧವಾರ (ಮಾ.18) ಅವರು ಅಧಿಕಾರ ವಹಿಸಿಕೊಂಡಿದ್ದಾರೆ.




ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆಯ ಆಯುಕ್ತ ಮತ್ತು ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿರುವ ಅವರು ವಿಶ್ವವಿದ್ಯಾಲಯದ ಹಣಕಾಸು ಮತ್ತು ಆಡಳಿತ ವ್ಯವಹಾರಗಳನ್ನು ಅಹ ನೋಡಿಕೊಳ್ಳಲಿದ್ದಾರೆ.

ವಿಶ್ವವಿದ್ಯಾನಿಲಯದ 1,700ಕ್ಕೂ ಹೆಚ್ಚು ವಿದ್ಯಾರ್ಥಿಗಳ ಶೈಕ್ಷಣಿಕ ಕೆಲಸಕ್ಕಾಗಿ ಫರಿದಾಬಾದ್‌ನ ಜೆಸಿ ಬೋಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಿಂದ ಹೆಚ್ಚುವರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸಲು ತಂಡವನ್ನು ನಿಯೋಜಿಸಲಾಗಿದೆ. ಜೆಸಿ ಬೋಸ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಅಜಯ್ ರಂಗ ಅವರು ಉಪಕುಲಪತಿಯಾಗಿಯೂ ಸೇವೆ ಸಲ್ಲಿಸಲಿದ್ದಾರೆ.

ಅಲ್-ಫಲಾಹ್‌ನ ಪರೀಕ್ಷಾ ನಿಯಂತ್ರಕರಾದ ರಾಜೀವ್ ಕುಮಾರ್ ಸಿಂಗ್ ಅವರು ಅದೇ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ. ರವಿ ಕುಮಾರ್ ಶರ್ಮಾ ಅವರನ್ನು ಮುಖ್ಯ ಹಣಕಾಸು ಮತ್ತು ಲೆಕ್ಕಪತ್ರ ಅಧಿಕಾರಿಯಾಗಿ ನೇಮಿಸಲಾಗಿದೆ. ಮೇಹಾ ಶರ್ಮಾ ಅವರು ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಲಿದ್ದಾರೆ. ಅಭಿನವ್ ಮತ್ತು ರಾಜ್‌ದೀಪ್ ಅವರನ್ನು ಉಪಕುಲಪತಿ ಮತ್ತು ರಿಜಿಸ್ಟ್ರಾರ್ ಅಡಿಯಲ್ಲಿ ಆಡಳಿತಾತ್ಮಕ ಕರ್ತವ್ಯಗಳನ್ನು ಸಹ ನಿಯೋಜಿಸಲಾಗಿದೆ.

ವಿವಿಯ ಬೋಧನೆಗೆ ಯಾವುದೇ ಅಡ್ಡಿಯಾಗುವುದಿಲ್ಲ. ಅಧ್ಯಾಪಕರು ಬದಲಾಗದೆ ಅಲ್ಲಿಯೇ ಉಳಿಯಲಿದ್ದಾರೆ. ಈಗ ನಿಯೋಜಿಸಲಾದ ತಂಡವು ವಿಶ್ವವಿದ್ಯಾಲಯದ ಹಿತಾಸಕ್ತಿಗಾಗಿ ದೈನಂದಿನ ವ್ಯವಹಾರಗಳನ್ನು ನಿರ್ವಹಿಸುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಖಾಸಗಿ ವಿಶ್ವವಿದ್ಯಾಲಯಗಳ ಮೇಲ್ವಿಚಾರಣೆಯನ್ನು ಬಿಗಿಗೊಳಿಸಲು ಡಿಸೆಂಬರ್ 22 ರಂದು ಹರಿಯಾಣ ವಿಧಾನಸಭೆ ಕಠಿಣ ನಿಯಮಗಳನ್ನು ಜಾರಿಗೊಳಿಸಿದೆ. ಹರಿಯಾಣ ಖಾಸಗಿ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಮಸೂದೆಯು ಸೆಕ್ಷನ್ 44ಕ್ಕೆ ಹೊಸ ಷರತ್ತು ಸೇರಿಸಿದೆ.

ದುರಾಡಳಿತ, ಸುಳ್ಳು ಅಥವಾ ದಾರಿತಪ್ಪಿಸುವ ಮತ್ತು ಶೈಕ್ಷಣಿಕ ಮತ್ತು ನಿಯಂತ್ರಕ ಮಾನದಂಡಗಳನ್ನು ಪೂರೈಸುವಲ್ಲಿ ವಿಫಲವಾದರೆ ದಂಡವನ್ನು ವಿಧಿಸಲಾಗುತ್ತದೆ. ಈ ನಿಯಮದ ಪ್ರಕಾರ ಸರ್ಕಾರ ಈಗ ನಿರ್ದಿಷ್ಟ ಕೋರ್ಸ್‌ಗಳ ಪ್ರವೇಶವನ್ನು ನಿಲ್ಲಿಸಬಹುದಾಗಿದೆ. ನಿಯಮ ಉಲ್ಲಂಘಿಸಿದರೆ 10 ಲಕ್ಷ ರೂ.ಗಳಿಂದ 1 ಕೋಟಿ ರೂ.ಗಳವರೆಗೆ ದಂಡ ವಿಧಿಸಬಹುದು.

ಕೆಲವು ಪ್ರಕರಣಗಳಲ್ಲಿ 30 ದಿನಗಳಲ್ಲಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಹಂತಹಂತವಾಗಿ ವಿಸರ್ಜನೆಗೆ ಆದೇಶಿಸಬಹುದು ಎನ್ನಲಾಗಿದೆ.

# ಭಾರತಕ್ಕೆ ಬರಲಿವೆ ಮತ್ತೆರಡು ಹಡಗುಗಳು

ಹಾರ್ಮುಜ್ ಜಲಸಂಧಿಯು ಪರ್ಷಿಯನ್ ಕೊಲ್ಲಿ ಮತ್ತು ಓಮನ್ ಕೊಲ್ಲಿಯ ನಡುವಿನ ಕಾರ್ಯತಂತ್ರದ ಕಿರಿದಾದ ಸಮುದ್ರ ಮಾರ್ಗ. ವಿಶ್ವದ ಕಚ್ಚಾ ತೈಲ ಪೂರೈಕೆಯ ಸುಮಾರು 20-25% ಇದರ ಮೂಲಕ ಹಾದುಹೋಗುತ್ತದೆ. ಫೆಬ್ರವರಿ 28 ರಂದು ಯುದ್ಧ ಪ್ರಾರಂಭವಾದಾಗಿನಿಂದ ಇರಾನ್ ಮತ್ತು ಓಮನ್ ನಡುವಿನ ಕಿರಿದಾದ ಸಮುದ್ರ ಮಾರ್ಗದಲ್ಲಿ ನೂರಾರು ಹಡಗುಗಳು ಸಿಲುಕಿಕೊಂಡಿದ್ದವು. ಆದಾಗ್ಯೂ, ಭಾರತದ ರಾಜತಾಂತ್ರಿಕ ಸಂಪರ್ಕದ ನಂತರ, ಎರಡು ಭಾರತೀಯ ಹಡಗುಗಳಾದ ಶಿವಾಲಿಕ್ ಮತ್ತು ನಂದಾ ದೇವಿ ಸುರಕ್ಷಿತವಾಗಿ ಜಲಸಂಧಿಯನ್ನು ದಾಟಿ ಗುಜರಾತ್ ತಲುಪಿವೆ.

ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಭಾರತದ ಧ್ವಜವನ್ನು ಹೊಂದಿರುವ ಎರಡು ದ್ರವೀಕೃತ ಪೆಟ್ರೋಲಿಯಂ ಅನಿಲ ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿಯ ಮೂಲಕ ಸಾಗಲು ತಯಾರಿ ನಡೆಸುತ್ತಿವೆ ಎಂದು ವರದಿಯಾಗಿದೆ.

ಹಾರ್ಮುಜ್ ಜಲಸಂಧಿಯು ಪರ್ಷಿಯನ್ ಕೊಲ್ಲಿ ಮತ್ತು ಓಮನ್ ಕೊಲ್ಲಿಯ ನಡುವಿನ ಕಾರ್ಯತಂತ್ರದ ಕಿರಿದಾದ ಸಮುದ್ರ ಮಾರ್ಗ. ವಿಶ್ವದ ಕಚ್ಚಾ ತೈಲ ಪೂರೈಕೆಯ ಸುಮಾರು 20–25% ಇದರ ಮೂಲಕ ಹಾದುಹೋಗುತ್ತದೆ. ಫೆಬ್ರವರಿ 28 ರಂದು ಯುದ್ಧ ಪ್ರಾರಂಭವಾದಾಗಿನಿಂದ ಇರಾನ್ ಮತ್ತು ಓಮನ್ ನಡುವಿನ ಕಿರಿದಾದ ಸಮುದ್ರ ಮಾರ್ಗದಲ್ಲಿ ನೂರಾರು ಹಡಗುಗಳು ಸಿಲುಕಿಕೊಂಡಿದ್ದವು. ಆದಾಗ್ಯೂ, ಭಾರತದ ರಾಜತಾಂತ್ರಿಕ ಸಂಪರ್ಕದ ನಂತರ, ಎರಡು ಭಾರತೀಯ ಹಡಗುಗಳಾದ ಶಿವಾಲಿಕ್ ಮತ್ತು ನಂದಾ ದೇವಿ ಸುರಕ್ಷಿತವಾಗಿ ಜಲಸಂಧಿಯನ್ನು



ದಾಟಿ ಗುಜರಾತ್ ತಲುಪಿವೆ.

ಗಲ್ಫ್ ಸಮುದ್ರದಲ್ಲಿ ಲಂಗರು ಹಾಕಲಾಗಿರುವ ಇನ್ನೂ ಎರಡು ಭಾರತೀಯ ಟ್ಯಾಂಕರ್‌ಗಳು ಶೀಘ್ರದಲ್ಲೇ ಹಾರ್ಮುಜ್ ಜಲಸಂಧಿಯನ್ನು ದಾಟುವ ಸಾಧ್ಯತೆಯಿದೆ. ಗಲ್ಫ್‌ನೊಳಗೆ ಯುನೈಟೆಡ್ ಅರಬ್ ಎಮಿರೇಟ್ಸ್ ಕೇಂದ್ರವಾದ ಶಾರ್ಜಾ ಬಳಿ ಲಂಗರು ಹಾಕಲಾಗಿರುವ ಭಾರತೀಯ ಧ್ವಜ ಹೊತ್ತ ಎಲ್‌ಪಿಜಿ ಟ್ಯಾಂಕರ್‌ಗಳಾದ ಪೈನ್ ಗ್ಯಾಸ್ ಮತ್ತು ಜಗ್ ವಸಂತ್ ಪ್ರಯಾಣಕ್ಕೆ ಸಿದ್ಧತೆ ನಡೆಸುತ್ತಿವೆ.

ಎರಡು ಎಲ್‌ಪಿಜಿ ಟ್ಯಾಂಕರ್‌ಗಳು ಶನಿವಾರ ಪ್ರಯಾಣ ಬೆಳೆಸುವ ಸಾಧ್ಯತೆ ಇದೆ. ಜಗ್ ವಸಂತ್ ಅನ್ನು ಬಿಪಿಸಿಎಲ್ ಮತ್ತು ಪೈನ್ ಗ್ಯಾಸ್ ಅನ್ನು ಐಒಸಿ ಚಾರ್ಟರ್ಡ್ ಮಾಡಿವೆ ಎಂದು ತಿಳಿದುಬಂದಿದೆ. ಶುಕ್ರವಾರ ಹಡಗುಗಳು ನೌಕಾಯಾನಕ್ಕೆ ಸಿದ್ಧವಾಗುತ್ತಿವೆಯೇ ಎಂದು ಕೇಳಿದಾಗ, ಭಾರತದ ಫೆಡರಲ್ ಶಿಪ್ಪಿಂಗ್ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ, ತಕ್ಷಣದ ವಿವರಗಳು ಲಭ್ಯವಿಲ್ಲ ಎಂದು ಹೇಳಿದ್ದಾರೆ.

ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಮಾತನಾಡಿ, ಗಲ್ಫ್ ಒಳಗಿರುವ ಭಾರತದ 22 ಹಡಗುಗಳ ಸುರಕ್ಷಿತ ಮತ್ತು ಅಡೆತಡೆಯಿಲ್ಲದ ಸಂಚಾರಕ್ಕೆ ದೇಶದ ಪ್ರಯತ್ನ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಇತರ ನಾಯಕರೊಂದಿಗೆ ಅವುಗಳ ಸುರಕ್ಷಿತ ಸಾಗಣೆಯ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

# ವೈದ್ಯಕೀಯ ಕ್ಷೇತ್ರಕ್ಕೂ ತಟ್ಟಿದ ಅನಿಲ ಸಮಸ್ಯೆ ಬಿಸಿ...!

ಗದಗ: ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ದೇಶದಾದ್ಯಂತ ಇಂಧನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತಿದ್ದು, ಅದರ ಬಿಸಿ ಇದೀಗ ಗದಗ ಜಿಲ್ಲೆಯಲ್ಲಿ ಆರೋಗ್ಯ ಕ್ಷೇತ್ರಕ್ಕೂ ತಟ್ಟಿದೆ. ಗದಗದ ಸರ್ಕಾರಿ ಆಯುಷ್ಯ ಆಸ್ಪತ್ರೆಯಲ್ಲಿ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಕೊರತೆ ತೀವ್ರವಾಗಿ ಎದುರಾಗಿದ್ದು, ಚಿಕಿತ್ಸೆ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿದೆ.

ಪಂಚಕರ್ಮ ಚಿಕಿತ್ಸೆಗೆ ಗ್ಯಾಸ್ ಸಿಲಿಂಡರ್ ಅತ್ಯಾವಶ್ಯಕವಾಗಿದ್ದು, ಮಸಾಜ್ ಎಣ್ಣೆ ಬಿಸಿ ಮಾಡಲು ಹಾಗೂ ಸ್ಟೀಮ್ ಚಿಕಿತ್ಸೆ ನೀಡಲು ಗ್ಯಾಸ್ ಅವಶ್ಯಕವಾಗಿದೆ. ಆದರೆ 19 ಕೆಜಿ ಕಮರ್ಷಿಯಲ್ ಸಿಲಿಂಡರ್ ಲಭ್ಯವಿಲ್ಲದ ಕಾರಣ ಆಸ್ಪತ್ರೆ ಆಡಳಿತವು ಇದೀಗ 5



ಕೆಜಿ ಸಿಲಿಂಡರ್‌ಗಳನ್ನು ಬಳಸಿಕೊಂಡು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದೆ.

ಆಸ್ಪತ್ರೆಗೆ ಪ್ರತಿದಿನ 10 ರಿಂದ 20 ರೋಗಿಗಳು ದಾಖಲಾಗುತ್ತಿದ್ದು, ಪಾರ್ಶ್ವವಾಯು, ಮಂಡಿ ಹಾಗೂ ಬೆನ್ನುನೋವು ಸೇರಿದಂತೆ ಹಲವು ಸಮಸ್ಯೆಗಳಿಗಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ ಸಿಲಿಂಡರ್ ಕೊರತೆಯಿಂದ ರೋಗಿಗಳಿಗೆ ನೀಡುವ ಸ್ಟೀಮ್ ಚಿಕಿತ್ಸೆ ಹಾಗೂ ಆಹಾರ ವ್ಯವಸ್ಥೆಯಲ್ಲೂ ತೊಂದರೆ ಉಂಟಾಗಿದೆ. ಸಮಸ್ಯೆ ನಿವಾರಣೆಗೆ ಪರ್ಯಾಯವಾಗಿ ಎಲೆಕ್ಟ್ರಾನಿಕ್ ಒಲೆಗಳು ಹಾಗೂ ಕುಕ್ಕರ್ ಬಳಕೆಗೆ ಅಧಿಕಾರಿಗಳು ಯೋಜನೆ ರೂಪಿಸಿದ್ದಾರೆ. ಯಾವುದೇ ವ್ಯತ್ಯಯ ಉಂಟಾಗದಂತೆ ಚಿಕಿತ್ಸೆ ಮುಂದುವರಿಸುತ್ತಿದ್ದೇವೆ ಎಂದು ವೈದ್ಯರು ತಿಳಿಸಿದ್ದಾರೆ.

# ತುಮಕೂರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು

ತುಮಕೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮತ್ತೊಮ್ಮೆ ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ಸಿದ್ದಗಂಗಾ ಮಠದ ಶ್ರೀ ಶಿವಕುಮಾರಸ್ವಾಮೀಜಿ ಅವರ 119ನೇ ಜನ್ಮದಿನಾಚರಣೆ ಹಾಗೂ ಗುರುವಂದನಾ ಕಾರ್ಯಕ್ರಮ ಹಿನ್ನಲೆ ಏಪ್ರಿಲ್ 1ರಂದು ತುಮಕೂರಿನ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಲಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಆಗಮನ ಹಿನ್ನಲೆಯಲ್ಲಿ ತುಮಕೂರಿನ ಕ್ಯಾತಸಂದ್ರ ಸಮೀಪದ ಸಿದ್ದಗಂಗಾ ಮಠದಲ್ಲಿ ಇಂದು ಪೂರ್ವಭಾವಿ ಸಭೆ ನಡೆಯಿತು. ಮಠದ ಪೀಠಾಧಿಪತಿ ಸಿದ್ದಲಿಂಗ ಶ್ರೀಗಳ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಕೇಂದ್ರ ಸಚಿವ ವಿ. ಸೋಮಣ್ಣ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ತುಮಕೂರು ಎಸ್ಪಿ ಅಶೋಕ್ ಹಾಗೂ ಶಾಸಕರುಗಳಾದ ಸುರೇಶ್ ಗೌಡ, ಜ್ಯೋತಿ ಗಣೇಶ್ ಸೇರಿದಂತೆ ಅನೇಕರು ಉಪಸ್ಥಿತರಿದ್ದು, ರಾಷ್ಟ್ರಪತಿ ಭೇಟಿ ಹಿನ್ನಲೆಯಲ್ಲಿ ಅಗತ್ಯ ಬಂದೋಬಸ್ತ್ ಹಾಗೂ ಇತರೆ ಸಿದ್ಧತೆಗಳ ಕುರಿತು ಚರ್ಚೆ ಮಾಡಲಾಗಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾರ್ಚ್ 31ರಂದು ಬೆಂಗಳೂರಿಗೆ ಆಗಮಿಸಲಿದ್ದು, ಲೋಕಪಾಲ್ ಭವನದಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಬಳಿಕ ಏಪ್ರಿಲ್ 1ರಂದು ತುಮಕೂರಿನ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಲಿರುವ ಅವರು, ಮಠದ ಪೂಜ್ಯ ಶಿವಕುಮಾರಸ್ವಾಮೀಜಿಗಳ ಗದ್ದುಗೆ ದರ್ಶನ ಪಡೆಯಲಿದ್ದಾರೆ.

ಬಳಿಕ ಮಠದ ಸುಮಾರು 10 ಸಾವಿರ ಮಕ್ಕಳೊಂದಿಗೆ ಸಂವಾದ ನಡೆಸಲಿದ್ದು, ಆ ಬಳಿಕ ಶಿವಕುಮಾರಸ್ವಾಮೀಜಿಗಳ 119ನೇ ಜನ್ಮದಿನಾಚರಣೆ ಅಂಗವಾಗಿ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಈ ಹಿನ್ನಲೆಯಲ್ಲಿ ಕಾರ್ಯಕ್ರಮಕ್ಕೆ ಅಗತ್ಯ ಬಂದೋಬಸ್ತ್ ಹಾಗೂ ಇತರೆ ಸಿದ್ಧತೆಗಳ ಕುರಿತು ಪೂರ್ವಭಾವಿ ಸಭೆಯಲ್ಲಿ ಚರ್ಚೆ ಮಾಡಲಾಗಿದೆ.

# ಸುಟ್ಟುಕರಕಲಾದ ಅರಣ್ಯಪ್ರದೇಶ

ಚಿಕ್ಕಮಗಳೂರು: ಪ್ರಸಿದ್ಧ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಉಂಟಾದ ಕಾಡ್ಗಿಚ್ಚು ಎದುರಾಗಿದ್ದು, ಪರಿಣಾಮ 18 ಎಕರೆ ಅರಣ್ಯ ಪ್ರದೇಶ ಸುಟ್ಟು ಭಸ್ಮವಾಗಿದೆ.

ಕೆರೆಕಟ್ಟೆ ಅರಣ್ಯ ವಲಯದ ಮಾಣಿಕ್ಯ ಬೆಟ್ಟ ಹಾಗೂ ವಾಲಿಕುಂಜ ಗಿರಿ ಪ್ರದೇಶಗಳಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿದ್ದು, ಬಳಿಕ ಅದು ವೇಗವಾಗಿ ಪಕ್ಕದ ಪ್ರದೇಶಗಳಿಗೆ ಹರಡಿದೆ. ಪರಿಣಾಮವಾಗಿ ಸುಮಾರು 18 ಏಕರೆ ಅರಣ್ಯ ಪ್ರದೇಶ ಸುಟ್ಟು ಭಸ್ಮವಾಗಿದೆ. ಶೋಲಾ ಅರಣ್ಯದ ಹುಲ್ಲುಗಾವಲು ಪ್ರದೇಶಗಳಲ್ಲಿ ಕೆಲ ದುಷ್ಕರ್ಮಿಗಳು 25ಕ್ಕೂ ಹೆಚ್ಚು ಸ್ಥಳಗಳಲ್ಲಿ ಬೆಂಕಿ ಹಚ್ಚಿರುವ ಶಂಕೆ ವ್ಯಕ್ತವಾಗಿದ್ದು, ಬೆಂಕಿಯ ಜ್ವಾಲೆಗಳು ದೂರದೂರಿನಿಂದಲೂ ಗೋಚರಿಸುತ್ತಿತ್ತು ಎನ್ನಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ನಿರ್ಲಕ್ಷ್ಯ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಂಕಿ ನಿಯಂತ್ರಣಕ್ಕೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳದಿರುವುದು ಮತ್ತು ಅರಣ್ಯವನ್ನು ರಕ್ಷಿಸುವಲ್ಲಿ ವಿಫಲವಾಗಿರುವುದಾಗಿ ಆರೋಪಿಸಿದ್ದಾರೆ. ಅಗ್ನಿ ನಿಯಂತ್ರಣಕ್ಕೆ ಸಿಬ್ಬಂದಿಯನ್ನು ನೇಮಿಸಲು ಹಣ ವೆಚ್ಚ ಮಾಡಲಾಗುತ್ತಿದೆಯಾದರೂ, ಸಿಬ್ಬಂದಿಗಳು ಸ್ಥಳದಲ್ಲೇ ಕಾರ್ಯನಿರ್ವಹಿಸದಿರುವುದು ಸ್ಪಷ್ಟವಾಗುತ್ತಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭಾರತ ಸಾರಥಿ
22/03/2026
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ-ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಯುಗಾದಿ ಸಂಭ್ರಮದಲ್ಲಿ 'ಅಪ್ಪು ಉತ್ಸವ' ಮಕ್ಕಳ ಹಬ್ಬ ಅದ್ದೂರಿ ಯಶಸ್ಸು






ಬೆಂಗಳೂರು: ಯುಗಾದಿ ಹಬ್ಬ ಹಾಗೂ ಪುನೀತ್ ರಾಜಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ "ಇದು ನಿಮ್ಮ ವಾಹಿನಿ ಕಲಾವೇದಿಕೆ" ವತಿಯಿಂದ 'ಅಪ್ಪು ಉತ್ಸವ' ಮತ್ತು ಮಕ್ಕಳ ಹಬ್ಬ ಕಾರ್ಯಕ್ರಮವನ್ನು ರಾಮಮೂರ್ತಿ ನಗರದ ನಾಟ್ಯಪ್ರಿಯ ಆಡಿಟೋರಿಯಂನಲ್ಲಿ ಬೆಳಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಭರ್ಜರಿಯಾಗಿ ಆಯೋಜಿಸಲಾಯಿತು. ಕಾರ್ಯಕ್ರಮಕ್ಕೆ ಚಲನಚಿತ್ರ ನಟ ನೆನಪಿರಲಿ ಪ್ರೇಮ್ ರಾಯಭಾರಿಯಾಗಿ ಭಾಗವಹಿಸಿದ್ದು ವಿಶೇಷ ಮೆರುಗು ನೀಡಿತು. ವಿವಿಧ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತ ಗಂಡಸಿ ಸದಾನಂದ ಸ್ವಾಮಿ ವಹಿಸಿಕೊಂಡಿದ್ದರು. ಹಿರಿಯ ವಕೀಲರಾದ ಪ್ರಮೀಳಾ ನೇಸರ್ಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಡಾ. ವಿ. ಭರಣಿ ರಾಜು (ಸಂಜೀವಿನಿ ರೇಖಿ ಹಿಲಿಂಗ್ ಸೆಂಟರ್), ಡಾ. ನಾರಾಯಣ ಪ್ರಸಾದ್ (ಸ್ಕ್ವಯರ್ ಫೀಟ್ ರಿಯಾಲಿಟಿ), ದೀಪಾ ಲಕ್ಷ್ಮಿ (ಶ್ರೀ ಸಾಯಿ ಶಂಕರ ಅಕಾಡೆಮಿ ಆಫ್ ಮ್ಯೂಸಿಕ್), ಲಿಖಿತ್ (ರಾಜ್ ಡಾನ್ಸ್ ಅಕಾಡೆಮಿ) ಸೇರಿದಂತೆ ಹಲವರು ಉಪಸ್ಥಿತರಿದ್ದರು. ಎಲ್ಲ ಅತಿಥಿಗಳು ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಕನ್ನಡಾಂಬೆ ಹಾಗೂ ಪುನೀತ್ ರಾಜಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಕಾರ್ಯಕ್ರಮದ ದ್ವಿತೀಯಾರ್ಧದಲ್ಲೂ ಹಲವು ಗಣ್ಯರು ಭಾಗವಹಿಸಿದರು.

ಮಾರುತಿ ಮೆಡಿಕಲ್ಸ್‌ನ ಮಹೇಂದ್ರ ಮುನ್ನತ್, ರಾಮಮೂರ್ತಿ ನಗರ ಪೊಲೀಸ್ ಇನ್ಸ್ಪೆಕ್ಟರ್ ಸತೀಶ್ ಜಿಜೆ, ಡಾ. ಲಲಿತಾ ಎಂ (ಹಾವನೂರು ಕಾನೂನು ಕಾಲೇಜು), ಸ್ಯಾಂಡಲ್‌ವುಡ್ ನಟ ಅವಿನಾಶ್, ಡಿಸೈನರ್ ಲಕ್ಷ್ಮಿ ಕೃಷ್ಣ, ಕನ್ನಡ ಬ್ಯಾಚುಲರ್ಸ್ ಸಂಸ್ಥಾಪಕ ಶ್ರೀಧರ ಮಹಿಪತಿ ಗೌಡ ಹಾಗೂ ಇವೆಂಟ್ ಕೋಆರ್ಡಿನೇಟರ್ ಚಂದ್ರಿಕಾ ಭಾಗವಹಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಕಾರ್ಯಕ್ರಮದ ಪ್ರಮುಖ ಆಕರ್ಷಣೆ ಎಂದರೆ 35ಕ್ಕೂ ಹೆಚ್ಚು ಮಕ್ಕಳು ಫ್ಯಾನ್ಸಿ ಡ್ರೆಸ್ ಸ್ಪರ್ಧೆಯಲ್ಲಿ ವಿಭಿನ್ನ ವೇಷಭೂಷಣಗಳ ಮೂಲಕ ಸಾಮಾಜಿಕ ಸಂದೇಶಗಳನ್ನು ನೀಡಿದ್ದು ಗಮನ ಸೆಳೆಯಿತು. ಮಕ್ಕಳಿಗಾಗಿ ವಿಶೇಷ ಮ್ಯಾಜಿಕ್ ಶೋ ಕೂಡ ಆಯೋಜಿಸಲಾಗಿತ್ತು. ಜೊತೆಗೆ ನೂರಾರು ಪ್ರತಿಭಾನ್ವಿತರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಮೆಚ್ಚುಗೆ ಪಡೆದರು. ಈ ಸಂದರ್ಭದಲ್ಲಿ ಮಾತನಾಡಿದ ಕಲಾವೇದಿಕೆಯ ಸಂಸ್ಥಾಪಕ ಕಿಶೋರ್ ಕುಮಾರ್, "ಇಂತಹ ಕಾರ್ಯಕ್ರಮಗಳ ಮೂಲಕ ಕನ್ನಡ ಸಂಸ್ಕೃತಿ ಉಳಿಸಿ ಬೆಳೆಸುವ ಜೊತೆಗೆ ಹೊಸ ಪ್ರತಿಭೆಗಳನ್ನು ಗುರುತಿಸುವ ಕೆಲಸ ಮುಂದುವರೆಯಲಿದೆ" ಎಂದು ತಿಳಿಸಿದರು.

# 'ಪ್ಲೇ ಹಾರ್ಡ್. ರೆಸ್ಟ್ ಈಸಿ' ಅಭಿಯಾನಕ್ಕೆ ಬ್ರಾಂಡ್ ರಾಯಭಾರಿಯಾಗಿ ಆಯ್ಕೆ

ಬೆಂಗಳೂರು

ಸೌಖ್ಯ ಮತ್ತು ಸ್ವಯಂ-ಅಭಿವ್ಯಕ್ತಿಯ ಜಾಗತಿಕ ಪಾದರಕ್ಷೆಯ ಬ್ರಾಂಡ್ ಕ್ರೋಕ್ಸ್ ಖ್ಯಾತ ಕ್ರಿಕೆಟ್ ಪಟು ಕೆ.ಎಲ್. ರಾಹುಲ್ ಅವರನ್ನು ತನ್ನ 'ಪ್ಲೇ ಹಾರ್ಡ್. ರೆಸ್ಟ್ ಈಸಿ' ಹೊಚ್ಚಹೊಸ ಅಭಿಯಾನಕ್ಕೆ ಹೊಸ ಬ್ರಾಂಡ್ ರಾಯಭಾರಿಯಾಗಿ ಪ್ರಕಟಿಸಿದೆ. ಬ್ರಾಂಡ್ ನ ಮುಂಚೂಣಿಯ ಕ್ಲಾಸಿಕ್ ಕ್ಲಾಗ್ ಸುತ್ತಲೂ ನಿರ್ಮಿಸಲಾದ ಈ ಅಭಿಯಾನವು ಕ್ರೋಕ್ಸ್ ಅನ್ನು ಈ ಕ್ರೀಡೆಯ ಸುತ್ತಲೂ ನಡೆಯುವ ಈ ಅಭಿಯಾನವು ಮೈದಾನದಲ್ಲಿ ಹಾಜರಾಗುವುದರಿಂದ ಆಟದ ನಂತರ ವಿರಮಿಸಿಕೊಳ್ಳುವುದರೊಂದಿಗೆ ಪೂರ್ಣಗೊಳ್ಳುತ್ತದೆ. ಮೈದಾನದ ಒಳಗಡೆ ಮತ್ತು ಹೊರಗಡೆ ತನ್ನ ಪ್ರಯತ್ನರಹಿತ ಸ್ಟೈಲ್ ಗೆ ಖ್ಯಾತಿ ಪಡೆದ ಮತ್ತು ಪ್ರತಿನಿತ್ಯದ ಜೀವನದಲ್ಲಿ ಕ್ರೋಕ್ಸ್ ಪಾದರಕ್ಷೆ ಧರಿಸಿ ಕಾಣಿಸುವ ರಾಹುಲ್ ಈ ಪಾಲುದಾರಿಕೆಗೆ ವಿಶ್ವಾಸಾರ್ಹ ಸಂಪರ್ಕ ತರುತ್ತಾರೆ. ಈ ಕಾರ್ಯತಂತ್ರೀಯ ಸಹಯೋಗದ ಮೂಲಕ ಕ್ರೋಕ್ಸ್ ಇಂಡಿಯಾ ತನ್ನ ವ್ಯಾಪ್ತಿಯನ್ನು ಸದೃಢಗೊಳಿಸುವ




ಗುರಿ ಹೊಂದಿದ್ದು ಇದು ಪುರುಷರು ಮತ್ತು ಕ್ರೀಡಾ ಪ್ರಿಯ ಪ್ರೇಕ್ಷಕರಿಗೆ ದೇಶಾದ್ಯಂತ ತನ್ನ ಆಕರ್ಷಣೆ ವಿಸ್ತರಿಸುತ್ತದೆ.

'ಪ್ಲೇ ಹಾರ್ಡ್. ರೆಸ್ಟ್ ಈಸಿ' ಮೂಲಕ ಕ್ರೋಕ್ಸ್ ಆಧುನಿಕ ಕ್ರೀಡೆಯನ್ನು ವ್ಯಾಖ್ಯಾನಿಸುವ ಆಚರಣೆಗಳನ್ನು ಕಂಡುಕೊಳ್ಳುತ್ತದೆ. ಸ್ಪರ್ಧೆಯ ತೀವ್ರತೆ, ಶಿಸ್ತು ಮತ್ತು ಗಮನಕ್ಕೆ ಆದ್ಯತೆ ನೀಡುತ್ತಿದ್ದು ಈ ಅಭಿಯಾನವು ಸಿದ್ಧತೆ, ಪ್ರಯಾಣ, ಚೇತರಿಕೆ ಮತ್ತು ವಿಶ್ರಾಂತಿಯ ಮುಂಚೆ ಮತ್ತು ನಂತರದ ಪ್ರಮುಖ ಕ್ಷಣಗಳನ್ನು ಸಂಭ್ರಮಿಸುತ್ತಿದ್ದು ಅದರಲ್ಲಿ ಸೌಖ್ಯ ಮತ್ತು ಸ್ವಯಂ-ಅಭಿವ್ಯಕ್ತಿ ಕೇಂದ್ರ ಸ್ಥಾನ ಪಡೆದುಕೊಳ್ಳುತ್ತವೆ. ಈ ಆಚರಣೆಗಳ ಕೇಂದ್ರದಲ್ಲಿ ಕ್ರೋಕ್ಸ್ ನ ಐಕಾನಿಕ್ ಕ್ಲಾಸಿಕ್ ಕ್ಲಾಗ್ಸ್ ಇದ್ದು ಇದನ್ನು ಕ್ರೀಡಾಪಟುಗಳಿಗೆ ಕಾರ್ಯಕ್ಷಮತೆ ಮತ್ತು ಡೌನ್ ಟೈಮ್ ನಡುವೆ ಪರಿವರ್ತನೆ ನೀಡುವ ಹಗುರ ಸೌಖ್ಯ ಮತ್ತು ವೈವಿಧ್ಯಮಯ ಸ್ಟೈಲ್ ನೀಡಲು ವಿನ್ಯಾಸಗೊಳಿಸಲಾಗಿದೆ. ರಾಹುಲ್ ಅವರನ್ನು ಬ್ರಾಂಡ್ ತತ್ವಗಳನ್ನು ಬಿಂಬಿಸುವ ಅವರ ಆಫ್-ಫೀಲ್ಡ್ ಸ್ಟೈಲ್ ಮತ್ತು ಸುಲಭ ವಿಶ್ವಾಸಕ್ಕೆ ಹೊಂದಿದ್ದು ಈ ಅಭಿಯಾನವು ಕ್ರೋಕ್ಸ್ ಅನ್ನು ಸಂಗಾತಿಯಾಗಿಸುತ್ತದೆ.

# ಮಹಿಳಾ ದಿನಾಚರಣೆ ಅಂಗವಾಗಿ ಕಿಸ್ನಾ ವತಿಯಿಂದ ಸಾಮಾಜಿಕ ಸೇವಾ ಕಾರ್ಯಕ್ರಮ




ಬೆಂಗಳೂರು

ಹರಿ ಕೃಷ್ಣ ಗ್ರೂಪ್‌ನ ಕಿಸ್ನಾ ವಜ್ರ ಮತ್ತು ಚಿನ್ನದ ಆಭರಣಗಳು ಬೆಂಗಳೂರಿನ ಬನಶಂಕರಿ 3ನೇ ಹಂತದಲ್ಲಿ ವಿಶೇಷ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿತು. ಸ್ತ್ರೀತ್ವವನ್ನು ಗೌರವಿಸುವುದರ ಜೊತೆಗೆ ಸಮಾಜಮುಖಿ ಕಾರ್ಯಗಳಿಗೆ ಒತ್ತು ನೀಡಿದ ಈ ಕಾರ್ಯಕ್ರಮವು ಅರ್ಥಪೂರ್ಣತೆಯಿಂದ ಕೂಡಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಇಸ್ರೋ ವಿಶೇಷ ಯೋಜನೆಗಳ ನಿರ್ದೇಶಕಿ ಡಾ. ಗೀತಾ ವರ್ಧನ್ ಆಗಮಿಸಿ ಕಾರ್ಯಕ್ರಮಕ್ಕೆ ವಿಶಿಷ್ಟ ಮೆರುಗು ನೀಡಿದರು. ತಮ್ಮ ಪ್ರೇರಣಾದಾಯಕ ಭಾಷಣದಲ್ಲಿ ಅವರು ಮಹಿಳಾ ಸಬಲೀಕರಣದ ಮಹತ್ವವನ್ನು ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರ ಪಾತ್ರವನ್ನು ಒತ್ತಿಹೇಳಿದರು.

ಈ ಉಪಕ್ರಮವು ಗ್ರಾಹಕರು, ಸ್ಥಳೀಯ ಸಮುದಾಯದ ಸದಸ್ಯರು ಮತ್ತು ಪಾಲುದಾರರನ್ನು ಒಂದೇ ವೇದಿಕೆಗೆ ತರಲು ಸಹಕಾರಿಯಾಯಿತು. ಮಹಿಳೆಯರ ಸಬಲೀಕರಣ, ಆರೈಕೆ ಮತ್ತು ಸಮುದಾಯ ಕಲ್ಯಾಣದ ಕುರಿತಾಗಿ ಸ್ಫೂರ್ತಿದಾಯಕ ವಾತಾವರಣ ನಿರ್ಮಾಣವಾಯಿತು.

ರಕ್ತದಾನ ಶಿಬಿರ: ಜೀವ ರಕ್ಷಣೆಗಾಗಿ ಹಾಗೂ ಆರೋಗ್ಯ ಸೇವೆಗೆ ಬೆಂಬಲವಾಗಿ ಜನರನ್ನು ರಕ್ತದಾನಕ್ಕೆ ಪ್ರೇರೇಪಿಸಲಾಯಿತು.

ಮರ ನೆಡುವ ಕಾರ್ಯಕ್ರಮ: ಪರಿಸರ ಸಂರಕ್ಷಣೆ ಮತ್ತು ಹಸಿರು ಭವಿಷ್ಯಕ್ಕಾಗಿ ಮರ ನೆಡುವ ಮೂಲಕ ಜಾಗೃತಿ ಮೂಡಿಸಲಾಯಿತು.

ಈ ಎಲ್ಲಾ ಚಟುವಟಿಕೆಗಳು ಕಿಸ್ನಾ ಸಂಸ್ಥೆಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಬದ್ಧತೆಯನ್ನು ಸ್ಪಷ್ಟಪಡಿಸಿತು. ಆಚರಣೆಯನ್ನು ಕೇವಲ ಹಬ್ಬದ ಮಟ್ಟಕ್ಕೆ ಸೀಮಿತಗೊಳಿಸದೆ, ಸಮಾಜಕ್ಕೆ ಹಿಂತಿರುಗಿಸುವ ಮಹತ್ವದ ಪ್ರಯತ್ನವಾಗಿ ರೂಪುಗೊಂಡಿತು.

ಈ ಕುರಿತು ಮಾತನಾಡಿದ ಕಿಸ್ನಾ ದಕ್ಷಿಣ ವಲಯ ವ್ಯವಹಾರ ಮುಖ್ಯಸ್ಥ ಸಂತೋಷ್ ಶರ್ಮಾ, "ನಾವು ಕೇವಲ ಆಚರಣೆಗಷ್ಟೇ ಸೀಮಿತವಾಗದೇ, ಸಮಾಜದಲ್ಲಿ ಅರ್ಥಪೂರ್ಣ ಬದಲಾವಣೆ ತರಲು ಬದ್ಧರಾಗಿದ್ದೇವೆ. ಮಹಿಳಾ ದಿನದಂದು ಮಹಿಳೆಯರ ಶಕ್ತಿಯನ್ನು ಗೌರವಿಸುವ ಜೊತೆಗೆ ಸಮಾಜಮುಖಿ ಉಪಕ್ರಮಗಳ ಮೂಲಕ ನಮ್ಮ ಕೊಡುಗೆಯನ್ನು ನೀಡುವುದು ನಮ್ಮ ಗುರಿ" ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉತ್ಸಾಹಭರಿತವಾಗಿ ಜನರು ಭಾಗವಹಿಸಿದ್ದು, ಜವಾಬ್ದಾರಿಯುತ ಹಾಗೂ ಸಮಾನತೆಯ ಆಧಾರಿತ ಸಮಾಜ ನಿರ್ಮಾಣದತ್ತ ಕಿಸ್ನಾ ಸಂಸ್ಥೆಯ ದೃಷ್ಟಿಕೋನವನ್ನು ಮತ್ತಷ್ಟು ಬಲಪಡಿಸಿತು.

# ಮಧುಮೇಹ ಚಿಕಿತ್ಸೆಯಲ್ಲಿ ಕೈಗೆಟುಕುವ ಹೊಸ ಹೆಜ್ಜೆ

Glenmark
A new way for a new world

ಬೆಂಗಳೂರು

ಗ್ಲೆನ್‌ಮಾರ್ಕ್ ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್ ಎಂಬ ಸಂಶೋಧನೆ ಆಧಾರಿತ ಜಾಗತಿಕ ಔಷಧ ಕಂಪನಿಯು ಭಾರತದಲ್ಲಿ ಟೈಪ್ 2 ಮಧುಮೇಹ ನಿರ್ವಹಣೆಗೆ ಗ್ಲಿಪಿಕ್ (ಸೆಮಾಗ್ಲುಟೈಡ್) ಅನ್ನು ಬಿಡುಗಡೆ ಮಾಡಿದೆ. ಈ ಮೂಲಕ ಜಿಎಲ್ಪಿ-1 ಚಿಕಿತ್ಸೆಯನ್ನು ಕಡಿಮೆ ವೆಚ್ಚದಲ್ಲಿ ಜನರಿಗೆ ತಲುಪಿಸುವ ಮಹತ್ವದ ಪ್ರಯತ್ನ ಮಾಡಲಾಗಿದೆ. ಇದುವರೆಗೆ ಉನ್ನತ ಮಟ್ಟದ ಇಂಜೆಕ್ಟೇಬಲ್ ಚಿಕಿತ್ಸೆ ಪಡೆಯಲು ಹೆಚ್ಚಿನ ವೆಚ್ಚ ಮತ್ತು ಪ್ರಕ್ರಿಯೆಯ ಸಂಕೀರ್ಣತೆ ರೋಗಿಗಳಿಗೆ ಅಡ್ಡಿಯಾಗುತ್ತಿತ್ತು. ಈ ಕಾರಣದಿಂದ ಅನೇಕರು ಚಿಕಿತ್ಸೆ ಆರಂಭಿಸುವುದನ್ನು ಮುಂದೂಡುತ್ತಿದ್ದರು. ಆದರೆ ಗ್ಲಿಪಿಕ್ ಬಿಡುಗಡೆಗೊಂಡ ಹಿನ್ನೆಲೆಯಲ್ಲಿ ಈ ಸಮಸ್ಯೆಗೆ ಪರಿಹಾರ ಸಿಕ್ಕಂತಾಗಿದೆ. ಇದು ರೋಗಿಗಳಿಗೆ ಆರಂಭಿಕ ಹಂತದಲ್ಲೇ ಚಿಕಿತ್ಸೆ ಪಡೆಯಲು ಸಹಕಾರಿಯಾಗಲಿದೆ.

ಈ ಔಷಧವು ವೈಯಲ್ ಮತ್ತು ಪೂರ್ವ ಭರಿತ ಪೆನ್ ರೂಪಗಳಲ್ಲಿ ಲಭ್ಯವಿದ್ದು, ವೈದ್ಯರ ಸಲಹೆಯ ಮೇರೆಗೆ ರೋಗಿಯ ಅವಶ್ಯಕತೆಗೆ ಅನುಗುಣವಾಗಿ ಡೋಸ್ ನಿಗದಿ ಮಾಡಬಹುದು. ಭಾರತದಲ್ಲಿ ನಡೆದ ಹಂತ-3 ಕ್ಲಿನಿಕಲ್ ಅಧ್ಯಯನಗಳ ನಂತರ ಈ ಔಷಧಕ್ಕೆ ಕೇಂದ್ರ ಔಷಧ ಮಾನದಂಡ ನಿಯಂತ್ರಣ ಸಂಸ್ಥೆಯಿಂದ ಅನುಮೋದನೆ ದೊರೆತಿದೆ. ಅಧ್ಯಯನದಲ್ಲಿ ಈ ಔಷಧವು ಪರಿಣಾಮಕಾರಿಯಾಗಿದೆ ಮತ್ತು ಸುರಕ್ಷಿತವಾಗಿದೆ ಎಂಬುದು ದೃಢಪಟ್ಟಿದೆ.

ಗ್ಲಿಪಿಕ್‌ನ ಪ್ರಮುಖ ವಿಶೇಷತೆ ಎಂದರೆ ಅದರ ವೈಯಲ್ ಆಧಾರಿತ ವಿನ್ಯಾಸ. ಡೋಸ್ ನಿರ್ದಿಷ್ಟ ಸಿರಿಂಜ್‌ಗಳೊಂದಿಗೆ ಇದನ್ನು ರೂಪಿಸಲಾಗಿದ್ದು, ಚಿಕಿತ್ಸೆ ಪ್ರಕ್ರಿಯೆಯನ್ನು ಸುಲಭಗೊಳಿಸುತ್ತದೆ. ರೋಗಿಯ ಸ್ಥಿತಿಗೆ ಅನುಗುಣವಾಗಿ ಡೋಸ್ ಬದಲಾಯಿಸಲು ಸಾಧ್ಯವಾಗುವುದರಿಂದ ಇದು ವೈದ್ಯಕೀಯವಾಗಿ ಸಹಾಯಕವಾಗಿದೆ. ವಿಶೇಷವಾಗಿ ಆರಂಭಿಕ ಹಂತಗಳಲ್ಲಿ ಈ ಲವಚಿಕತೆ ಬಹಳ ಉಪಯುಕ್ತವಾಗಿದೆ.

ಇದರೊಂದಿಗೆ, ಗ್ಲಿಪಿಕ್ ಚಿಕಿತ್ಸೆ ವಾರಕ್ಕೆ ಸುಮಾರು ರೂ. 325 ರಿಂದ ರೂ. 440 ರವರೆಗೆ ಲಭ್ಯವಾಗಲಿದೆ. ಇದು ಮಧುಮೇಹ ಚಿಕಿತ್ಸೆಯಲ್ಲಿ ಪ್ರಮುಖ ಅಡೆತಡೆಯಾದ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಹೀಗಾಗಿ ಹೆಚ್ಚಿನ ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ಕೈಗೆಟುಕುವಂತಾಗುತ್ತದೆ.

ಒಟ್ಟಾರೆ, ಗ್ಲಿಪಿಕ್ ಬಿಡುಗಡೆ ಭಾರತದಲ್ಲಿ ಮಧುಮೇಹ ನಿರ್ವಹಣೆಯಲ್ಲಿ ಹೊಸ ದಿಕ್ಕನ್ನು ತೋರಿಸಿದೆ. ಕಡಿಮೆ ವೆಚ್ಚದಲ್ಲಿ ಪರಿಣಾಮಕಾರಿ ಮತ್ತು ಸುಲಭವಾಗಿ ಬಳಸಬಹುದಾದ ಈ ಚಿಕಿತ್ಸೆ ರೋಗಿಗಳ ಜೀವನಮಟ್ಟವನ್ನು ಸುಧಾರಿಸುವಲ್ಲಿ ಮಹತ್ವದ ಪಾತ್ರವಹಿಸುವ ನಿರೀಕ್ಷೆಯಿದೆ.



ಸಚಿವ ಜಮೀರ್ ಅಹಮದ್ ಖಾನ್ ಅವರು ಚಾಮರಾಜಪೇಟೆ ಈದ್ಗ ಮೈದಾನ ದಲ್ಲಿ ರಂಜಾನ್ ಪ್ರಾರ್ಥನೆ ಯಲ್ಲಿ ಪಾಲ್ಗೊಂಡರು. ನಟ ಜೈದ್ ಖಾನ್ ಉಪಸ್ಥಿತರಿದ್ದರು.

# ಮಹಿಳೆಯರ ಕ್ಯಾನ್ಸರ್ ಜಾಗೃತಿ ಹೆಚ್ಚಿಸಲು 'ಪೌಲಥಾನ್ 2026'ಗೆ ಬೆಂಬಲ

ಬೆಂಗಳೂರು

ನಗರದ ಪ್ರಮುಖ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆಯಾದ ಪ್ರಕ್ರಿಯ ಆಸ್ಪತ್ರೆಗಳು ಮಹಿಳೆಯರಲ್ಲಿ ಕ್ಯಾನ್ಸರ್ ಜಾಗೃತಿ ಹೆಚ್ಚಿಸುವ ಉದ್ದೇಶದಿಂದ 'ಪೌಲಥಾನ್ 2026' ಕಾರ್ಯಕ್ರಮಕ್ಕೆ ಕೈಜೋಡಿಸಿದೆ. 3 ಕಿಮೀ ವಾಕಥಾನ್ ಮತ್ತು ಉಚಿತ ಆರೋಗ್ಯ ಶಿಬಿರವನ್ನು ಒಳಗೊಂಡ ಈ ಕಾರ್ಯಕ್ರಮವು ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವಿಕೆ ಹಾಗೂ ಆರಂಭಿಕ ಪತ್ತೆಯ ಮಹತ್ವವನ್ನು ಜನರಲ್ಲಿ ಬಿತ್ತರಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಪ್ರಕ್ರಿಯ ಆಸ್ಪತ್ರೆಗಳ ಆವರಣದಲ್ಲಿ ನಡೆದ ಈ ನಡಿಗೆ ಕಾರ್ಯಕ್ರಮದಲ್ಲಿ ಕುಟುಂಬಗಳು, ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಹಿರಿಯರು ಉತ್ಸಾಹದಿಂದ ಭಾಗವಹಿಸಿ ಮಹಿಳೆಯರ ಆರೋಗ್ಯಕ್ಕಾಗಿ ಒಗ್ಗಟ್ಟಿನ ಸಂದೇಶ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಾಜಿ ಭಾರತೀಯ ಕ್ರೀಡಾಪಟು ಹಾಗೂ ಅರ್ಜುನ ಪ್ರಶಸ್ತಿ ಪುರಸ್ಕೃತೆ ಕೆ.ಸಿ. ರೋಸಕುಟ್ಟಿ ತಮ್ಮ ಜೀವನಾನುಭವಗಳನ್ನು ಹಂಚಿಕೊಂಡು, ಕ್ಯಾನ್ಸರ್ ವಿರುದ್ಧ ಹೋರಾಡಲು ನಿಯಮಿತ ತಪಾಸಣೆ ಮತ್ತು ಸಮುದಾಯ ಬೆಂಬಲ ಅತ್ಯಗತ್ಯವೆಂದು ತಿಳಿಸಿದರು. ಈ ಸಂದರ್ಭದಲ್ಲಿ ಆಯೋಜಿಸಲಾದ ಉಚಿತ ಆರೋಗ್ಯ ಶಿಬಿರವು ಎಲ್ಲಾ ವಯಸ್ಸಿನ ಜನರಿಗೆ ಸೇವೆ



ಸಲ್ಲಿಸಿ, ಜಾಗೃತಿ ಮತ್ತು ತಡೆಗಟ್ಟುವ ಆರೈಕೆ ಸೇವೆಗಳ ಪ್ರಾಮುಖ್ಯತೆಯನ್ನು ಹತ್ತಿರದಿಂದ ಪರಿಚಯಿಸಿತು. ಇದರಿಂದ ಸಮುದಾಯ ಆರೋಗ್ಯದ ದಿಕ್ಕಿನಲ್ಲಿ ಒಟ್ಟುಗೂಡಿದ ಪ್ರಯತ್ನಗಳ ಅಗತ್ಯತೆ ಮತ್ತೊಮ್ಮೆ ಎತ್ತಿ ತೋರಿಸಲಾಯಿತು. ಈ ಕುರಿತು ಮಾತನಾಡಿದ ಪ್ರಕ್ರಿಯ ಆಸ್ಪತ್ರೆಗಳ ಎಂ.ಬಿ.ಬಿ.ಎಸ್., ಎಂ.ಡಿ. (ವಿಕಿರಣ ಆಂಕೊಲಾಜಿ), ಡಿ.ಎಂ. (ವೈದ್ಯಕೀಯ ಆಂಕೊಲಾಜಿ) ತಜ್ಞರಾದ ಡಾ. ಮೌನಿಕಾ ರೆಡ್ಡಿ ಸಿ ಅವರು, "ಪೌಲಥಾನ್ 2026 ಕೇವಲ ನಡಿಗೆ ಕಾರ್ಯಕ್ರಮವಲ್ಲ; ಇದು ಮಹಿಳೆಯರಲ್ಲಿ ಕ್ಯಾನ್ಸರ್ ತಡೆಗಟ್ಟುವಿಕೆ ಮತ್ತು ಆರಂಭಿಕ ಪತ್ತೆಗೆ ಮಹತ್ವದ ಹೆಜ್ಜೆ. ಪ್ರಕ್ರಿಯದಲ್ಲಿ ನಾವು ಪುರಾವೆ ಆಧಾರಿತ, ಸಹಾನುಭೂತಿಯ ಆಂಕೊಲಾಜಿ ಆರೈಕೆಯನ್ನು ನೀಡುತ್ತಿದ್ದು, ಯಾವುದೇ ಮಹಿಳೆ ಈ ಹೋರಾಟವನ್ನು ಒಂಟಿಯಾಗಿ ಎದುರಿಸಬೇಕಾಗಿಲ್ಲ" ಎಂದು ಹೇಳಿದರು.

ಪ್ರಕ್ರಿಯ ಆಸ್ಪತ್ರೆಗಳು ಸಮುದಾಯ ಆರೋಗ್ಯ ಅಭಿಯಾನಗಳು, ಕಿಮೋಥೆರಪಿ, ಉದ್ದೇಶಿತ ಚಿಕಿತ್ಸೆ ಹಾಗೂ ಉಪಶಾಮಕ ಆರೈಕೆ ಸೇರಿದಂತೆ ಸಮಗ್ರ ಕ್ಯಾನ್ಸರ್ ಚಿಕಿತ್ಸಾ ಸೇವೆಗಳನ್ನು ಒದಗಿಸುವಲ್ಲಿ ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ. ಮಹಿಳೆಯರ ಆರೋಗ್ಯ ರಕ್ಷಣೆಗಾಗಿ ಇಂತಹ ಕಾರ್ಯಕ್ರಮಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ವ್ಯಾಪಕವಾಗಿ ನಡೆಯಲಿವೆ ಎಂಬ ವಿಶ್ವಾಸ ವ್ಯಕ್ತಪಡಿಸಲಾಗಿದೆ.

# ಶಾಂತಿ ಮತ್ತು ಸೌಹಾರ್ದತೆ ಸಂದೇಶ ಸಾರುವ ಮುಸ್ಲಿಮರ ಪವಿತ್ರ ರಂಜಾನ್

ಬಾಗೇಪಲ್ಲಿ

ಶಾಂತಿ , ಸೌಹಾರ್ದತೆ ಸಂದೇಶ ಸಾರುವ ಮುಸ್ಲಿ ಮರ ಪವಿತ್ರ ರಂಜಾನ್ ಹಬ್ಬವನ್ನು ಪಟ್ಟಣದೆಲ್ಲೆಡೆ ಶನಿವಾರ ಸಂಭ್ರಮ-ಸಡಗರ ದೊಂದಿಗೆ ಶ್ರದ್ಧಾ ಭಕ್ತಿಗಳಿಂದ ಆಚರಿಸಲಾಯಿತು.

ಒಂದು ತಿಂಗಳ ಕಾಲ ಉಪವಾಸ ಆಚರಿಸಿದ ಮುಸ್ಲಿಂ ಸಮಾಜದವರು ಶನಿವಾರ ಬೆಳಿಗ್ಗೆ 9 ಗಂಟೆಗೆ ನಡೆದ ಈದ್ ಆಚರಣೆಯ ಸಾಮೂಹಿಕ ಪ್ರಾರ್ಥನೆಯಲ್ಲಿ ನಮಾಜ್ ಮಾಡಿ ರಂಜಾನ್ ಹಬ್ಬಕ್ಕೆ ತೆರೆ ಎಳೆದರು. ಮೌಲ್ವಿಗಳು ಕುರಾನ್ ಪಠಣ ಮಾಡಿದರು. ಸಾಮೂಹಿಕ ಪ್ರಾರ್ಥನೆ ನಂತರ ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು ಪಟ್ಟಣದ ಕೂಡಿಕೊಂಡೆ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಸಾಮೂಹಿಕ ಪಾರ್ಥನೆ ಸಲ್ಲಿಸುವ ಮೂಲಕ ಪವಿತ್ರ ರಂಜಾನ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಇಲ್ಲಿನ ಈದ್ಗಾ ಮೈದಾನದ ರಂಜಾನ್ ಪ್ರಾರ್ಥನೆಯಲ್ಲಿ ಪಾಲ್ಗೊಂಡ ನಂತರ ಬಾಗೇಪಲ್ಲಿ ವಿಧಾನ ಸಭೆ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಮಾತನಾಡಿ

ಮುಸ್ಲಿಂ ಸಮುದಾಯದ ಪವಿತ್ರ ರಂಜಾನ್ ಹಬ್ಬ ಮಾನವೀಯತೆಯ ಸಂಕೇತವಾಗಿದೆ. ಶ್ರೀಮಂತ, ಬಡವ ಎಂಬುದನ್ನು ಮರೆತು ಎಲ್ಲರೂ ಒಂದೇ ಎಂಬುದನ್ನು ಅರ್ಥ ಮಾಡಿಕೊಂಡು ಬದುಕು ಸಾಗಿಸುವ ಪವಿತ್ರ ಹಬ್ಬವಾಗಿದೆ. ರಂಜಾನ್ ಹಬ್ಬದೊಂದಿಗೆ ಸಮಾಜ ದಲ್ಲಿ ಶಾಂತಿ ನೆಲೆಸಿ, ಪ್ರತಿಯೊಬ್ಬರು ಪರಸ್ಪರ ಬೆರೆತು ಹಬ್ಬವನ್ನು ಆಚರಿಸುವ ಜೊತೆಗೆ, ಎಲ್ಲರೂ ಪ್ರೀತಿ, ನೆಮ್ಮದಿಯಿಂದ ಬದುಕುವ



ಚಿಂತನೆಯೊಂದಿಗೆ ಹಬ್ಬವನ್ನು ಆಚರಿಸಲಿ ಎಂದು ಹಾರೆಸಿದರು.

ರಂಜಾನ್‌ನ ಅತ್ಯಂತ ಸುಂದರ ಅಂಶವೆಂದರೆ ದಾನ. ತಾನು ಗಳಿಸಿದ ಸಂಪತ್ತಿನಲ್ಲಿ ಒಂದು ಭಾಗವನ್ನು ಬಡವರಿಗೆ ನೀಡುವ ಝುಕಾತ್ ಪದ್ಧತಿ ಸಮಾಜದಲ್ಲಿ ಆರ್ಥಿಕ ಸಮತೋಲನವನ್ನು ಬೆಳೆಸುತ್ತದೆ. ಹಸಿದವನಿಗೆ ಅನ್ನ ನೀಡುವುದು, ಸಂಕಷ್ಟದಲ್ಲಿ ರುವವರಿಗೆ ನೆರವಾಗುವುದು,

ಪವಿತ್ರ ರಂಜಾನ್ ಶಾಂತಿ, ಸಹನೆ ತಾಳ್ಮೆ, ಪ್ರೀತಿ ಹಾಗೂ ಕರುಣೆಯ ತಿಂಗಳಾಗಿದೆ

ಭೂಮಿಯ ಮೇಲೆ ಬದುಕಿರುವಷ್ಟು ದಿನ ಒಳ್ಳೆಯ ಕಾರ್ಯಗಳನ್ನು ಮಾಡಬೇಕು. ಎಲ್ಲ ಧರ್ಮಗಳ ಮೂಲ ಮಂತ್ರ ಶಾಂತಿ ಮತ್ತು ಪ್ರೀತಿಯೇ ಆಗಿದೆ ಅದನ್ನು ತಿಳಿದುಕೊಳ್ಳುವ ಪ್ರಯತ್ನ ನಾವೆಲ್ಲರೂ ಮಾಡಬೇಕಾಗಿದೆ ಎಂದರು.

ಚಿಮುಲ್ ಅಧ್ಯಕ್ಷ ಪಿ.ಮಂಜುನಾಥ್ ರೆಡ್ಡಿ ಮಾತನಾಡಿ ರಂಜಾನ್ ತಿಂಗಳಲ್ಲಿ ಮುಸ್ಲಿಮರ ಪವಿತ್ರ ಧರ್ಮಗ್ರಂಥ ಕುರಾನ್ ಪಠಣ ಮಾಡುವುದರಿಂದ ಮನಸ್ಸಿನಲ್ಲಿ ಕಲ್ಮಶಗಳನ್ನು ದೂರವಾಗುತ್ತದೆ ಅಲ್ಲಾಹನನ್ನು ಮನದಲ್ಲಿ ನೆನೆದು ಸಮಾಜದಲ್ಲಿ ಶಾಂತಿ ,ನೆಮ್ಮದಿಯಿಂದ ನಾವೆಲ್ಲರು ಒಂದೇ ಎನ್ನುವ ತತ್ವದ ಅಡಿಯಲ್ಲಿ ಜೀವನ ಸಾಗಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.ದುಡಿದುದರಲ್ಲಿ ದಾನ,ಧರ್ಮ ಮಾಡುವುದರಿಂದ ಜೀವನದಲ್ಲಿ ನೆಮ್ಮದಿ ದೊರೆಯಲಿದೆ ಎಂದರು.

ಮಾನವೀಯತೆ, ಸಹನೆ ಮತ್ತು ದೈವಭಕ್ತಿಯ ಸಂಕೇತವಾಗಿರುವ ರಂಜಾನ್ ಕೇವಲ ಮುಸ್ಲಿಂ ಸಮುದಾಯದ ಹಬ್ಬವಲ್ಲ; ಅದು ಶಿಸ್ತು, ಆತ್ಮಾವಲೋಕನ ಮತ್ತು ಮೌಲ್ಯಗಳ ಪುನರ್ ಸ್ಥಾಪನೆಯ ಮಹಾನ್ ಕಾಲಘಟ್ಟ. ಇಸ್ಲಾಮಿಕ್ ಕ್ಯಾಲೆಂಡರ್ ನ ಒಂಬತ್ತನೇ ತಿಂಗಳಾದ ಈ ಮಾಸವು ಮನುಷ್ಯನ ದೇಹ, ಮನಸ್ಸು ಮತ್ತು ಆತ್ಮವನ್ನು ಸಮತೋಲನದಲ್ಲಿ ರೂಪಿಸುವ ಅಪೂರ್ವ ಅವಕಾಶವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆ.ಡಿ.ಪಿ. ಸದಸ್ಯ ಪಿ. ಮಂಜುನಾಥರೆಡ್ಡಿ, ರಿಜ್ವಾನ್ ಸಾಬ್, ಪುರಸಭೆ ಸಧಸ್ಯರಾದ ಜಬೀವುಲ್ಲಾ, ಸರ್ದಾರ್ ಪಾಷ, ಮಹ್ಮದ್ ನೂರುಲ್ಲಾ, ನಿಜಾಮುದ್ದಿನ್ ಬಾಬು, ಮನ್ಸೂರ್, ಮಹ್ಮದ್ ಅಕ್ರಮ್, ಅಬ್ದುಲ್ ರೆಹಮಾನ್, ಗಫೂರ್, ಸಾದೀಕ್, ಜಬೀರ್, ಅಂಜಾದ್, ಸೇರಿದಂತೆ ಹಲವಾರು ಪ್ರಮುಖರು ಭಾಗವಹಿಸಿದ್ದರು.

## ಸಮರ್ಪಕ ಸಿಲಿಂಡರ್ ವಿತರಣೆಗೆ ಕಾಂಗ್ರೆಸ್ ಪ್ರತಿಭಟನೆ



ಬಳ್ಳಾರಿ

ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್‌ಗಳ ಕೊರತೆಯಿಂದ ಸಾರ್ವಜನಿಕರು ಹಾಗೂ ವಾಣಿಜ್ಯ ವಲಯಗಳು ಸಂಕಷ್ಟಕ್ಕೆ ಸಿಲುಕಿದ್ದು ಸಮರ್ಪಕವಾಗಿ ಅಡಿಗೆ ಅನಿಲ ವಿತರಣೆ ಮಾಡಬೇಕೆಂದು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ರಾಯಲ್ ಸರ್ಕಲ್ ನ ಗಡಿಯಾರ ಗೋಪುರದ ಬಳಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಲ್ಲಂ ಪ್ರಶಾಂತ್ ನೇತೃತ್ವದಲ್ಲಿ ಪಕ್ಷದ ಮುಖಂಡರು, ಮಹಿಳಾ ಘಟಕದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ಲಂ ಪ್ರಶಾಂತ್ ಅವರು, ಕೇಂದ್ರ ಸರ್ಕಾರವು ಉಚಿತ ಸಿಲಿಂಡರ್ ಸಂಪರ್ಕಗಳನ್ನು ನೀಡಿದರೂ ಜನರಿಗೆ ಅಗತ್ಯವಿರುವಷ್ಟು ಅಡುಗೆ ಅನಿಲವನ್ನು ಸಮರ್ಪಕವಾಗಿ ಪೂರೈಕೆ ಮಾಡಲು ವಿಫಲವಾಗಿದೆ. ದೇಶವನ್ನು 'ವಿಶ್ವಗುರು' ಎಂದು ಹೇಳಿಕೊಳ್ಳುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಸಾಮಾನ್ಯ ನಾಗರಿಕರ ಮೂಲಭೂತ ಅಗತ್ಯಗಳಾದ ಅಡುಗೆ ಅನಿಲ ಪೂರೈಕೆಯನ್ನೇ ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಟೀಕಿಸಿದರು.

ಸಿಲಿಂಡರ್ ಕೊರತೆಯಿಂದ ಗೃಹ ಬಳಕೆದಾರರು ಮಾತ್ರವಲ್ಲದೆ ಹೋಟೆಲ್‌ಗಳು ಹಾಗೂ ಇತರೆ ವಾಣಿಜ್ಯ ಉದ್ಯಮಗಳೂ ತೀವ್ರ ಸಂಕಷ್ಟಕ್ಕೆ ಸಿಲುಕಿವೆ. ಹಲವೆಡೆ ಗೃಹ ಬಳಕೆಯ ಸಿಲಿಂಡರ್‌ಗಳು ಲಭ್ಯವಾಗದೇ ಜನರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೇಂದ್ರ ಸರ್ಕಾರ ತಕ್ಷಣವೇ ದೇಶದಾದ್ಯಂತ ಅಡುಗೆ ಅನಿಲ ಸರಬರಾಜು ವ್ಯವಸ್ಥೆಯನ್ನು ಸುಧಾರಿಸಿ, ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಬೇಕು. ಅಗತ್ಯವಿದ್ದರೆ ಹೆಚ್ಚುವರಿ ಸಿಲಿಂಡರ್ ಪೂರೈಕೆ ವ್ಯವಸ್ಥೆ ಮಾಡಬೇಕು. ವಿತರಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂದು ಕಾಂಗ್ರೆಸ್ ಮುಖಂಡರು ಒತ್ತಾಯಿಸಿದರು.

ಪ್ರತಿಭಟನೆ ವೇಳೆ ಕಾರ್ಯಕರ್ತರು, ಮಹಿಳಾ ಮುಖಂಡರು ಅಡುಗೆ ಅನಿಲ ಕೊರತೆಯಿಂದ ಗೃಹಿಣಿಯರು ಎದುರಿಸುತ್ತಿರುವ ಸಂಕಷ್ಟಗಳನ್ನು ವಿವರಿಸಿ, ತಕ್ಷಣ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿದರು.

ಬಳ್ಳಾರಿ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ, ಬಾಬುಜಗಜೀವನರಾಂ ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್ ಸೇರಿದಂತೆ ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳು, ವಿವಿಧ ಘಟಕಗಳ ಮುಖಂಡರು, ಮಹಿಳಾ ಕಾಂಗ್ರೆಸ್ ಸದಸ್ಯರು ಹಾಗೂ ಸ್ಥಳೀಯ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

## ಸುಣ್ಣ-ಬಣ್ಣದೊಂದಿಗೆ ಮಿನುಗಿದ ಪುರಾತನ ದೇಗುಲ

ಕನಕಪುರ

ತಾಲ್ಲೂಕಿನ ಕಸಬಾ ಹೋಬಳಿಯ ಅರಳಾಳು ಗ್ರಾಮದಲ್ಲಿರುವ ಶತಮಾನಗಳಷ್ಟು ಹಳೆಯದಾದ ಶ್ರೀ ಲಕ್ಷ್ಮಿನಾರಾಯಣ ಸ್ವಾಮಿ ದೇವಾಲಯಕ್ಕೆ ಕೊನೆಗೂ ಜೀರ್ಣೋದ್ಧಾರದ ಭಾಗ್ಯ ಲಭಿಸಿದೆ. ಬೆಂಗಳೂರಿನ ಸನಾತನ ಬ್ರಿಗೇಡ್ ತಂಡ, ಗ್ರಾಮದ ಯುವಕರು ಹಾಗೂ ಸ್ಥಳೀಯರ ಸಹಕಾರದೊಂದಿಗೆ ದೇಗುಲಕ್ಕೆ ಕಾಯಕಲ್ಪ ನೀಡುವ ಶ್ಲಾಘನೀಯ ಕಾರ್ಯ ನಡೆಸಿತು.

ಅನೇಕ ವರ್ಷಗಳಿಂದ ಪೂಜಾ ವಿಧಿವಿಧಾನಗಳಿಲ್ಲದೆ ಬಾಗಿಲು ಹಾಕಿದ್ದ ಈ ಪುರಾತನ ವಿಷ್ಣು ದೇಗುಲವು ಸಂಪೂರ್ಣವಾಗಿ ಗಿಡ–ಗಂಟೆಗಳಿಂದ ಆವೃತವಾಗಿ ಶಿಥಿಲಾವಸ್ಥೆಗೆ ತಲುಪಿತ್ತು. ಈ ಬಗ್ಗೆ ಗಮನಹರಿಸಿದ ಸನಾತನ ಬ್ರಿಗೇಡ್ ತಂಡವು, ಗ್ರಾಮಸ್ಥರೊಂದಿಗೆ ಸೇರಿ ದೇವಸ್ಥಾನದ ಸುತ್ತಲೂ ಬೆಳೆದು ನಿಂತಿದ್ದ ಕಸ–ಕಡ್ಡಿಗಳನ್ನು ಕಿತ್ತು ಸ್ವಚ್ಛಗೊಳಿಸಿದರು. ಅಲ್ಲದೆ, ದೇವಾಲಯಕ್ಕೆ ಸುಣ್ಣ–ಬಣ್ಣ ಬಳಿಯುವ ಮೂಲಕ ಪುರಾತನ ಕಲೆ ಮತ್ತು ಸೌಂದರ್ಯವು ಮರುಕಳಿಸುವಂತೆ ಮಾಡಿದರು.

# ಸಿಲಿಂಡರ್ ಇಲ್ಲದೆ ಸೌದೆ ಒಲೆ ಹಚ್ಚಿದ ಬಿಸಿಯೂಟ ಸಿಬ್ಬಂದಿ

ಪಾವಗಡ

ಅಂತರಾಷ್ಟ್ರೀಯ ಮಟ್ಟದಲ್ಲಿ ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವೆ ನಡೆಯುತ್ತಿರುವ ಮಹಾಯುದ್ಧದ ಕಾರ್ಮೋಡಗಳು ಇದೀಗ ಹಳ್ಳಿಗಾಡಿನ ಬಡ ಮಕ್ಕಳ ಹೊಟ್ಟೆಯ ಮೇಲೆ ಹೊಡೆಯಲಾರಂಭಿಸಿವೆ. ಅಡುಗೆ ಅನಿಲದ ತೀವ್ರ ಅಭಾವದಿಂದಾಗಿ ತಾಲ್ಲೂಕಿನ ಚನ್ನಕೇಶವಪುರ ಮತ್ತು ಹರಿಹರಪುರ ಸರ್ಕಾರಿ ಶಾಲೆಗಳಲ್ಲಿ ಕಳೆದ ಎರಡು ದಿನಗಳಿಂದ ಸೌದೆ ಒಲೆಯಲ್ಲೇ ಅಡುಗೆ ಮಾಡಬೇಕಾದ ದಯನೀಯ ಸ್ಥಿತಿ ನಿರ್ಮಾಣವಾಗಿದೆ.

<u>ಹೊಗೆಯ ನಡುವೆ ಬಿಸಿಯೂಟದ ಸಾಹಸ:</u> ತಾಲ್ಲೂಕಿನ ಈ ಎರಡು ಶಾಲೆಗಳಲ್ಲಿ ಕಳೆದ ಒಂದು ವಾರದಿಂದ ಗ್ಯಾಸ್ ಸಿಲಿಂಡರ್ ಖಾಲಿಯಾಗಿದೆ. ಹೊಸ ಸಿಲಿಂಡರ್‌ಗಳು ಸರಬರಾಜಾಗದ ಕಾರಣ, ಅಡುಗೆ ಸಿಬ್ಬಂದಿ ಅನಿವಾರ್ಯವಾಗಿ ಶಾಲೆಯ ಆವರಣದಲ್ಲಿ ಸೌದೆ ಒಲೆ ಹಚ್ಚಿ ಅಡುಗೆ ಮಾಡುತ್ತಿದ್ದಾರೆ. ಚನ್ನಕೇಶವಪುರ ಶಾಲೆಯಲ್ಲಿ 81 ಹಾಗೂ ಹರಿಹರಪುರ ಶಾಲೆಯಲ್ಲಿ 57 ವಿದ್ಯಾರ್ಥಿಗಳಿದ್ದು, ಇಷ್ಟು ಜನರಿಗೆ ಹೊಗೆಯ ನಡುವೆ ಊಟ ಸಿದ್ಧಪಡಿಸುವುದು ಸಿಬ್ಬಂದಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. “ಹೊಗೆಯಿಂದ ಕಣ್ಣು ಉರಿಯುತ್ತಿದೆ, ಈ ಸ್ಥಿತಿಯಲ್ಲಿ ಮಕ್ಕಳಿಗೆ ಊಟ



ಮಾಡಿಸುವುದು ಸಾಹಸದ ಕೆಲಸವಾಗಿದೆ” ಎಂದು ಅಡುಗೆ ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ.

<u>ಏಜೆನ್ಸಿಗಳ 'ಕಳ್ಳಾಟ'ಕ್ಕೆ ಆಕ್ರೋಶ:</u> ಜಿಲ್ಲಾಧಿಕಾರಿಗಳು ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರೂ, ಗ್ಯಾಸ್ ಏಜೆನ್ಸಿಗಳು ಇದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂಬ ಆರೋಪ ಕೇಳಿಬಂದಿದೆ. ಪರೀಕ್ಷೆಯ ಸಮಯದಲ್ಲೇ ಇಂತಹ ಮೂಲಭೂತ ಸೌಕರ್ಯದ ಕೊರತೆ ಉಂಟಾಗಿರುವುದು ಶಾಲಾ ಆಡಳಿತ ಮಂಡಳಿ ಮತ್ತು ಪೋಷಕರನ್ನು ಆತಂಕಕ್ಕೆ ದೂಡಿದೆ. ಶಿಕ್ಷಕರು ಪರೀಕ್ಷಾ ತಯಾರಿಯಲ್ಲಿ ತೊಡಗಿದ್ದರೆ, ಅತ್ತ ಅಡುಗೆ ಮನೆಯಲ್ಲಿ ಸಿಲಿಂಡರ್ ಇಲ್ಲದೆ ಪರದಾಟ ಶುರುವಾಗಿದೆ.

<u>ವಾರ ಕಳೆದರೂ ಬಾರದ ಸಿಲಿಂಡರ್!</u>
ಕಳೆದ ಒಂದು ವಾರದ ಹಿಂದೆಯೇ ಗ್ಯಾಸ್ ಬುಕ್ಕಿಂಗ್ ಮಾಡಿದ್ದರೂ ಏಜೆನ್ಸಿಗಳು ಸರ್ಕಾರಿ ಶಾಲೆಗಳಿಗೆ ಆದ್ಯತೆ ನೀಡುತ್ತಿಲ್ಲ. ಕೂಡಲೇ ಶಿಕ್ಷಣ ಇಲಾಖೆ ಹಾಗೂ ತಾಲ್ಲೂಕು ಆಡಳಿತ ಮಧ್ಯಪ್ರವೇಶಿಸಿ, ಶಾಲೆಗೆ ಅಡುಗೆ ಅನಿಲದ ವ್ಯವಸ್ಥೆ ಕಲ್ಪಿಸದಿದ್ದರೆ ಪ್ರತಿಭಟನೆ ನಡೆಸುವುದಾಗಿ ಸ್ಥಳೀಯರು ಹಾಗೂ ಪೋಷಕರು ಎಚ್ಚರಿಸಿದ್ದಾರೆ.

# ಸಂಸತ್ತಿನಲ್ಲೂ ಮಹಿಳಾ ಮೀಸಲಾತಿ ಜಾರಿಯಾಗಲಿ: ಪರಂ

ತುಮಕೂರು

“ಸ್ಥಳೀಯ ಸಂಸ್ಥೆಗಳಂತೆ ಸಂಸತ್ತು ಮತ್ತು ವಿಧಾನಮಂಡಲಗಳಲ್ಲೂ ಮಹಿಳೆಯರಿಗೆ ಶೇ. 50ರಷ್ಟು ಮೀಸಲಾತಿ ನೀಡುವ ಮಸೂದೆ ಶೀಘ್ರ ಅನುಮೋದನೆಗೊಳ್ಳಬೇಕು. ಇದರಿಂದ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಶಕ್ತಿ ಸಿಗಲಿದೆ,” ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ. ಪರಮೇಶ್ವರ್ ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



<u>ರಾಜೀವ್ ಗಾಂಧಿ ಕನಸು ನನಸಾಗಿದೆ:</u> ಹಿಂದೆ ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ. 50 ಸ್ಥಾನಮಾನ ನೀಡಿದರು. ಅದರ ಫಲವಾಗಿ ಇಂದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ಅದೇ ಮಾದರಿಯಲ್ಲಿ ಡಾ. ಮನಮೋಹನ್ ಸಿಂಗ್ ಅವರು ಮಂಡಿಸಿದ್ದ ಮಹಿಳಾ ಮೀಸಲಾತಿ ಮಸೂದೆಯನ್ನು ಕೇಂದ್ರ ಸರ್ಕಾರ ಈಗಲಾದರೂ ಅನುಮೋದಿಸಬೇಕು ಎಂದು ಸಚಿವರು ಒತ್ತಾಯಿಸಿದರು.

<u>ಅವಕಾಶಗಳನ್ನು ಸೃಷ್ಟಿಸಿಕೊಳ್ಳಿ:</u> ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಮಾತನಾಡಿ, “ಮಹಿಳೆಯರು ಅವಕಾಶಗಳಿಗಾಗಿ ಕಾದು ಕುಳಿತುಕೊಳ್ಳಬಾರದು, ತಾವೇ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕು. ಜಿಲ್ಲೆಯಲ್ಲಿ ಈಗಾಗಲೇ 1,160 ಕಂದಾಯ ಗ್ರಾಮಗಳನ್ನು ಗುರುತಿಸಲಾಗಿದ್ದು, ಶೀಘ್ರದಲ್ಲೇ 22 ಸಾವಿರ ಹಕ್ಕುಪತ್ರಗಳನ್ನು ವಿತರಿಸಲಾಗುವುದು. ಇದು ನಾವು ಸೃಷ್ಟಿಸಿಕೊಂಡಿರುವ ಕೆಲಸದ ಅವಕಾಶ,” ಎಂದರು. ಅಲ್ಲದೆ ಮಹಿಳೆಯರು ಕೌಟುಂಬಿಕ ಜವಾಬ್ದಾರಿಯ ಜೊತೆಗೆ ತಮ್ಮ ಆರೋಗ್ಯದ ಕಡೆಯೂ ಗಮನ ಹರಿಸಬೇಕು ಎಂದು ಕಿವಿಮಾತು ಹೇಳಿದರು.

<u>ಆರ್ಥಿಕ ಸ್ವಾಲಂಬನೆ ಮುಖ್ಯ:</u> ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷೆ ನ್ಯಾ. ನೂರುನ್ನಿಸಾ ಮಾತನಾಡಿ, “ಮಹಿಳೆ ಪುರುಷರಿಗೆ ಸ್ಪರ್ಧಿಯಾಗುವ ಅಗತ್ಯವಿಲ್ಲ. ತನ್ನ ಆತ್ಮಸಂತೋಷಕ್ಕಾಗಿ ಜವಾಬ್ದಾರಿಗಳನ್ನು ನಿಭಾಯಿಸಬೇಕು. ಸಮಾಜದಲ್ಲಿ ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದರೂ, ಆ ಸ್ವಾಲಂಬನೆಯನ್ನು ಪೂರ್ಣವಾಗಿ ಅನುಭವಿಸುವ ಹಕ್ಕನ್ನು ಪಡೆಯಬೇಕಿದೆ,” ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಸಿಇಒ ಬಿ.ವಿ. ಅಶ್ವಿಜ, ಎಸ್‌ಪಿ ಕೆ.ವಿ. ಅಶೋಕ್, ಪಾಲಿಕೆ ಆಯುಕ್ತೆ ಶುಭ ಸಿ. ಸೇರಿದಂತೆ ಜಿಲ್ಲೆಯ ಹಿರಿಯ ಮಹಿಳಾ ಅಧಿಕಾರಿಗಳು ಮತ್ತು ಸಾಧಕಿಯರನ್ನು ಗೌರವಿಸಲಾಯಿತು.

# 'ಸಾಮಾಜಿಕ ಜವಾಬ್ದಾರಿ ಮರೆಸುವ ಅಶ್ಲೀಲ ಸಿನಿಮಾಗಳನ್ನು ಧಿಕ್ಕರಿಸಿ'

ಬಳ್ಳಾರಿ

ಅಶ್ಲೀಲ ಹಾಗೂ ದ್ವಂದ್ವಾರ್ಥದ ಹಾಡುಗಳಿಗೆ ಕಡಿವಾಣ ಹಾಕದ ಸೆನ್ಸಾರ್ ಮಂಡಳಿ ಹಾಗೂ ಸರ್ಕಾರಗಳ ದಿವ್ಯ ನಿರ್ಲಕ್ಷ್ಯಕೆ ಎಐಡಿವೈಓ ಸಂಘಟನೆ ಖಂಡನೆ ವ್ಯಕ್ತಪಡಿಸಿದೆ.

ಕಲೆಯ ಉದ್ದೇಶ ಅರಿತ ಕೆಲವು ಸದಭಿರುಚಿಯ ಸಿನಿಮಾಗಳು ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ಕೊಟ್ಟರೆ, ಇನ್ನೂ ಕೆಲವು ಸಿನಿಮಾಗಳು ಅಗ್ಗದ ಪ್ರಚಾರಕ್ಕಾಗಿ ಅಶ್ಲೀಲತೆ, ಹಿಂಸೆಯನ್ನು ವೈಭವೀಕರಿಸುತ್ತಿವೆ. ಆದರೆ ಇದರ ವಿರುದ್ಧ ಸದಾ ಧ್ವನಿ ಎತ್ತುವ ಹಲವಾರು ಪ್ರಜ್ಞಾವಂತ ಜನತೆ ವಿರೋಧಿಸುತ್ತಲೇ ಬಂದಿದ್ದಾರೆ. ಅದರಂತೆ ಈಗ ಬಿಡುಗಡೆಯಾಗಿರುವ ಪ್ರೇಮ್ ನಿರ್ದೇಶನದ ಕೇಡಿ ಸಿನಿಮಾದ ಒಂದು ಹಾಡು ದ್ವಂದ್ವಾರ್ಥದ ಅತಿ ಕೀಳು ಮಟ್ಟಕ್ಕೆ ಇಳಿದಿದೆ ಎಂದು ಸಾಮಾನ್ಯ ಜನತೆಗೆ ಧ್ವನಿಯೆತ್ತಿದ್ದಾರೆ. ಸಮಾಜದಲ್ಲಿ ತಾಂಡವವಾಡುತ್ತಿರುವ ನಿರುದ್ಯೋಗ ಬಡತನ ಭ್ರಷ್ಟಾಚಾರ ಅನ್ಯಾಯ ಅಸಮಾನತೆಗಳ ವಿರುದ್ಧ ಧ್ವನಿ ಎತ್ತಲು ಪ್ರೇರಣೆ ನೀಡಬೇಕಾದ ಕಲೆ ಸಾಹಿತ್ಯಗಳು ಯುವಜನರನ್ನು ಸಾಮಾಜಿಕ ಜವಾಬ್ದಾರಿಯಿಂದ ವಿಮುಖಗೊಳಿಸುವ ಅಶ್ಲೀಲತೆಯನ್ನು ಹರಡುವ ಇಂತಹ ಸಿನಿಮಾಗಳನ್ನು ಯುವ ಜನತೆ ಧಿಕ್ಕರಿಸಬೇಕೆಂದು ಎಐಡಿವೈಓ ಕರೆ ನೀಡುತ್ತದೆ ಎಂದು ಜಿಲ್ಲಾ ಕಾರ್ಯದರ್ಶಿ ಜಗದೀಶ್ ನೇಮಕಲ್ ತಿಳಿಸಿದ್ದಾರೆ.

# ರಾಜ್ಯಪಾಲರಿಂದ ಯುವ ಶುದ್ಧಿ ಅಭಿಯಾನ ವಾಕಥಾನ್‌ಗೆ ಚಾಲನೆ

ಬಳ್ಳಾರಿ

ಮಾದಕ ವ್ಯಸನವು ಕೇವಲ ವ್ಯಕ್ತಿಯ ಸಮಸ್ಯೆಯಲ್ಲ. ಕುಟುಂಬಗಳನ್ನು ವಿಘಟಿಸಿ ಸಮಾಜದಲ್ಲಿ ಅಶಾಂತಿ ಮತ್ತು ಅಪರಾಧಗಳನ್ನು ಹೆಚ್ಚಿಸುವ ರಾಷ್ಟ್ರೀಯ ಸವಾಲಾಗಿದೆ. ಸದೃಢ ಭಾರತ ನಿರ್ಮಾಣಕ್ಕಾಗಿ ಯುವಶಕ್ತಿಯು ವ್ಯಸನ ಮುಕ್ತ ಇಂದಿನ ಅತ್ಯಗತ್ಯ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.



ನಗರದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಕ್ರೀಡಾಂಗಣ ಮೈದಾನದಲ್ಲಿ ಬುಧವಾರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ದಿಶಾಬೋಧಿ ಫೌಂಡೇಷನ್ ಮತ್ತು ನಾರ್ಕೋಟಿಕ್ಸ್ ಬ್ಯೂರೋ ಸಹಯೋಗದಲ್ಲಿ ಆಯೋಜಿಸಿದ್ದ ನಶಾ ಮುಕ್ತ ಭಾರತ, ಯುವ ಶುದ್ಧಿ ಅಭಿಯಾನ ವಾಕಥಾನ್‌ಗೆ ಚಾಲನೆ ನೀಡಿ ಮಾತನಾಡಿ, ಕರ್ನಾಟಕದ ಪುಣ್ಯ ಭೂಮಿಯು ಶ್ರೀಮಂತ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿದೆ. ಬಸವಣ್ಣನವರಂತಹ ಮಹಾನ್ ಸಂತರ ಬೋಧನೆಗಳು ನಮಗೆ ಸದಾ ಸಂಯಮ ಮತ್ತು ಸದಾಚಾರದ ಹಾದಿಯನ್ನು ತೋರಿಸಿವೆ. ಇಂತಹ ಪವಿತ್ರ ಮಣ್ಣಿನಲ್ಲಿ ಮಾದಕದ್ರವ್ಯಗಳ ಹಾವಳಿ ಹೆಚ್ಚುತ್ತಿರುವುದು ಆತಂಕಕಾರಿ ವಿಷಯವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಭಾರತವು ವಿಶ್ವದ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿದೆ. ತಂತ್ರಜ್ಞಾನ ಮತ್ತು ನಾವೀನ್ಯತೆಯಲ್ಲಿ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಯುವಜನತೆಯಲ್ಲಿರುವ ಶಕ್ತಿಯು ದೇಶವನ್ನು ವಿಕಸಿತ ಭಾರತದ ಕೊಂಡೊಯ್ಯಲು ಸಹಕಾರಿಯಾಗಬೇಕು. ಅದು ಸಾಕಾರವಾಗಬೇಕಾದರೆ ಯುವಪೀಳಿಗೆ ಮಾದಕ ದ್ರವ್ಯಗಳಿಂದ ಮುಕ್ತವಾಗಬೇಕು ಎಂದು ಹೇಳಿದ ರಾಜ್ಯಪಾಲರು, ತಮ್ಮ ವೈಯಕ್ತಿಕ ಜೀವನದ ಶಿಸ್ತನ್ನು ನೆನಪಸಿಕೊಂಡರು. 'ನಾನು ಬಾಲ್ಯದಿಂದಲೂ ಯಾವುದೇ ರೀತಿಯ ವ್ಯಸನಕ್ಕೆ ಒಳಗಾಗಿಲ್ಲ. ಕನಿಷ್ಠ ಅಡಿಕೆಯನ್ನೂ ತಿನ್ನುವ ಅಭ್ಯಾಸ ನನಗಿಲ್ಲ. ಈ ನೈತಿಕ ಶಿಸ್ತು ನನ್ನನ್ನು ಸಕ್ರಿಯವಾಗಿರಲು ಪ್ರೇರೇಪಿಸುತ್ತದೆ' ಎಂದು ಹೇಳಿ ಯುವ ಸಮೂಹಕ್ಕೆ ಸ್ಫೂರ್ತಿ ತುಂಬಿದರು. ಯುವ ಶುದ್ಧಿ ಅಭಿಯಾನವು ದೇಶಾದ್ಯಂತ ಬದಲಾವಣೆಯ ಅಲೆಯನ್ನು ಸೃಷ್ಟಿಸಲಿ ಎಂದು ಶುಭ ಹಾರೈಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ ಡಾ.ಬಿ.ಸಿ.ಭಗವಾನ್ ಮಾತನಾಡಿ, ಯುವಜನತೆ ಮಾದಕ ವ್ಯಸನದಂತಹ ಕೆಟ್ಟ ಹವ್ಯಾಸಗಳಿಗೆ ಬಲಿಯಾಗದೆ, ಆರೋಗ್ಯವಂತ ಮತ್ತು ಸದೃಢ ಭಾರತದ ನಿರ್ಮಾಣಕ್ಕೆ ಕೈಜೋಡಿಸಬೇಕು. ನಮ್ಮ ದೇಶದ ಅತಿ ದೊಡ್ಡ ಶಕ್ತಿ ಯುವಸಂಪತ್ತು. ಆದರೆ ಇಂದು ಮಾದಕ ದ್ರವ್ಯಗಳ ಜಾಲವು ಈ ಶಕ್ತಿಯನ್ನು ಕುಂದಿಸುತ್ತಿದೆ. ಸಣ್ಣ ವಯಸ್ಸಿನಲ್ಲೇ ಹೃದಯಾಘಾತ ಮತ್ತು ಮೆದುಳು ಸಂಬಂಧಿ ಕಾಯಿಲೆಗಳಿಗೆ ಮಾದಕ ವ್ಯಸನವೇ ಪ್ರಮುಖ ಕಾರಣವಾಗುತ್ತಿದೆ ಎಂದು ತಿಳಿಸಿದರು.

## ದುಡಿಮೆ ಹಣವೆಲ್ಲ ಪಂಪುಗಳ ರಿಪೇರಿಗಾಗಿ ಸೀಮಿತ!



ವಿಜಯಪುರ

ಬೇಸಿಗೆಯ ಆರಂಭವಾಯಿತೆಂದರೆ ವರ್ಷವಿಡೀ ಸಂಪಾದನೆ ಮಾಡಿದ ಹಣವೆಲ್ಲಾ ಪಂಪು, ಮೋಟಾರುಗಳ ರಿಪೇರಿಗಾಗಿ ಖರ್ಚು ಮಾಡಬೇಕಾದಂತಹ ಪರಿಸ್ಥಿತಿ ಎದುರಾಗುತ್ತಿದೆ. ಕೃಷಿಯೂ ಬೇಡ, ತೋಟಗಾರಿಕೆಯೂ ಬೇಡ, ಎಲ್ಲಿಗಾದರೂ ಹೋಗಿ ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡಿಕೊಳ್ಳೋಣ ಎನಿಸಿಬಿಟ್ಟಿದೆ ಎನ್ನುವ ಬೇಸರದ ಮಾತುಗಳು ರೈತ ಬಸವರಾಜು ಅವರಿಂದ ಕೇಳಿಬಂದವು.

ತೀವ್ರ ಮಳೆಯ ಕೊರತೆಯ ನಡುವೆಯೂ ಕೊಳವೆಬಾವಿ ಕೊರೆದು 3 ಎಕರೆ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ನಾಟಿ ಮಾಡಿದ್ದೇವೆ. ಇನ್ನೇನು ಬೆಳೆ ಕೈಗೆ ಸಿಗಬೇಕು ಎನ್ನುವಷ್ಟರಲ್ಲಿ ಪಂಪು, ಮೋಟಾರು ಸುಟ್ಟುಹೋಗಿವೆ. ಅದನ್ನು ಕೊಳವೆಬಾವಿಯಿಂದ ಮೇಲೆತ್ತಿ, ರಿಪೇರಿ ಮಾಡಿಸಿ, ಪುನಃ ಕೊಳವೆಬಾವಿಗೆ ಬಿಡುವಷ್ಟರಲ್ಲಿ 25 ಸಾವಿರ ಬೇಕು. ರಿಪೇರಿ ಮಾಡಿಸಿಕೊಂಡು ಬಂದು ಬಿಟ್ಟರೆ, ಪುನಃ ವಾರ, ಹದಿನೈದು ದಿನಗಳಿಗೆ ಮತ್ತೆ ರಿಪೇರಿಗೆ ಬರುತ್ತದೆ. ಬೇಸಿಗೆ ಕಳೆಯುವಷ್ಟರಲ್ಲಿ ನಾಲ್ಕೈದು ಬಾರಿ ರಿಪೇರಿಗೆ ಬಂದರೆ, ಹಣ ಎಲ್ಲಿಂದ ತರೋದು? ಕೊಳವೆಬಾವಿಗಳಲ್ಲಿ ನೀರಿನ ಇಳುವರಿ ಕಡಿಮೆಯಾಗಿದೆ. ನೀರಿಲ್ಲದೆ ರಾತ್ರಿಯ ವೇಳೆ ಖಾಲಿ ಮೋಟಾರು ಚಾಲನೆಯಾಗುವುದರಿಂದ ಸುಟ್ಟುಹೋಗುತ್ತಿವೆ. ವಿದ್ಯುತ್ ಕೂಡಾ ಪದೇ ಪದೇ ಕೈ ಕೊಡುತ್ತದೆ ಇದರಿಂದಲೂ ಪಂಪು ಮೋಟಾರು, ಸುಟ್ಟುಹೋಗುತ್ತಿವೆ.

ನಾವು ಇಷ್ಟೊಂದು ಕಷ್ಟಪಟ್ಟು ಬೆಳೆ ಬೆಳೆದರೂ, ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ, ತೀರಾ ಕಡಿಮೆ ಬೆಲೆ ಕೇಳ್ತಾರೆ. ಮಾರಾಟ ಮಾಡುವಂತೆಯೂ ಇಲ್ಲ, ಬೆಳೆಯನ್ನು ತೋಟದಲ್ಲಿ ಬಿಡುವಂತೆಯೂ ಇಲ್ಲ, ನಮಗೆ ಧರ್ಮಸಂಕಟವಾಗಿಬಿಟ್ಟಿದೆ ಎಂದು ರೈತ ಶ್ರೀನಿವಾಸ್ ಅಳಲು ತೋಡಿಕೊಂಡರು.

ರೈತ ಶಂಕರಪ್ಪ ಮಾತನಾಡಿ, ಒಂದು ಕಡೆ ವಿದ್ಯುತ್ ಸಮಸ್ಯೆ, ಮತ್ತೊಂದು ಕಡೆ ಪಂಪು, ಮೋಟಾರುಗಳು ಕೆಟ್ಟುಹೋಗುತ್ತಿವೆ. ದಿಕ್ಕು ಕಾಣದಂತಾಗಿದೆ. ದಾಳಿಂಬೆ ಒಣಗುತ್ತಿವೆ. ಸೀಬೆಹಣ್ಣಿನ ಗಿಡಗಳಿಗೆ ಪ್ರೂನಿಂಗ್ ಮಾಡಿದ್ದು, ಚಿಗುರು ಬಂದಿದೆ. ಬೇಸಿಗೆಯಲ್ಲಿ ನೀರು ಕೊಡಬೇಕು. ಇಲ್ಲವಾದರೆ ಚಿಗುರಿನಲ್ಲಿ ಕಾಯಿ ಸರಿಯಾಗಿ ಬರಲ್ಲ. ಇದೇ ಸಮಯಕ್ಕೆ ಪಂಪು ಮೋಟಾರು ಕೆಟ್ಟುಹೋಗಿದೆ. ರಿಪೇರಿ ಮಾಡಿಸುವುದಕ್ಕೂ ಸಾಲ ಮಾಡಿಕೊಂಡು ಬಂದಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಪಂಪು, ಮೋಟಾರುಗಳು ಮೇಲೆತ್ತಲು, ಒಂದು ಲೆಂತ್ ಪೈಪ್ ಮೇಲೆತ್ತಲು, 80 ರೂಪಾಯಿ, ಪುನಃ ಒಳಗೆ ಬಿಡುವುದಕ್ಕೆ 80 ರೂ. ಒಂದು ಪೈಪ್‌ಗೆ 160 ರೂ. ಖರ್ಚು ಮಾಡಬೇಕು. ಒಂದು ಕೊಳವೆಬಾವಿ ಸುಮಾರು 1500 ಅಡಿಗಳಿವೆ. ಸುಮಾರು 12 ಸಾವಿರ ಮೇಲೆತ್ತಲು, ಇಳಿಸಲು ಖರ್ಚು ಮಾಡಬೇಕಿದೆ. ರಿಪೇರಿಗೂ ಹೆಚ್ಚುವರಿ ಖರ್ಚು ಬರುತ್ತಿದೆ ಎಂದು ರೈತ ಹಾರೋಹಳ್ಳಿ ಬಸವರಾಜು ಹೇಳಿದರು. ಪಂಪು, ಮೋಟಾರು ರಿಪೇರಿ ಮಾಡಿಕೊಡುವ ತಂತ್ರಜ್ಞ ಸದಾಖತ್ ಮಾತ ನಾಡಿ, ಬೇಸಿಗೆ ಆರಂಭವಾಗುತ್ತಿದ್ದಂತೆ ಪಂಪು, ಮೋಟಾರುಗಳು ರಿಪೇರಿಗೆ ಬರುತ್ತವೆ. ನಾವು ಎಷ್ಟೇ ಮುತುವರ್ಜಿಯಿಂದ ರಿಪೇರಿ ಮಾಡಿ ಕೊಟ್ಟರೂ, ನೀರಿನ ಕೊರತೆ, ವಿದ್ಯುತ್ ಸಮಸ್ಯೆಯಿಂದ ಪುನಃ ಸುಟ್ಟುಹೋಗುತ್ತವೆ. ನಮಗೂ ನೋವಾಗುತ್ತದೆ. ಆದರೆ, ವಿಧಿಯಿಲ್ಲ, ಸುಟ್ಟುಹೋಗಿರುವ ವಸ್ತುಗಳು ತೆಗೆದು ಹೊಸ ವಸ್ತುಗಳನ್ನು ಅಳವಡಿಸಲೇಬೇಕು. ಕೆಲವು ರೈತರು ಹಣವನ್ನೂ ಕೊಡಲ್ಲ. ಬೆಳೆ ಬಂದಾಗ ಕೊಡ್ತೇವೆ ಎಂದು ಹೋಗುತ್ತಾರೆ. ಅವರ ಬೆಳೆಗಳು ನಷ್ಟವಾದರೆ ನಮಗೆ ಬರಬೇಕಾಗಿರುವ ಹಣವೂ ಬರಲ್ಲ ಎಂದರು.

## ಒಳಮೀಸಲಾತಿಯ ರೋಸ್ಟರ್ ಬಿಂದು ಹಂಚಿಕೆ : ಮಾ.24 ರಂದು ಪ್ರತಿಭಟನೆ

ಬಳ್ಳಾರಿ

ಒಳ ಮೀಸಲಾತಿಯ ರೋಸ್ಟರ್ ಬಿಂದು ಹಂಚಿಕೆ ಕ್ರಮ ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಮಾ. 24 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಗೌರವಾಧ್ಯಕ್ಷ ಡಾ.ಕೆ.ಹನುಮಂತಪ್ಪ ತಿಳಿಸಿದ್ದಾರೆ.

ಒಳ ಮೀಸಲಾತಿ ಹೆಸರಿನಲ್ಲಿ ಪರಿಶಿಷ್ಟ ಜಾತಿಗಳಿಗೆ ಅನ್ಯಾಯ ಅನ್ಯಾಯವಾಗುತ್ತಿದೆ. ಹಿಂದಿನ ನಿಯಮದಂತೆ ನೇಮಕಾತಿ ಶಿಕ್ಷಣ ಪ್ರವೇಶ ಪ್ರಕ್ರಿಯೆಗಳನ್ನು ಪ್ರಾರಂಭಿಸಬೇಕೆಂದು ಕರ್ನಾಟಕ ರಾಜ್ಯ ಮೀಸಲಾತಿ ಸಂರಕ್ಷಣಾ ಒಕ್ಕೂಟ ಒತ್ತಾಯಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಪತ್ರಿಕಾ ಭವನದಲ್ಲಿ ಇಂದು ಕೊರಚ–ಕೊರಮ, ಲಂಬಾಣಿ, ಭೋವಿ ಸಮಾಜದ ಒಕ್ಕೂಟದ ನೇತೃತ್ವದಲ್ಲಿ ಜಿಲ್ಲಾ ಘಟಕದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಇತೀಚಿಗೆ ರಾಜ್ಯ ಸರ್ಕಾರ ಧಾರವಾಡ ಕೃಷಿ ವಿಶ್ವವಿದ್ಯಾಲಯ, ಆರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಆರೋಗ್ಯ ಇಲಾಖೆಗಳಲ್ಲಿ ನಡೆಸಲಾದ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿಗಳ ಪ್ರವರ್ಗ ಬಿ ಮತ್ತು ಪ್ರವರ್ಗ ಸಿ ಗುಂಪಿಗೆ ಶೂನ್ಯ ಹುದ್ದೆಗಳನ್ನು ಹಂಚಿಕೆ ಮಾಡಿದೆ ಎಂದರು.

ಈ ಮೂಲಕ ಛಲವಾದಿ, ಬಂಜಾರ, ಭೋವಿ, ಕೊರಮ–ಕೊರಚ ಅಲೆಮಾರಿ ಸೂಕ್ಷ್ಮ ಜಾತಿಗಳಿಗೆ ಘೋರ ಅನ್ಯಾಯ ಮಾಡಲಾಗಿದೆ. ಈ ಬಗ್ಗೆ ಸರಕಾರದ ಗಮನ ಸೆಳೆಯಲಾಗಿದೆ. ಸರ್ಕಾರ ಎಚ್ಚೆತ್ತುಕೊಂಡು ಪರಿಶಿಷ್ಟ ಜಾತಿಗಳ ವರ್ಗಿಕರಣ ಬಿಟ್ಟು ಹಿಂದಿನ ನಿಯಮದಂತೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ. ರಾಜ್ಯ ಸರಕಾರದ ಈ ಘೋಷಣೆ ಮಾಡಿರುವುದು ಸ್ವಾಗತಾರ್ಹವಾಗಿದೆ ಎಂದು ತಿಳಿಸಿದರು.

# ರೈತರಿಗೆ ಜೀವಜಲ: ಕೃಷಿ ಹೊಂಡಗಳಿಂದ ಬದುಕಿಗೆ ನವಚೈತನ್ಯ


● ವಿ. ಶಿವಾರೆಡ್ಡಿ
ಬಂಗಾರಪೇಟೆ

ಕೃಷಿಯೇ ಭಾರತದ ಆರ್ಥಿಕತೆಯ ಬೆನ್ನೆಲುಬು ಎಂಬ ಮಾತಿಗೆ ಪೂರಕವಾಗಿ, ರೈತರ ಅಭಿವೃದ್ಧಿಯೇ ದೇಶದ ಪ್ರಗತಿ ಎಂದು ನಂಬಿರುವ ಸರ್ಕಾರ, ಕೃಷಿ ವಲಯವನ್ನು ಸುಧಾರಿಸಲು ಹಲವು ಮಹತ್ತರ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಈ ಪೈಕಿ ಕೃಷಿ ಇಲಾಖೆಯ ಮೂಲಕ ನಿರ್ಮಾಣವಾಗುತ್ತಿರುವ 'ಕೃಷಿ ಹೊಂಡ'ಗಳು ಇಂದು ಬಂಗಾರಪೇಟೆ ತಾಲ್ಲೂಕಿನ ಅನ್ನದಾತರ ಪಾಲಿಗೆ ಸಂಜೀವಿನಿಯಾಗಿ ಪರಿಣಮಿಸಿವೆ.




<u>ನದಿಗಳಿಲ್ಲದ ನಾಡಿಗೆ ಮಳೆನೀರು ಸಂಗ್ರಹವೇ ಮಂತ್ರ:</u> ಬಂಗಾರಪೇಟೆ ತಾಲ್ಲೂಕಿನಲ್ಲಿ ಯಾವುದೇ ಜೀವ ನದಿಗಳಿಲ್ಲ. ಇಲ್ಲಿನ ಕೃಷಿ ಚಟುವಟಿಕೆಗಳು ಸಂಪೂರ್ಣವಾಗಿ ವರುಣನ ಕೃಪೆಯನ್ನೇ ಅವಲಂಬಿಸಿವೆ. ಮಳೆಯಾಗಿ ಕೆರೆ–ಕಟ್ಟೆಗಳು ತುಂಬಿದಾಗ ಮಾತ್ರ ಅಂತರ್ಜಲ ಮಟ್ಟ ಚೇತರಿಸಿಕೊಂಡು ಕೊಳವೆ ಬಾವಿಗಳಲ್ಲಿ ನೀರು ಸಿಗುತ್ತದೆ. ಇಲ್ಲದಿದ್ದರೆ ಬೋರ್‌ವೆಲ್‌ಗಳು ಬರಿದಾಗಿ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಇಂತಹ ಮಳೆ ಆಧಾರಿತ ಕೃಷಿ ಪ್ರದೇಶದಲ್ಲಿ, ಮಳೆ ಕೊರತೆಯಾದಾಗ ಬೆಳೆಗಳನ್ನು ರಕ್ಷಿಸಲು ಕೃಷಿ ಇಲಾಖೆಯು ರೈತರ ಹೊಲಗಳಲ್ಲಿ ಕೃಷಿ ಹೊಂಡ ನಿರ್ಮಿಸಲು ವಿಶೇಷ ಪ್ರೋತ್ಸಾಹ ನೀಡುತ್ತಿದೆ.

<u>ಅಂತರ್ಜಲ ಮರುಪೂರಣ ಮತ್ತು ಆರ್ಥಿಕ ಚೇತರಿಕೆ:</u> ಮಳೆ ಬಂದಾಗ ಹೊಲದ ನೀರು ವ್ಯರ್ಥವಾಗಿ ಹರಿದು ಹೋಗುವುದನ್ನು ತಡೆದು ಈ ಹೊಂಡಗಳಲ್ಲಿ ಸಂಗ್ರಹಿಸಲಾಗುತ್ತದೆ. ಈ ನೀರನ್ನು ಪಂಪ್ ಮೂಲಕ ತರಕಾರಿ, ಹೂವು ಹಾಗೂ ಇತರೆ ಬೆಳೆಗಳಿಗೆ ಹರಿಸುವುದರಿಂದ ಉತ್ಪಾದನೆ ಹೆಚ್ಚುತ್ತಿದೆ. ಅಷ್ಟೇ ಅಲ್ಲದೆ, ಹೊಂಡದಲ್ಲಿ ನಿಂತ ನೀರು ನಿಧಾನವಾಗಿ ಭೂಮಿಯೊಳಗೆ ಇಂಗುವುದರಿಂದ ಸುತ್ತಮುತ್ತಲಿನ ಬೋರ್‌ವೆಲ್‌ಗಳ ಅಂತರ್ಜಲ ಮಟ್ಟವೂ ಸುಧಾರಿಸುತ್ತಿದೆ. ತಾಲ್ಲೂಕಿನ ಚಿಕ್ಕ ಹೊಸಹಳ್ಳಿ ಗ್ರಾಮದ ರೈತ ರಾಮಕೃಷ್ಣಪ್ಪ ಅವರು ನಿರ್ಮಿಸಿಕೊಂಡಿರುವ ಕೃಷಿ ಹೊಂಡವು ಈ ಭಾಗದ ರೈತರಿಗೆ ಉತ್ತಮ ಉದಾಹರಣೆಯಾಗಿದೆ.



“2025-26ನೇ ಸಾಲಿನಲ್ಲಿ ಕೆಜಿಎಫ್ ಹಾಗೂ ಬಂಗಾರಪೇಟೆ ತಾಲ್ಲೂಕುಗಳಲ್ಲಿ ಒಟ್ಟು 111 ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಲಾಗಿದೆ. ಸರ್ಕಾರದ ಮಾನದಂಡಗಳಂತೆ ನಿಗದಿತ ಅಳತೆಯಲ್ಲಿ ಹೊಂಡ ನಿರ್ಮಿಸುವ ರೈತರಿಗೆ ಕೃಷಿ ಇಲಾಖೆಯಿಂದ ನೇರವಾಗಿ ಸಹಾಯಧನ ನೀಡಲಾಗುವುದು.”
- ನಾರಾಯಣರೆಡ್ಡಿ, ತಾಲ್ಲೂಕು ಸಹಾಯಕ ಕೃಷಿ ಅಧಿಕಾರಿ, ಬಂಗಾರಪೇಟೆ.



“ಕೃಷಿ ಹೊಂಡಗಳು ನಮಗೆ ಬಹಳ ಉಪಯುಕ್ತ. ವಿದ್ಯುತ್ ಕೈಕೊಟ್ಟಾಗ ಅಥವಾ ನೀರಿನ ತೀವ್ರ ಸಮಸ್ಯೆ ಎದುರಾದಾಗ ಈ ಹೊಂಡದಲ್ಲಿ ಶೇಖರಣೆಯಾದ ನೀರನ್ನು ಬಳಸಿ ಬೆಳೆಗಳನ್ನು ರಕ್ಷಿಸಿಕೊಳ್ಳಬಹುದು. ಇದು ನಮಗೆ ಜೀವಜಲವಿದ್ದಂತೆ.”
- ಚಿನ್ನಪ್ಪ ಕಣಿಂಬೆಲೆ, ರೈತರು, ಬಂಗಾರಪೇಟೆ.

ಭಾರತ ಸಾರಥಿ
22/03/2026
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com



ದೊಡ್ಡಬಳ್ಳಾಪುರ ಪ್ರಸ್ತುತ ನಡೆಯುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಬಿಸಿಲಿನ ತಾಪದಿಂದ ಕಂಗೆಟ್ಟಿದ್ದ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದ ಬಳಿ ಉಚಿತವಾಗಿ ಮಜ್ಜಿಗೆ ವಿತರಿಸುವ ಮೂಲಕ ತಂಪು ಎರೆಯಲಾಯಿತು. ಈ ಸಂದರ್ಭದಲ್ಲಿ ಉಪನ್ಯಾಸಕ ತ್ರಿಭುವನ್, ರೋಜಿಪುರ ಶ್ರೀನಿವಾಸ್, ಸಹಾಯಕ ಮಂಜಣ್ಣ ಹಾಗೂ ಇತರರು ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಮಜ್ಜಿಗೆ ವಿತರಿಸುವಲ್ಲಿ ಸಹಕರಿಸಿದರು. ಸಮಾಜ ಸೇವಕರ ಮತ್ತು ಶಿಕ್ಷಣ ಸಂಸ್ಥೆಯ ಈ ಕಾರ್ಯಕ್ಕೆ ಪೋಷಕರಿಂದಲೂ ಶ್ಲಾಘನೆ ವ್ಯಕ್ತವಾಗಿದೆ.




ಸಚಿವ ಜಮೀರ್ ಅಹಮದ್ ಖಾನ್ ಅವರು ಶುಕ್ರವಾರ ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಜತೆ ರಂಜಾನ್ ಉಪವಾಸ ಅಂತ್ಯಗೊಳಿಸಿದರು.



ಮಾಲೂರು ಪಟ್ಟಣದ ಪ್ರಸಿದ್ಧ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ (ರಾಯರ ಮಠ) ಯುಗಾದಿ ಹಬ್ಬದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ 'ಪಂಚಾಂಗ ಶ್ರವಣ' ಕಾರ್ಯಕ್ರಮವು ಭಕ್ತಿಭಾವದಿಂದ ಜರುಗಿತು. ವೇದಮೂರ್ತಿ ಶ್ರೀ ನಾಗರಾಜ ಶಾಸ್ತ್ರಿಗಳು ಈ ವರ್ಷದ ಪಂಚಾಂಗ ಪಠಣ ಮಾಡಿದರು. ಹೊಸ ವರ್ಷದ ಆರಂಭದ ಅಂಗವಾಗಿ ರಾಯರ ಮಠದಲ್ಲಿ ವಿಶೇಷ ಪೂಜೆ, ಹಸ್ತೋದಕ ಮತ್ತು ಮಧ್ಯಾಹ್ನ ಭಕ್ತಾಧಿಗಳಿಗೆ ಪ್ರಸಾದ ವಿನಿಯೋಗ ನಡೆಯಿತು. ಪಟ್ಟಣದ ನೂರಾರು ಸದ್ಭಕ್ತರು ಭಾಗವಹಿಸಿ ಶ್ರದ್ಧೆಯಿಂದ ಶ್ರವಣ ಮಾಡಿದರು. "ಹೊಸ ವರ್ಷವು ಎಲ್ಲರಿಗೂ ಸುಖ-ಶಾಂತಿ ಮತ್ತು ಸಮೃದ್ಧಿ ತರಲಿ" ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸಲಾಯಿತು.




ದೀರ್ಘಕಾಲದ ನಿರೀಕ್ಷೆಯ ನಂತರ ಬೆಂಗಳೂರು ಕೋಗಿಲು ಭಾಗದ ಸಂತ್ರಸ್ತ ಕುಟುಂಬಗಳಿಗೆ ಕೊನೆಗೂ ಸ್ವಂತ ಮನೆಯ ಕನಸು ನನಸಾಗಿದೆ. ಸಚಿವರಾದ ಜಮೀರ್ ಅಹಮದ್ ಖಾನ್ ಹಾಗೂ ಕೃಷ್ಣ ಬೈರೇಗೌಡರು ಕೋಗಿಲು ಸಂತ್ರಸ್ತರಿಗೆ ಹಕ್ಕುಪತ್ರ ವಿತರಿಸಿದ ನಂತರ ಹಂಚಿಕೆ ಮಾಡಲಾದ ಮನೆಗಳ ಕೀ ಅನ್ನು ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪರಶುರಾಮ್ ಶಿನ್ನಾಳ್ಕರ್ ಹಸ್ತಾಂತರ ಮಾಡಿದರು.

## ಹಿಂದೂ ಜನಜಾಗೃತಿ ಸಮಿತಿಯಿಂದ ಸಾಮೂಹಿಕ ಯುಗಾದಿ ಆಚರಣೆ; ಧರ್ಮಜಾಗೃತಿಗೆ ಭಕ್ತರ ಪಣ



ಬೆಂಗಳೂರು

ಚೈತ್ರ ಶುದ್ಧ ಪ್ರತಿಪದೆಯ ಶುಭ ದಿನದಂದು ಸಮಸ್ತ ಹಿಂದೂ ಸಮಾಜದ ಹೊಸ ವರ್ಷವಾದ ಯುಗಾದಿಯನ್ನು ಬೆಂಗಳೂರಿನ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ಅತ್ಯಂತ ಭಕ್ತಿಭಾವದಿಂದ ಸಾಮೂಹಿಕವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶಾಸ್ತ್ರೋಕ್ತವಾಗಿ ಎತ್ತರದ ಬ್ರಹ್ಮ ಧ್ವಜವನ್ನು ಸ್ಥಾಪಿಸಿ, ವಿಧಿವತ್ತಾಗಿ ಪೂಜೆ ಸಲ್ಲಿಸಲಾಯಿತು. ಸಮಿತಿಯ ಕಾರ್ಯಕರ್ತರು ಹಾಗೂ ನೂರಾರು ಧರ್ಮಪ್ರೇಮಿಗಳು ಈ ಸಾಂಪ್ರದಾಯಿಕ ಆಚರಣೆಯಲ್ಲಿ ಭಾಗವಹಿಸಿದ್ದರು.

<u>ರಾಮರಾಜ್ಯದ ಸ್ಥಾಪನೆಗೆ ಸಾಮೂಹಿಕ ಪ್ರಾರ್ಥನೆ:</u> ರಾಜ್ಯದಲ್ಲಿ ಹೆಚ್ಚುತ್ತಿರುವ ಬೆಲೆ ಏರಿಕೆ, ಭ್ರಷ್ಟಾಚಾರ, ಅಪರಾಧ ಚಟುವಟಿಕೆಗಳು ಹಾಗೂ ಹಿಂದೂ ಸಮಾಜದ ಮೇಲಾಗುತ್ತಿರುವ ಆಘಾತಗಳನ್ನು ತಡೆಯಲು 'ರಾಮರಾಜ್ಯ'ದಂತಹ ಆದರ್ಶ ಆಡಳಿತದ ಅಗತ್ಯವಿದೆ ಎಂದು ಸಮಿತಿ ಪ್ರತಿಪಾದಿಸಿತು. ತ್ರೇತಾಯುಗದಲ್ಲಿ ಪ್ರಭು ಶ್ರೀರಾಮನು ಯುಗಾದಿಯಂದೇ ಅಯೋಧ್ಯೆಯಲ್ಲಿ ರಾಮರಾಜ್ಯ ಸ್ಥಾಪಿಸಿದಂತೆ, ಈ 'ಪರಾಭವ' ನಾಮ ಸಂವತ್ಸರದಲ್ಲಿ ಭಾರತವು ಆದರ್ಶ ಹಿಂದೂ ರಾಷ್ಟ್ರವಾಗಲಿ ಎಂದು ಶ್ರೀರಾಮನಲ್ಲಿ ಸಾಮೂಹಿಕವಾಗಿ ಪ್ರಾರ್ಥಿಸಲಾಯಿತು.

<u>ಹಿಂದೂ ಬಾಂಧವರ ಸಂಘಟನೆಗೆ ಕರೆ:</u> ಕಾರ್ಯಕ್ರಮದಲ್ಲಿ ನೆರೆದಿದ್ದ ಭಕ್ತಾದಿಗಳು ರಾಮರಾಜ್ಯದ ಸ್ಥಾಪನೆಗಾಗಿ ಅಗತ್ಯವಿರುವ ಧರ್ಮಜಾಗೃತಿ ಮೂಡಿಸಲು ಇಂದಿನಿಂದಲೇ ಶ್ರಮಿಸುವುದಾಗಿ ಸಂಕಲ್ಪ ಮಾಡಿದರು. ಸಮಿತಿಯ ರಾಜ್ಯ ವಕ್ತಾರರಾದ ಶ್ರೀ ಮೋಹನ್ ಗೌಡ ಅವರು ಮಾತನಾಡಿ, "ಸಮಾಜದಲ್ಲಿನ ಅಧರ್ಮವನ್ನು ತೊಡೆದುಹಾಕಲು ಮತ್ತು ಆದರ್ಶ ರಾಜ್ಯವನ್ನು ನಿರ್ಮಿಸಲು ಎಲ್ಲಾ ಹಿಂದೂ ಬಾಂಧವರು ಸಂಘಟಿತರಾಗಿ ಕಾರ್ಯನಿರ್ವಹಿಸಬೇಕು" ಎಂದು ಕರೆ ನೀಡಿದರು.

ಧಾರ್ಮಿಕ ವಿಧಿವಿಧಾನಗಳ ನಂತರ ಸಮಿತಿಯ ಸದಸ್ಯರು ಯುಗಾದಿಯ ಮಹತ್ವ ಮತ್ತು ಹಿಂದೂ ರಾಷ್ಟ್ರದ ಪರಿಕಲ್ಪನೆಯ ಬಗ್ಗೆ ಜಾಗೃತಿ ಮೂಡಿಸಿದರು.

## 'ಬಜೆಟ್‌ನಿಂದ ಜನರ ಭರವಸೆ ನುಚ್ಚುನೂರು'



ಕಲಬುರಗಿ

"ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ 17ನೇ ಬಜೆಟ್ ರಾಜ್ಯದ ಜನರ ನಿರೀಕ್ಷೆಗಳನ್ನು ಸಂಪೂರ್ಣವಾಗಿ ಹುಸಿಗೊಳಿಸಿದೆ. ಈ ಬಜೆಟ್ ಬಗ್ಗೆ ಕೇವಲ ವಿರೋಧ ಪಕ್ಷದವರಿಗಷ್ಟೇ ಅಲ್ಲ, ಆಡಳಿತ ಪಕ್ಷದ ಶಾಸಕರಲ್ಲೇ ತೀವ್ರ ನಿರುತ್ಸಾಹ ಮತ್ತು ವಿರೋಧ ವ್ಯಕ್ತವಾಗುತ್ತಿದೆ" ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ಟೀಕಿಸಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಈ ಬಜೆಟ್ ಶೂನ್ಯ ಫಲಿತಾಂಶ ನೀಡಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

<u>ದೂರದೃಷ್ಟಿ ಇಲ್ಲದ ಬಜೆಟ್:</u> ಸಿದ್ದರಾಮಯ್ಯನವರು ಅನುಭವಿ ಮುಖ್ಯಮಂತ್ರಿಗಳಾಗಿದ್ದರೂ, ಅವರ ಬಜೆಟ್‌ನಲ್ಲಿ ಯಾವುದೇ ಹೊಸತನ ಅಥವಾ ದೂರದೃಷ್ಟಿ ಇಲ್ಲ. "ಮುಖ್ಯಮಂತ್ರಿಗಳು ಬಜೆಟ್ ಮಂಡಿಸುವಾಗ ನಾನು ಗಮನಿಸುತ್ತಿದ್ದೆ, ಸ್ವತಃ ಕಾಂಗ್ರೆಸ್ ಶಾಸಕರ ಮುಖದಲ್ಲೇ ಕಳೆ ಇರಲಿಲ್ಲ. ಕಳೆದ ಎರಡೂವರೆ ವರ್ಷಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತಗೊಂಡಿದೆ, ಈ ಬಜೆಟ್‌ನಿಂದ ಆ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ" ಎಂದು ಅವರು ಭವಿಷ್ಯ ನುಡಿದರು.

<u>ಯುವಜನತೆ ಮತ್ತು ರೈತರಿಗೆ ಅನ್ಯಾಯ:</u> ಈ ಬಜೆಟ್ ರೈತರಿಗೆ ಯಾವುದೇ ಪೂರಕ ಯೋಜನೆಗಳನ್ನು ನೀಡಿಲ್ಲ ಹಾಗೂ ನಿರುದ್ಯೋಗಿ ಯುವಜನತೆಗೆ ಉದ್ಯೋಗ ಸೃಷ್ಟಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಬಜೆಟ್ ಕೇವಲ ಅಂಕಿ-ಅಂಶಗಳ ಆಟವಾಗಿದೆಯೇ ಹೊರತು ಜನಸಾಮಾನ್ಯರ ಬದುಕಿಗೆ ಆಸರೆಯಾಗಿಲ್ಲ ಎಂದು ವಿಜಯೇಂದ್ರ ದೂರಿದರು.

<u>ಕಲ್ಯಾಣ ಕರ್ನಾಟಕಕ್ಕೆ ಹಿನ್ನಡೆ:</u> ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಕುರಿತು ಮಾತನಾಡಿದ ಅವರು, ಪ್ರೊ. ಗೋವಿಂದ ರಾವ್ ಅವರ ವರದಿಯನ್ನು ಉಲ್ಲೇಖಿಸಿದರು. "ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಾದೇಶಿಕ ಅಸಮತೋಲನವು ಈ ಹಿಂದೆ ಶೇ. 65ರಷ್ಟಿತ್ತು, ಆದರೆ ಈಗ ಅದು ಶೇ. 72.5ಕ್ಕೆ ಏರಿಕೆಯಾಗಿದೆ ಎಂದು ವರದಿ ಹೇಳುತ್ತಿದೆ. ಇದು ಈ ಸರ್ಕಾರದ ವೈಫಲ್ಯಕ್ಕೆ ಸಾಕ್ಷಿ" ಎಂದು ಅವರು

## 'ವಿಧಾನಸಭೆ ವಿಸರ್ಜಿಸಿ ಕನ್ನಡಿಗರ ಕ್ಷಮೆ ಕೇಳಿ'



ಬೆಂಗಳೂರು

ರಾಜ್ಯದ ಖಜಾನೆ ದಿವಾಳಿಯಾಗಿದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರ್ಗಾವಣೆ ದಂಧೆಯನ್ನೇ ಮುಖ್ಯ ಕಾಯಕ ಮಾಡಿಕೊಂಡಿದ್ದಾರೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ.

ತಮ್ಮ ಸಾಮಾಜಿಕ ಜಾಲತಾಣ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿರುವ ಅವರು, "ಸಿದ್ದರಾಮಯ್ಯ ಅವರಿಗೆ ಸರ್ಕಾರಿ ನೌಕರರ ವರ್ಗಾವಣೆಗಿಂತ ಮಾಡಬೇಕಾದ ಉತ್ತಮ ಕೆಲಸಗಳಿವೆ ಎಂದು ಹೈಕೋರ್ಟ್ ಚಾಟಿ ಬೀಸಿರುವುದು ರಾಜ್ಯದಲ್ಲಿ ನಡೆಯುತ್ತಿರುವ ದುರಾಡಳಿತಕ್ಕೆ ಕನ್ನಡಿ ಹಿಡಿದಿದೆ" ಎಂದು ವಾಗ್ದಾಳಿ ನಡೆಸಿದ್ದಾರೆ.

## ಪಂಚಾಂಗ ಶ್ರವಣದಿಂದ ಪುಣ್ಯಫಲ ಪ್ರಾಪ್ತಿ: ಸಾಧು ಮಠದಲ್ಲಿ ಯುಗಾದಿ ಸಂಭ್ರಮ

ಚಿಕ್ಕಬಳ್ಳಾಪುರ

"ಪುಣ್ಯ ಫಲ ಪ್ರಾಪ್ತಿಗೆ ಪಂಚಾಂಗ ಶ್ರವಣ ಒಂದು ರಾಮಬಾಣವಿದ್ದಂತೆ. ದೇವರ ದರ್ಶನದಷ್ಟೇ ಪವಿತ್ರವಾದ ಪಂಚಾಂಗ ಶ್ರವಣವು ಪ್ರತಿಯೊಬ್ಬರಲ್ಲೂ ದೈವೀ ಮನೋಭಾವನೆ ಮತ್ತು ಸಕಾರಾತ್ಮಕ ಶಕ್ತಿಯನ್ನು ಮೂಡಿಸುತ್ತದೆ" ಎಂದು ಶ್ರೀ ದತ್ತಾತ್ರೇಯ ಸಮಾಜ ಸಾಧು ಮಠದ ಪ್ರಧಾನ ಅರ್ಚಕ ಎನ್. ಬಾಲಚಂದ್ರ ಶರ್ಮ ಹೇಳಿದರು.



ನಗರದ ದತ್ತಾತ್ರೇಯ ಸಮಾಜ ಸಾಧು ಮಠ ಟ್ರಸ್ಟ್ ವತಿಯಿಂದ ಯುಗಾದಿ ಹಬ್ಬದ ಅಂಗವಾಗಿ ಆಯೋಜಿಸಿದ್ದ ಪಂಚಾಂಗ ಶ್ರವಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

<u>ನವಗ್ರಹಗಳ ಆಶೀರ್ವಾದದ ಹಾದಿ:</u> ಪಂಚಾಂಗ ಶ್ರವಣದ ಮಹತ್ವ ವಿವರಿಸಿದ ಬಾಲಚಂದ್ರ ಶರ್ಮ ಅವರು, "ವೇದ ಪರಿಣಿತರು ಸಿದ್ಧಪಡಿಸಿರುವ ಪಂಚಾಂಗವನ್ನು ಆಲಿಸುವುದರಿಂದ ಕಿವಿಗಳು ಪಾವನವಾಗುತ್ತವೆ. ಮಳೆ, ಬೆಳೆ, ರಾಶಿಫಲ ಹಾಗೂ ಪ್ರಕೃತಿಯ ಫಲಾಫಲಗಳನ್ನು ತಿಳಿಯುವ ಈ ಪದ್ಧತಿಯು ಅನಾದಿ ಕಾಲದಿಂದಲೂ ನಡೆದುಬಂದಿದೆ. ಯುಗಾದಿ ದಿನದ ಚಂದ್ರ ದರ್ಶನವು ಗಣೇಶ ಚತುರ್ಥಿಯ ದಿನದ ಚಂದ್ರ ದರ್ಶನದ ದೋಷವನ್ನು ನಿವಾರಿಸುತ್ತದೆ ಎಂಬ ನಂಬಿಕೆಯೂ ಇದೆ" ಎಂದರು.

<u>ವರ್ಷದ ಭವಿಷ್ಯಕ್ಕೆ ಮಾರ್ಗದರ್ಶಕ:</u> ಟ್ರಸ್ಟ್‌ನ ಅಧ್ಯಕ್ಷ ವಿ. ಕೃಷ್ಣಮೂರ್ತಿ ಮಾತನಾಡಿ, "ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣಗಳೆಂಬ ಐದು ಅಂಗಗಳ ಸಮಾಗಮವೇ ಪಂಚಾಂಗ. ಹೊಸ ವರ್ಷದಲ್ಲಿ ನಾವು ನಡೆಸಬೇಕಾದ ವ್ಯವಹಾರಗಳು, ಮಳೆ-ಬೆಳೆ ಮತ್ತು ಗ್ರಹಗತಿಗಳ ಬಗ್ಗೆ ಇದು ಪ್ರಾಥಮಿಕ ಮಾಹಿತಿ ನೀಡುತ್ತದೆ. ಇದನ್ನು ಆಲಿಸುವುದರಿಂದ ಅಶುಭಗಳು ನಿವಾರಣೆಯಾಗಿ ಲಕ್ಷ್ಮೀಪ್ರದವಾಗುತ್ತದೆ" ಎಂದು ತಿಳಿಸಿದರು.

ಅರ್ಚಕ ಬಿ. ಗಣೇಶ ಶರ್ಮ ಅವರು ಪಂಚಾಂಗ ವಾಚನ ಮಾಡಿ, ಹೊಸ ಸಂವತ್ಸರದ ಭವಿಷ್ಯ, ದೇಶದ ಪರಿಸ್ಥಿತಿ ಹಾಗೂ ದ್ವಾದಶ ರಾಶಿಗಳ ಫಲವನ್ನು ವಿವರಿಸಿದರು.

<u>ವಿಶೇಷ ಪೂಜೆ ಮತ್ತು ಪ್ರಸಾದ ವಿನಿಯೋಗ:</u> ಕಾರ್ಯಕ್ರಮದ ಅಂಗವಾಗಿ ಶ್ರೀರಾಮ, ಸೀತಾಮಾತೆ, ಹನುಮಂತ, ಶ್ರೀ ದತ್ತಾತ್ರೇಯ ಹಾಗೂ ಶ್ರೀಕೃಷ್ಣ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಲೋಕಕಲ್ಯಾಣಕ್ಕಾಗಿ ಪ್ರಾರ್ಥಿಸಿ ಮಹಾಮಂಗಳಾರತಿ ಮಾಡಿ ಭಕ್ತರಿಗೆ ಪ್ರಸಾದ ವಿನಿಯೋಗಿಸಲಾಯಿತು.

ಕಾರ್ಯಕ್ರಮದಲ್ಲಿ ಟ್ರಸ್ಟ್ ಸದಸ್ಯರಾದ ಕಣಿವೆ ಹರಿಕುಮಾರ್, ಶ್ರೀನಿವಾಸ್, ಆರ್.ಓ. ಪ್ರಭಾಕರ್, ಪತ್ರಕರ್ತ ಎಂ. ಕೃಷ್ಣಪ್ಪ ಹಾಗೂ ಸಾಧು ಮಠದ ಗೀತ ಗಾಯನ ಮಹಿಳಾ ಮಂಡಳಿಯ ಸದಸ್ಯರು ಸೇರಿದಂತೆ ನೂರಾರು ಸಾರ್ವಜನಿಕರು ಭಾಗವಹಿಸಿದ್ದರು.

## ದಾವಣಗೆರೆ ಉಪಚುನಾವಣೆ: ಒಗ್ಗಟ್ಟಿನ ಮಂತ್ರ ಜಪಿಸಿದ ಎನ್‌ಡಿಎ

ದಾವಣಗೆರೆ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಮೈತ್ರಿಕೂಟದ ಅಭ್ಯರ್ಥಿಯನ್ನು ದಾಖಲೆ ಮತಗಳ ಅಂತರದಿಂದ ಗೆಲ್ಲಿಸಲು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಇಂದು ಇಲ್ಲಿ ನಡೆದ ಸಮನ್ವಯ ಸಭೆಯಲ್ಲಿ ಒಮ್ಮತದ ನಿರ್ಧಾರ ಕೈಗೊಂಡರು. ಈ ಮೂಲಕ ಕ್ಷೇತ್ರದಾದ್ಯಂತ ಬಲಿಷ್ಠ 'ಮೈತ್ರಿ ಶಕ್ತಿ' ಪ್ರದರ್ಶನಕ್ಕೆ ನಾಂದಿ ಹಾಡಲಾಯಿತು.




ಸಭೆಯನ್ನುದ್ದೇಶಿಸಿ ಮಾತನಾಡಿದ ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ್, "ಈ ಉಪಚುನಾವಣೆಯು ಅತ್ಯಂತ ನಿರ್ಣಾಯಕವಾಗಿದೆ. ಮೈತ್ರಿಕೂಟದ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಅವರ ಪರವಾಗಿ ಕಾರ್ಯಕರ್ತರು ಎಲ್ಲಿಯೂ ಗೊಂದಲಕ್ಕೆ ಅವಕಾಶ ನೀಡದೆ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ನಮ್ಮ ಅಭ್ಯರ್ಥಿ ಭಾರಿ ಬಹುಮತದೊಂದಿಗೆ ವಿಧಾನಸಭೆ ಪ್ರವೇಶಿಸುವುದು ಖಚಿತ" ಎಂದು ವಿಶ್ವಾಸ ವ್ಯಕ್ತಪಡಿಸಿದರು.

<u>ಗೆಲುವಿಗಾಗಿ ರೇಣುಕಾಚಾರ್ಯ ಕರೆ:</u> ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ರಾಜ್ಯ ಸರ್ಕಾರದ ವೈಫಲ್ಯಗಳ ವಿರುದ್ಧ ಜನಜಾಗೃತಿ ಮೂಡಿಸಿ, ಮೈತ್ರಿ ಅಭ್ಯರ್ಥಿಯ ಗೆಲುವಿಗೆ ಪ್ರತಿಯೊಬ್ಬ ಕಾರ್ಯಕರ್ತರು ಶ್ರಮಿಸಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ನೆರೆದಿದ್ದ ಕಾರ್ಯಕರ್ತರು ಮೈತ್ರಿ ಅಭ್ಯರ್ಥಿ ಮತ್ತು ವಂದೇ ಮಾತರಂ ಪರ ಘೋಷಣೆಗಳನ್ನು ಕೂಗುವ ಮೂಲಕ ಸಂಭ್ರಮಿಸಿದರು. ಈ ಮಹತ್ವದ ಸಭೆಯಲ್ಲಿ ಬಿಜೆಪಿ ವಿಭಾಗ ಪ್ರಭಾರಿ ಟಿ.ಡಿ. ನಾಗರಾಜ್, ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಬಸವರಾಜ ನಾಯಕ್, ಎಚ್.ಎಸ್. ಶಿವಶಂಕರ್, ಶಿವಯೋಗಿ ಸ್ವಾಮಿ ಉಪಸ್ಥಿತರಿದ್ದರು. ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದ ಹಾಗೂ ಉಭಯ ಪಕ್ಷಗಳ ಪ್ರಮುಖ ಮುಖಂಡರಾದ ಅಜಯ್ ಕುಮಾರ್, ಲೋಕಿಕೆರೆ ನಾಗರಾಜ್, ಮಲ್ಲಿಕಾರ್ಜುನ್ ಕಾರ್ಯಕರ್ತರು ಭಾಗವಹಿಸಿದ್ದರು.

## ವೇಮಗಲ್‌ಗೆ ನೂತನ ಬೆಸ್ಕಾಂ ಉಪವಿಭಾಗ: ವಿ.ಆರ್. ಸುದರ್ಶನ್ ಹರ್ಷ

ಕೋಲಾರ

ಇಲ್ಲಿನ ಗ್ರಾಮೀಣ ಬೆಸ್ಕಾಂ ಉಪವಿಭಾಗವನ್ನು ವಿಭಜಿಸಿ, ವೇಮಗಲ್‌ನಲ್ಲಿ ನೂತನ ಬೆಸ್ಕಾಂ ಉಪವಿಭಾಗವನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಅವರ ಸುದೀರ್ಘ ಮನವಿಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಈ ಭಾಗದ ವಿದ್ಯುತ್ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗುವ ನಿರೀಕ್ಷೆ ಮೂಡಿದೆ.



<u>ಕೈಗಾರಿಕಾ ಹಬ್‌ಗೆ ಬಲ:</u> ವೇಮಗಲ್ ಮತ್ತು ನರಸಾಪುರ ಕೈಗಾರಿಕಾ ಪ್ರದೇಶಗಳು ವೇಗವಾಗಿ ಬೆಳೆಯುತ್ತಿದ್ದು, ಇಲ್ಲಿ ನೂರಾರು ಜಾಗತಿಕ ಮತ್ತು ಭಾರತೀಯ ಉತ್ಪಾದನಾ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಈ ಬೃಹತ್ ಕೈಗಾರಿಕಾ ಸಮೂಹಕ್ಕೆ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಪೂರೈಕೆ ಮಾಡುವ ಉದ್ದೇಶದಿಂದ ಪ್ರತ್ಯೇಕ ಉಪವಿಭಾಗದ ಅಗತ್ಯವಿತ್ತು. ಇದನ್ನು ಮನವರಿಕೆ ಮಾಡಿಕೊಟ್ಟಿದ್ದ ಸುದರ್ಶನ್ ಅವರ ಪ್ರಯತ್ನಕ್ಕೆ ಬೆಸ್ಕಾಂನ 140ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ಅನುಮೋದನೆ ಸಿಕ್ಕಿದೆ.

<u>ನೂತನ ಉಪವಿಭಾಗದ ವ್ಯಾಪ್ತಿ:</u> ಬೆಸ್ಕಾಂ ಪ್ರಧಾನ ವ್ಯವಸ್ಥಾಪಕ ಡಾ. ಬಿ.ಆರ್. ದಯಾನಂದ್ ಹೊರಡಿಸಿರುವ ಆದೇಶದಂತೆ.

ಕ್ಯಾಲನೂರು, ನರಸಾಪುರ ಮತ್ತು ವೇಮಗಲ್ ಕಾರ್ಯ ಮತ್ತು ಪಾಲನ ಘಟಕಗಳು ನೂತನ ವೇಮಗಲ್ ಉಪವಿಭಾಗದ ವ್ಯಾಪ್ತಿಗೆ ಬರಲಿವೆ.

ಇದುವರೆಗೆ ಸಹಾಯಕ ಇಂಜಿನಿಯರ್ ಹುದ್ದೆ ಹೊಂದಿದ್ದ ವೇಮಗಲ್ ಕಚೇರಿಯು ಇನ್ನು ಮುಂದೆ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಚೇರಿಯಾಗಿ ಮೇಲ್ದರ್ಜೆಗೇರಲಿದೆ.

ನೂತನ ಉಪವಿಭಾಗಕ್ಕೆ ಅಗತ್ಯವಾದ ವಾಹನ ಸೌಲಭ್ಯ, ಕಟ್ಟಡ ಮತ್ತು ಕಂಪ್ಯೂಟರ್‌ಗಳನ್ನು ಒದಗಿಸಲು ಸಂಬಂಧಪಟ್ಟ ಅಧೀಕ್ಷಕ ಇಂಜಿನಿಯರ್‌ಗೆ ಸೂಚಿಸಲಾಗಿದೆ. ಮುಂದಿನ 15 ದಿನದೊಳಗಾಗಿ ಈ ನೂತನ ಕಚೇರಿ ಕಾರ್ಯಾರಂಭ ಮಾಡಲಿದೆ. ವಿವಿಧ ದರ್ಜೆಯ ಹುದ್ದೆಗಳ ಮಂಜೂರಾತಿ ಕುರಿತು ಪ್ರತ್ಯೇಕ ಆದೇಶ ಹೊರಬರಲಿದೆ.

ತಮ್ಮ ಮನವಿಗೆ ಸ್ಪಂದಿಸಿ ವೇಮಗಲ್ ಭಾಗದ ಬೆಳವಣಿಗೆಗೆ ಸಹಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಇಂಧನ ಸಚಿವ ಕೆ.ಜೆ. ಜಾರ್ಜ್ ಮತ್ತು ಬೆಸ್ಕಾಂ ಎಂಡಿ ಶಿವಶಂಕರ್ ಅವರಿಗೆ ವಿ.ಆರ್. ಸುದರ್ಶನ್ ಧನ್ಯವಾದ ಸಲ್ಲಿಸಿದ್ದಾರೆ. "ವಿದ್ಯುತ್ ಸರಬರಾಜಿನಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಮತ್ತು ತಾಂತ್ರಿಕ ಸಮಸ್ಯೆಗಳಿಗೆ ಸ್ಥಳೀಯವಾಗಿಯೇ ಶೀಘ್ರ ಪರಿಹಾರ ಕಂಡುಕೊಳ್ಳಲು ಈ ನಿರ್ಧಾರ ಸಹಕಾರಿಯಾಗಲಿದೆ" ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

## ಕಾಡಾನೆಗಳ ಸಂತತಿ ವೃದ್ಧಿ: ರೈತರ ಜಮೀನುಗಳಿಗೆ ದಾಳಿ, ಬೆಳೆ ನಾಶ

ರಾಮನಗರ

ಇತ್ತೀಚಿನ ದಿನಗಳಲ್ಲಿ ಕಾಡಾನೆಗಳ ಸಂತತಿ ವೃದ್ಧಿಯಾಗಿರುವ ಪರಿಣಾಮ ರೈತರ ಕೃಷಿ ಜಮೀನುಗಳ ಮೇಲಿನ ದಾಳಿ ದಿನೇ ದಿನೇ ಹೆಚ್ಚಾಗುತ್ತಿದೆ. ಹಸಿರು ಬೆಳೆಯ ರುಚಿಹಿಡಿದ ಕಾಡಾನೆಗಳು ಗ್ರಾಮೀಣ ಭಾಗದ ತೋಟಗಳಲ್ಲೆ ಬೀಡು ಬಿಡುತ್ತಿದ್ದು ರೈತಕುಟುಂಬಗಳ ನಿದ್ದೆಗೆಡಿಸಿವೆ.

ಕಾಡಾನೆಗಳು ಈಗ ಸಂರಕ್ಷಿತ ಅರಣ್ಯ ಪ್ರದೇಶ ಮಾತ್ರವಲ್ಲದೇ ಗ್ರಾಮೀಣ ಭಾಗದ ತೋಟಗಳಲ್ಲಿಯೂ ನೆಲೆಸಲು ಆರಂಭಿಸಿವೆ. ಕಾಡಿನಲ್ಲಿ ಒಣಗಿದ ಬಿದಿರು ಸೊಪ್ಪು ತಿನ್ನಲೊಪ್ಪದ ಪುಂಡಾನೆಗಳು ಆಹಾರಕ್ಕಾಗಿ ರೈತರ ಜಮೀನುಗಳನ್ನು ಟಾರ್ಗೆಟ್ ಮಾಡಿಕೊಂಡಿವೆ. ಕತ್ತಲಾಗುತ್ತಿದ್ದಂತೆ ಕೃಷಿ ಜಮೀನುಗಳಿಗೆ ದಾಳಿಯಿಟ್ಟು ಪಂಪ್‌ಸೆಟ್ ನೀರಿನಿಂದ ಬೆಳೆದ ತೆಂಗು, ಬಾಳೆ, ಮಾವು, ಹಲಸು, ಮಕ್ಕೆಜೋಳ, ರಾಗಿಬೆಳೆ ಸೇರಿದಂತೆ ನಾನಾ ಫಸಲುಗಳನ್ನು ತಿನ್ನುವುದಲ್ಲದೆ ಕೃಷಿ ಯಂತ್ರೋಪಕರಣಗಳನ್ನು ನಾಶಪಡಿಸುತ್ತಿವೆ. ಇದರಿಂದ ರೈತ ಭಾರಿ ಪ್ರಮಾಣದ ನಷ್ಟ ಅನುಭವಿಸುವಂತಾಗಿದೆ.

ಅರಣ್ಯ ಇಲಾಖಾಧಿಕಾರಿಗಳ ಸಮೀಕ್ಷೆ ಪ್ರಕಾರ ಇತ್ತೀಚಿನ ವರ್ಷಗಳಲ್ಲಿ ಕಾಡಾನೆಗಳ ಸಂತತಿ ಅಧಿಕವಾಗಿದ್ದು ಕಾವೇರಿ ವನ್ಯಜೀವಿ ಧಾಮ ಪ್ರದೇಶದಲ್ಲೇ ಸುಮಾರು 300 ಕಾಡಾನೆಗಳಿವೆ ಎಂದು ಅಂದಾಜಿಸಲಾಗಿದೆ. ಈ ಪೈಕಿ ಕೆಲವು ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ಹಾಗೂ ಕಾವೇರಿ ವನ್ಯಜೀವಿ ಧಾಮಗಳ ನಡುವೆ ಇರುವ ಸಂರಕ್ಷಿತ ಅರಣ್ಯದಲ್ಲಿ ಓಡಾಡುತ್ತವೆ. ಇನ್ನೂ ಕೆಲವು ಕಾಡಾನೆಗಳು ರೈತರು ಬೆಳೆದ ಫಸಲುಗಳ ರುಚಿಕಂಡು ಕಾಡಿಗೆ ಹಿಮ್ಮೆಟ್ಟಿಸಿದರೂ ತೆರಳದೆ ಹಿಂದಿರುಗಿ ಬರುತ್ತವೆ.

ಬಿಡದಿ ಸುತ್ತಮುತ್ತಲ ಗ್ರಾಮಗಳಲ್ಲಿ ಇತ್ತೀಚೆಗೆ ಕಾಡಾನೆಗಳ ಉಪಟಳ ಮುಂದುವರೆದಿದ್ದು ರಾತ್ರಿವೇಳೆ ಜಮೀನಿಗೆ ನುಗ್ಗಿ ಸಿಕ್ಕ ಬೆಳೆಯನ್ನು ತಿಂದು ನಾಶಪಡಿಸುತ್ತಿವೆ. ಕೆಲದಿನಗಳ ಹಿಂದೆಯಷ್ಟೇ ತೊರೆದೊಡ್ಡಿ ಬಳಿ ಖಾಸಗಿ ಜಮೀನಿನಲ್ಲಿ ಕಾಡಾನೆಗಳು ಕಾಣಿಸಿಕೊಂಡು ರಾತ್ರಿ ವೇಳೆಗೆ ಅರಣ್ಯ ಇಲಾಖೆ ಸಿಬ್ಬಂದಿ ಕಾಡಿಗಟ್ಟಿದ್ದರು. ನಂತರದಲ್ಲಿ ಬಾನಂದೂರು ಗೊಲ್ಲಹಳ್ಳಿ ಬಳಿ ಮೂರು ಕಾಡಾನೆಗಳು ಹಾಡು ಹಗಲಲ್ಲೇ ಪ್ರತ್ಯಕ್ಷವಾಗಿ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದವು. ಇದೀಗ ಒಂಟಿ ಸಲಗ ಉಪಟಳ ಮುಂದುವರೆಸಿದೆ.



> ಕಾಡಾನೆಗಳು ಕೃಷಿ ಜಮೀನಿಗೆ ನುಗ್ಗಿ ಬೆಳೆ ನಾಶಪಡಿಸುತ್ತಿರುವ ಕಾರಣ ಹಲವು ರೈತರು ಬೇಸಾಯವನ್ನೇ ಕೈಬಿಟ್ಟಿರುತ್ತಾರೆ. ಸಾವಿರಾರು ಎಕರೆಯಷ್ಟು ಜಮೀನು ವ್ಯವಸಾಯವಿಲ್ಲದೆ ಬೀಳು ಬಿಟ್ಟಿರುವುದು ರೈತರ ಆರ್ಥಿಕತೆ ಕುಸಿತಕ್ಕೆ ಕಾರಣವಾಗಿದೆ. ತೆಂಗು, ಬಾಳೆ, ಭತ್ತ, ಮಾವು, ರಾಗಿ. ಜೋಳ, ಸೀಮೆಹುಲ್ಲು ಮುಂತಾದ ಬೆಳೆಗಳು ಕಾಡಾನೆ ದಾಳಿಗೆ ನಾಶವಾಗಿದ್ದು ರೈತರು ಆತ್ಮಸ್ಥೈರ್ಯ ಕಳೆದುಕೊಂಡಿದ್ದಾರೆ.
> -ಹೇಮಂತ್‌ಕುಮಾರ್, ರೈತ, ಹೆಗ್ಗಡಗೆರೆ.

> ಬಿಡದಿ ಭಾಗದಲ್ಲಿ ಕಾಡಾನೆಗಳ ಉಪಟಳ ಮುಂದುವರೆದಿದ್ದು ಇದರಿಂದ ರೈತರ ಬೆಳೆ ಮಾತ್ರವಲ್ಲದೇ ಕೃಷಿ ಉಪಕರಣಗಳು ನಾಶವಾಗುತ್ತಿವೆ. ಇತ್ತೀಚಿಗೆ ಬಿಡದಿಯ ಬಾನಂದೂರು, ಗೊಲ್ಲಹಳ್ಳಿವರೆಗೆ ಕಾಡಾನೆಗಳು ಬರುತ್ತಿವೆ. ಸಧ್ಯ ಅಲ್ಲಿರುವ ಟೊಯೋಟಾ ಸಂಸ್ಥೆಯ ಕಾರ್ ಪಾರ್ಕ್‌ಗೆ ಕಾಲಿಟ್ಟಿಲ್ಲ. ಒಂದು ವೇಳೆ ಒಳಪ್ರವೇಶಿಸಿದ್ದರೆ ಭಾರಿ ಪ್ರಮಾಣದ ನಷ್ಟವೇ ಉಂಟಾಗುತ್ತಿತ್ತು.
> -ಮಹಮ್ಮದ್ ಮನ್ಸೂರ್, ಆರ್‌ಎಫ್‌ಒ, ರಾಮನಗರ ವಲಯ.

ರಸಭರಿತ ಬೆಳೆಗಳನ್ನು ತಿಂದ ಪುಂಡಾನೆಗಳು ವಾಪಸ್ ತೆರಳುವಾಗ ರೈತರ ಜಮೀನುಗಳಲ್ಲಿರುವ ಮಾವು, ಹಲಸು ಹಾಗೂ ತೆಂಗಿನ ಮರಗಳನ್ನು ಮುರಿಯುವುದು, ರಾಗಿ ಮತ್ತು ಭತ್ತದ ಬೆಳೆಗಳನ್ನು ತುಳಿದು ಹಾಳುಮಾಡುವುದು, ಬೋರ್‌ವೆಲ್ ಮತ್ತಿತರ ಕೃಷಿ ಯಂತ್ರೋಪಕರಣ ನಾಶಪಡಿಸುತ್ತಿರುವ ಉದಾಹರಣೆಗಳಿವೆ. ರಾತ್ರಿ ವೇಳೆ ಕಾಡಾನೆಗಳು ಊರ ಸಮೀಪದ ಜಮೀನುಗಳಿಗೆ ಬರುತ್ತಿರುವುದರಿಂದ ಗ್ರಾಮಸ್ಥರು ಜೀವಭಯದಲ್ಲಿ ಓಡಾಡುವಂತಾಗಿದೆ.

ಸಂರಕ್ಷಿತ ಮೀಸಲು ಅರಣ್ಯ ಪ್ರದೇಶಗಳ ಮೂಲಕ ಸುಮಾರು 25 ರಿಂದ 30 ಕಾಡಾನೆಗಳು ರೈತರ ಜಮೀನುಗಳಿಗೆ ನಿರಂತರ ಲಗ್ಗೆಯಿಡುತ್ತಿದ್ದು ಇದೇ ಮಾರ್ಚ್ ತಿಂಗಳಲ್ಲಿ ಕಾಡಾನೆಗಳ ಉಪಸ್ಥಿತಿ ಹಂದಿಗುಂದಿ ಮೀಸಲು ಅರಣ್ಯಪ್ರದೇಶದ ತುಂಬೇನಹಳ್ಳಿ, ಬೆಣ್ಣಹಳ್ಳಿ ಗ್ರಾಮಗಳ ಸಹರದ್ದಿನಲ್ಲಿ ತಲಾ 4 ಕಾಡಾನೆಗಳು ಬೆಳೆಯನ್ನು ನಾಶ ಮಾಡಿರುತ್ತವೆ.

ಚನ್ನಪಟ್ಟಣ ವಲಯದ ಚಿಕ್ಕಮಣ್ಣುಗುಡ್ಡೆ ಮೀಸಲು ಅರಣ್ಯ ಪ್ರದೇಶ ವ್ಯಾಪ್ತಿಯ ದೇವರದೊಡ್ಡಿ ಗ್ರಾಮದಲ್ಲಿ ಒಂಟಿ ಸಲಗದಿಂದ ಬೆಳೆ ನಾಶವಾಗಿದೆ. ತೆಂಗಿನಕಲ್ಲು ಮೀಸಲು ಅರಣ್ಯ ಪ್ರದೇಶದಿಂದ ಕಾಡನಕುಪ್ಪೆ, ದೊಡ್ಡನಹಳ್ಳಿ, ಬ್ರಹ್ಮಣಿಪುರ ಗ್ರಾಮಗಳಲ್ಲಿ 8 ಕಾಡಾನೆಗಳಿಂದ ಬೆಳೆ ಹಾನಿಯಾಗಿರುತ್ತದೆ. ಸಾತನೂರು ವಲಯದ ಕಬ್ಬಾಳು ಮೀಸಲು ಅರಣ್ಯ ವ್ಯಾಪ್ತಿಯಲ್ಲಿ ಕುರುಬಳ್ಳಿದೊಡ್ಡಿ ಗ್ರಾಮದಲ್ಲಿ 2 ಕಾಡಾನೆಗಳು ಬೆಳೆನಾಶ ಮಾಡಿವೆ.

ತೈಲೂರು ಮೀಸಲು ಅರಣ್ಯ ಪ್ರದೇಶದ ಗೇರಹಳ್ಳಿಗುಡ್ಡೆ ಆಸುಪಾಸಿನಲ್ಲಿ ಹಾಗೂ ಯಲವಳ್ಳಿ ಗ್ರಾಮದ ಬಳಿ ಎರಡು ಕಾಡಾನೆಗಳಿಂದ ಬೆಳೆ ಹಾನಿಯಾಗಿದೆ. ಕನಕಪುರ ತಾಲ್ಲೂಕಿನ ಬೆಟ್ಟಳ್ಳಿವಾಡೆ ಮೀಸಲು ಅರಣ್ಯ ಪ್ರದೇಶದ ಬಿ ಬ್ಲಾಕ್‌ನಲ್ಲಿ ಒಂದು ಸಲಗ ನೆಲೆಸಿದೆ. ಬೆಂಗಳೂರು ದಕ್ಷಿಣ ಜಿಲ್ಲೆ ವ್ಯಾಪ್ತಿಯ ಸಾತನೂರು ಭಾಗದಲ್ಲಿ 5, ಚನ್ನಪಟ್ಟಣ-12, ರಾಮನಗರ-4, ಕನಕಪುರ-3 ಸೇರಿ ಒಟ್ಟು 24 ಕಾಡಾನೆಗಳು ನೆಲೆಸಿರುವುದು ಕಂಡುಬಂದಿದೆ.

# ದೇವನಹಳ್ಳಿಯಲ್ಲಿ ಪಾರದರ್ಶಕ ಹರಾಜು: ಪುರಸಭೆ ಆದಾಯಕ್ಕೆ ಬಲ!

ದೇವನಹಳ್ಳಿ

"ಪುರಸಭೆಯ ಆದಾಯವನ್ನು ಹೆಚ್ಚಿಸುವ ಮೂಲಕ ಸಾರ್ವಜನಿಕರಿಗೆ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ನಾವು ಬದ್ಧರಾಗಿದ್ದೇವೆ. ಇದಕ್ಕಾಗಿ ಪಟ್ಟಣದ ವಿವಿಧೆಡೆ ಸ್ಟ್ಯಾಂಡ್ ಶುಲ್ಕ ಹಾಗೂ ನೆಲವಳಿ ಸುಂಕ ವಸೂಲಾತಿಗೆ ಪಾರದರ್ಶಕವಾಗಿ ಬಹಿರಂಗ ಹರಾಜು ಪ್ರಕ್ರಿಯೆ ನಡೆಸಲಾಗುತ್ತಿದೆ," ಎಂದು ಪುರಸಭಾ ಮುಖ್ಯಾಧಿಕಾರಿ ಶಿವಮೂರ್ತಿ ತಿಳಿಸಿದರು.

ಪಟ್ಟಣದ ಪುರಸಭಾ ಕಾರ್ಯಾಲಯದ ಸಭಾಂಗಣದಲ್ಲಿ ನಡೆದ ಸಾರ್ವಜನಿಕ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.



**ಹರಾಜು ಪ್ರಕ್ರಿಯೆಯ ವಿವರ:** ಪುರಸಭೆ ವ್ಯಾಪ್ತಿಯ ಹೊಸ ಬಸ್ ನಿಲ್ದಾಣದ ಆವರಣ, ಹಳೆ ಬಸ್ ನಿಲ್ದಾಣ, ಪುರಸಭಾ ಕಚೇರಿ ಆವರಣ ಹಾಗೂ ತಾಲ್ಲೂಕು ಕಚೇರಿ ಮುಂಭಾಗ ಸೇರಿದಂತೆ ಪ್ರಮುಖ ಕಡೆಗಳಲ್ಲಿ ನಿಲುಗಡೆಯಾಗುವ ಖಾಸಗಿ ಬಸ್ಸುಗಳು, ಟೆಂಪೋ, ವ್ಯಾನ್ ಹಾಗೂ ದ್ವಿಚಕ್ರ ವಾಹನಗಳ ಮೇಲೆ ಸ್ಟ್ಯಾಂಡ್ ಶುಲ್ಕ ಮತ್ತು ಫುಟ್‌ಪಾತ್ ನೆಲವಳಿ ಸುಂಕವನ್ನು ಒಂದು ವರ್ಷದ ಅವಧಿಗೆ ಹರಾಜು ಮಾಡಲಾಗಿದೆ.

**ಗಮನಿಸಬೇಕಾದ ಪ್ರಮುಖ ಅಂಶಗಳು:**

**ನಿಷೇಧಿತ ಸ್ಥಳಗಳು:** ಇಂದಿರಾ ಕ್ಯಾಂಟೀನ್ ಪಕ್ಕದಲ್ಲಿರುವ ಹೊಸ ಮುಚ್ಚು ಹರಾಜು ಕಟ್ಟೆಗಳಿಂದ ಯಾವುದೇ ಸುಂಕ ವಸೂಲಿ ಮಾಡುವಂತಿಲ್ಲ.

**ಸಂತೆ ದಿನಗಳಿಗೆ ವಿನಾಯಿತಿ:** ತಾಲ್ಲೂಕು ಕಚೇರಿ ಆವರಣದಲ್ಲಿ ಪ್ರತಿ ಬುಧವಾರ ಮತ್ತು ಭಾನುವಾರ ನಡೆಯುವ ಸಂತೆಯಲ್ಲಿ ಯಾವುದೇ ಸುಂಕ ವಸೂಲಾತಿಗೆ ಅವಕಾಶವಿಲ್ಲ.

**ಅಂತಿಮ ತೀರ್ಮಾನ:** ಸುಂಕ ವಸೂಲಿ ಸಂದರ್ಭದಲ್ಲಿ ಯಾವುದೇ ತಕರಾರು ಉಂಟಾದಲ್ಲಿ ಪುರಸಭೆಯ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಮುಖ್ಯಾಧಿಕಾರಿಗಳು ಸ್ಪಷ್ಟಪಡಿಸಿದರು.

"ಜನರು ಕಟ್ಟುವ ತೆರಿಗೆಯಿಂದಲೇ ಪಟ್ಟಣದ ಅಭಿವೃದ್ಧಿ ಸಾಧ್ಯ. ಈ ಹರಾಜಿನಿಂದ ಪುರಸಭೆಗೆ ಹೆಚ್ಚಿನ ಆದಾಯ ಬರಲಿದ್ದು, ಅದನ್ನು ಪಟ್ಟಣದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಬಳಸಲಾಗುವುದು," ಎಂದು ಅವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ಮಾಜಿ ಪುರಸಭಾಧ್ಯಕ್ಷ ಎಂ. ಮೂರ್ತಿ, ಕಂದಾಯ ಅಧಿಕಾರಿ ರಮೇಶ್ ಬಾಬು, ಕಂದಾಯ ನಿರೀಕ್ಷಕ ಮಂಜುನಾಥ್, ಶ್ರೀನಿವಾಸ್, ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಮಂಜಪ್ಪ ಹಾಗೂ ಪುರಸಭೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಮಳೆಯ ಆರ್ಭಟ: ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ ಮಾಡಿದ ವರುಣ

ಎಂ.ಕೃಷ್ಣಪ್ಪ
ಚಿಕ್ಕಬಳ್ಳಾಪುರ

ಅಕಾಲಿಕ ಮಳೆ ಮತ್ತು ಆಲಿಕಲ್ಲು ಮಳೆಯಿಂದಾಗಿ ಚಿಕ್ಕಬಳ್ಳಾಪುರ ತಾಲೂಕಿನ ಅಡಿವಿಗೊಲ್ಲವಾರಹಳ್ಳಿ ಮಂಚನಬಲೆ, ಅಜ್ಜಾವರ ಕಡೆಗಳಲ್ಲಿನ ದ್ರಾಕ್ಷಿ ಬೆಳೆಗಳು ಭಾರಿ ನಷ್ಟ ಅನುಭವಿಸಿವೆ.

ತಾಲೂಕಿನ ಅಡವಿ ಗೊಲ್ಲವಾರಹಳ್ಳಿ ಗ್ರಾಮದ ದಯಾನಂದ ಎಂಬುವರಿಗೆ ಸೇರಿದ ಒಂದು ಎಕರೆ ಪ್ರದೇಶದಲ್ಲಿನ ಕೊಯ್ಲು ಹಂತದಲ್ಲಿದ್ದ ದ್ರಾಕ್ಷಿ ಕಾಯಿ ಮೇಲೆ ಬಿದ್ದ ಆಲಿಕಲ್ಲು ದ್ರಾಕ್ಷಿ ತೋಟದ ಕಾಯಿ ಎರಡು ಹೋಳು ಮಾಡಿದಂತೆ ಸೀಳುಬಿಟ್ಟಿದೆ ತೋಟದ ಬೆಳೆಯಲೆಲ್ಲ ಬೆಳೆ ಮಕಾಳಿ ಬಂದಿದ್ದು ರೈತ ಆನಂದ ಕಂಗಲಾಗಿದ್ದಾನೆ ದಯಾನಂದ ಎಂಬುದು ಸೇರಿದ ದ್ರಾಕ್ಷಿ ಸೇರಿದಂತೆ ದ್ರಾಕ್ಷಿಯ ಸಮೀಪವಿದ್ದ ರೋಜಾ ಹೂವಿನ ಗಿಡವೂ ಸಹಾ ಆಲಿಕಲ್ಲು ಸಹಿತ ಮಳೆ ಮತ್ತು ಗಾಳಿಗೆ ಗಿಡ ಕಿತ್ತು ಬಂದಿದೆ ಇದರಿಂದ ರೈತ ಕಂಗಾಲಾಗಿದ್ದಾನೆ.

ಸಾಲ– ಸೋಲ ಮಾಡಿ ಇದ್ದ ಸ್ವಲ್ಪ ದರ ನೀರಿನಲ್ಲಿ ಬೆಳೆದ ಬೆಳೆ ರೈತನಿಗೆ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ.

ಔಷಧಿ ಮತ್ತು ರಸಗೊಬ್ಬರಗಳ ಬೆಲೆ ಏರಿಕೆಯಲ್ಲೂ ಬೆಳೆಯನ್ನು ಹುಲುಸಾಗಿ ಬೆಳೆದಿದ್ದ ಇಂತಹ ಬೆಳೆ ಇದೀಗ ನಷ್ಟ ಉಂಟಾಗಿ ರೈತ ದಯಾನಂದ ಅವರು ಲಕ್ಷಾಂತರ ರೂಪಾಯಿ ಸಾಲದ ಸುಳಿಗೆ ಸಿಲುಕಿದ್ದಾರೆ.



ಬೆಳೆ ನಾಶ: ಮಳೆ ಹನಿಗಳು ಹಸಿ ದ್ರಾಕ್ಷಿಯ ಮೇಲೆ ಬಿದ್ದಾಗ ಸಕ್ಕರೆ ಅಂಶ ಕಡಿಮೆಯಾಗಿ ದ್ರಾಕ್ಷಿ ಹುಳಿಯಾಗುತ್ತದೆ, ಇದರಿಂದ ಮಾರುಕಟ್ಟೆ ಮೌಲ್ಯ ಕುಸಿಯುವುದು ಒಂದು ಕಡೆಯಾದರೆ ಬೆಳೆಯ ಮೇಲೆ ಆಲಿಕಲ್ಲು ಬಿದ್ದ ಕಾರಣ ಮಾರುಕಟ್ಟೆ ಮೌಲ್ಯ ಒಂದು ಕಡೆ ಇರಲಿ ದ್ರಾಕ್ಷಿ ಗಿಡದಲ್ಲಿಯೇ ಕೊಳೆತುಹೋಗಲಿದೆ ಎಂಬುದು ದ್ರಾಕ್ಷಿ ಬೆಳೆಗಾರರ ಮಾತಾಗಿದೆ ಆಲಿಕಲಿನದಾಗಿ ಹಾಲಿಕಲ್ಲಿನ ಮಳೆಯಿಂದಾಗಿ ತೇವಾಂಶ, ದ್ರಾಕ್ಷಿಯಲ್ಲಿ ನೈಟ್ರೋಜನ್ ಪ್ರಮಾಣ ಹೆಚ್ಚಾಗಿ, ಬೇಗನೆ ಕೊಳೆತು ಹೋಗಲಿದೆ

ಆರ್ಥಿಕ ಸಂಕಷ್ಟ: ಕಳೆದ ರಾತ್ರಿ ಈ ಭಾಗದಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಚಿಕ್ಕಬಳ್ಳಾಪುರ ಅಡವಿಗೊಲ್ಲವಾರಹಳ್ಳಿ ಸೇರಿದಂತೆ ಮಂಚನಬೆಲೆ ದಿಬ್ಬೂರು ಸುತ್ತಮುತ್ತಲಿನ ದ್ರಾಕ್ಷಿತೋಟ ಹೂವಿನ ತೋಟ ರೇಷ್ಮೆಬೆಳೆ ನಾಶವಾಗಿದ್ದು, ದ್ರಾಕ್ಷಿ ಬೆಳೆಗಾರರು ಸಾಲದ ಸುಳಿಗೆ ಸಿಲುಕುವಂತಾಗಿದೆ.

ಬೆಳೆ ನಷ್ಟ ಉಂಟಾಗಿರುವ ರೈತರ ತೋಟಗಳತ್ತ ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಹಸಿಲ್ದಾರ್ ಭೇಟಿ ನೀಡಿ ಬೆಳೆ ಪರಿಶೀಲ ನಡೆಸಿ ಸಂಸ್ಕರಣೆ ಹಂತದಲ್ಲಿರುವ ಬೆಳೆ ಹಾನಿಗೆ ಜಿಲ್ಲಾಡಳಿತ ಪರಿಹಾರ ನೀಡಬೇಕೆಂದು ರೈತರು ಆಗ್ರಹಿಸಿದ್ದಾರೆ. ಚಿಕ್ಕಬಳ್ಳಾಪುರ ತಾಲೂಕಿನ ಅಡಿವಿಗೊಲ್ಲ ವಾರಹಳ್ಳಿ ಗ್ರಾಮದ ದಯಾನಂದ ಎಂಬುವರಿಗೆ ಸೇರಿದ



ಸರಿಸುಮಾರು ಒಂದು ಎಕರೆ ಪ್ರದೇಶದಲ್ಲಿನ ದ್ರಾಕ್ಷಿ ಮತ್ತು ರೋಜಾ ಹೂವಿನ ಬೆಳೆ ನಷ್ಟವಾಗಿದೆ ಕೈಗೆ ಬಂದ ತುತ್ತು ಬಾಯಿಗೆ ಬಂದಿಲ್ಲ ಎನ್ನುವಂತೆ ಇನ್ನೂ ಒಂದು ತಿಂಗಳಲ್ಲಿ ಕೊಯ್ಲು ಮಾಡಬೇಕಿದ್ದ ದ್ರಾಕ್ಷಿ ಅಕಾಲಿಕ ಮಳೆಗೆ ಸಿಲುಕಿ ನಷ್ಟ ಉಂಟಾಗಿದೆ

ರಾಸಾಯನಿಕ ಗೊಬ್ಬರ ಔಷಧಿ ಸೇರಿದಂತೆ ಕಾರ್ಮಿಕರ ಕೂಲಿ ಸೇರಿ 1 ಲಕ್ಷಕ್ಕೂ ಅಧಿಕ ಮೊತ್ತದ ಬೆಳೆ ನಷ್ಟಕ್ಕೆ ಗುರಿಯಾಗಿದೆ ರೈತ ದಯಾನಂದ ಅವರು ಸಾಲ ಸೋಲ ಮಾಡಿ ಹಾಕಿ ಬೆಳೆಯಲಾಗಿದ್ದ ಬೆಳೆ ಇದೀಗ ನೆಲಕಚ್ಚಿ ಕೈ ಚೆಲ್ಲಿ ಕುಳಿತಿದ್ದಾರೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಬೆಳೆ ನಷ್ಟಕ್ಕೆ ಒಳಗಾದ ರೈತರ ಸಂಕಷ್ಟ ತಿಳಿಸುವ ನಿಟ್ಟಿನಲ್ಲಿ ಮುಂದಾಗಿ ಪರಿಹಾರ ಘೋಷಿಸಬೇಕಿದೆ.

# ಹೆಣ್ಣು ಮಕ್ಕಳ ಆರೋಗ್ಯಕ್ಕೆ ಶ್ರೀರಕ್ಷೆ: ಉಚಿತ ಲಸಿಕಾ ಅಭಿಯಾನಕ್ಕೆ ಚಾಲನೆ

ಚಿಕ್ಕಬಳ್ಳಾಪುರ

ಜಿಲ್ಲೆಯ ಹೆಣ್ಣುಮಕ್ಕಳ ಭವಿಷ್ಯವನ್ನು ಸುರಕ್ಷಿತಗೊಳಿಸಲು ಮತ್ತು ಆರೋಗ್ಯ ಕಾಪಾಡಲು 14 ವರ್ಷದ ಎಲ್ಲಾ ಬಾಲಕಿಯರಿಗೆ ಉಚಿತವಾಗಿ ಹೆಚ್.ಪಿ.ವಿ ಲಸಿಕೆ ನೀಡುವ ಅಭಿಯಾನಕ್ಕೆ ಜಿಲ್ಲಾಡಳಿತ ಚಾಲನೆ ನೀಡಿದೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ



ಜಿಲ್ಲಾಧಿಕಾರಿ ಜಿ. ಪ್ರಭು ಅವರು, "ಹೆಣ್ಣುಮಕ್ಕಳ ಆರೋಗ್ಯವೇ ಜಿಲ್ಲೆಯ ಸುಭದ್ರ ಭವಿಷ್ಯ" ಎಂಬ ಆಶಯದೊಂದಿಗೆ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

**ಕ್ಯಾನ್ಸರ್ ತಡೆಗೆ ಲಸಿಕೆ ರಾಮಬಾಣ:**

ಗರ್ಭಕಂಠದ ಕ್ಯಾನ್ಸರ್ (Cervical Cancer) ತಡೆಗಟ್ಟಲು ಈ ಲಸಿಕೆ ಅತ್ಯಂತ ಪರಿಣಾಮಕಾರಿಯಾಗಿದೆ. 14 ವರ್ಷ ಮುಗಿದು 15 ವರ್ಷದೊಳಗಿನ ಬಾಲಕಿಯರಿಗೆ ಈ ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಈ ಲಸಿಕೆಯಿಂದ ಯಾವುದೇ ಅಡ್ಡಪರಿಣಾಮಗಳಿಲ್ಲ ಎಂದು ಸ್ಪಷ್ಟಪಡಿಸಿದ ಜಿಲ್ಲಾಧಿಕಾರಿಗಳು, ಲಸಿಕೆ ಪಡೆದ ಮಕ್ಕಳಿಗೆ ನಿಗದಿತ ತಂತ್ರಾಂಶದ ಮೂಲಕ ಲಸಿಕಾ ಪ್ರಮಾಣಪತ್ರ ನೀಡಲು ಸೂಚನೆ ನೀಡಿದರು.

**ಎಲ್ಲಿ ಮತ್ತು ಯಾವಾಗ ಲಭ್ಯ?**

ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಗರ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಲಸಿಕೆ ಲಭ್ಯವಿರುತ್ತದೆ.

**ದಿನ:** ಪ್ರತಿ ಬುಧವಾರ

**ಸಮಯ:** ಬೆಳಿಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ

**ವಿಧಾನ:** ಎಡಗೈ ತೋಳಿನ ಸ್ನಾಯುಗೆ (ಇಂಟ್ರಾಮಸ್ಕುಲರ್) ನೀಡಲಾಗುವುದು.

**ಜಿಲ್ಲೆಯ ಗುರಿ ಮತ್ತು ಸಿದ್ಧತೆ:** ಜಿಲ್ಲೆಯಲ್ಲಿ ಒಟ್ಟು 13,432 ಹದಿನಾಲ್ಕು ವರ್ಷದ ಹೆಣ್ಣುಮಕ್ಕಳನ್ನು ಗುರುತಿಸಲಾಗಿದ್ದು, ಈಗಾಗಲೇ 4,830 ಡೋಸ್ ಲಸಿಕೆ ಜಿಲ್ಲೆಗೆ ಬಂದಿದೆ. ಬಾಕಿ ಲಸಿಕೆಯನ್ನು ತರಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ. ಮಾರ್ಚ್ ಅಂತ್ಯ, ಏ. ಮತ್ತು ಮೇ–2026ರ ಅವಧಿಯಲ್ಲಿ ಜಿಲ್ಲಾದ್ಯಂತ ಬೃಹತ್ ಲಸಿಕಾ ಅಭಿಯಾನ ನಡೆಯಲಿದೆ.

**ಜಿಲ್ಲಾಧಿಕಾರಿಗಳ ಕಟ್ಟುನಿಟ್ಟಿನ ಸೂಚನೆ:**

ಎಲ್ಲಾ ಶಾಲೆಗಳಲ್ಲಿ ಮತ್ತು ಕ್ಷೇತ್ರ ಮಟ್ಟದಲ್ಲಿ ಲಸಿಕೆಯ ಬಗ್ಗೆ ವ್ಯಾಪಕ ಅರಿವು ಮೂಡಿಸಬೇಕು. ಆರೋಗ್ಯ ಇಲಾಖೆಯೊಂದಿಗೆ ಇತರ ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕೆಲಸ ಮಾಡಿ, ಜಿಲ್ಲೆಯನ್ನು ಗರ್ಭಕಂಠದ ಕ್ಯಾನ್ಸರ್ ಮುಕ್ತವಾಗಿಸಲು ಶ್ರಮಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಅತಿಕ್ ಪಾಷಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಮಹೇಶ್ ಕುಮಾರ್ ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# 45 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ

ರಾಮನಗರ

"ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತವಾಗಿದೆ ಎನ್ನುವ ವಿರೋಧ ಪಕ್ಷದವರ ಬೊಬ್ಬೆಗೆ ಬಿಡದಿ ಹೋಬಳಿಯಲ್ಲಿ ನಡೆಯುತ್ತಿರುವ 45 ಕೋಟಿ ರೂಪಾಯಿಗಳ ಅಭಿವೃದ್ಧಿ ಕೆಲಸಗಳೇ ಸಾಕ್ಷಿ," ಎಂದು ಕೆಆರ್‌ಡಿಸಿಎಲ್ ಅಧ್ಯಕ್ಷ ಹಾಗೂ ಶಾಸಕ ಎಚ್.ಸಿ. ಬಾಲಕೃಷ್ಣ ತಿರುಗೇಟು ನೀಡಿದರು.

ಬುಧವಾರ ಬಿಡದಿ ಪುರಸಭೆ ಹಾಗೂ ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಹಮ್ಮಿಕೊಂಡಿದ್ದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಲೋಕಾರ್ಪಣೆ ನೆರವೇರಿಸಿ ಅವರು ಮಾತನಾಡಿದರು.



**ಗ್ರಾಮೀಣ ಮೂಲಸೌಕರ್ಯಕ್ಕೆ ಒತ್ತು:** ಗ್ರಾಮೀಣಾಭಿವೃದ್ಧಿ ಇಲಾಖೆಯ ಅನುದಾನದಡಿ ಸುಮಾರು 4 ಕೋಟಿ ರೂಪಾಯಿಗಳಿಗೂ ಅಧಿಕ ವೆಚ್ಚದ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು.

**ವಾಜರಹಳ್ಳಿ ಹಾಗೂ ಮುತ್ತುರಾಯನಗುಡಿ ಪಾಳ್ಯ:** ತಲಾ 1 ಕೋಟಿ ರೂ. ವೆಚ್ಚದ ಸಂಪರ್ಕ ರಸ್ತೆ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಾಣ.

**ಮಾರಪ್ಪನಪಾಳ್ಯ, ಮರಲೇಗೌಡನದೊಡ್ಡಿ ಹಾಗೂ ಅಂಕನಹಳ್ಳಿ:** ತಲಾ 50 ಲಕ್ಷ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳು.

**ತಿಮ್ಮಪ್ಪನಪಾಳ್ಯ:** 30 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ

ಇದೇ ವೇಳೆ ವಂಡರ್‌ಲಾ ಸಂಸ್ಥೆಯ ಸಿಎಸ್‌ಆರ್ ನಿಧಿಯಡಿ ಬೋರೆಹಳ್ಳಿ ಮತ್ತು ಅಂಕನಹಳ್ಳಿಯಲ್ಲಿ ನಿರ್ಮಿಸಲಾದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಲೋಕಾರ್ಪಣೆಗೊಳಿಸಲಾಯಿತು.

**ಸಚಿವ ಸಂಪುಟ ಪುನಾರಚನೆಗೆ ಒತ್ತಾಯ:** ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕರು, ಸಚಿವ ಸಂಪುಟ ಬದಲಾವಣೆಯ ಕುರಿತು ಮಹತ್ವದ ಹೇಳಿಕೆ ನೀಡಿದರು. "ಸುಮಾರು 20 ಮಂದಿ ಸಚಿವರನ್ನು ಬದಲಿಸಿ, ಮೂರ್ನಾಲ್ಕು ಬಾರಿ ಗೆದ್ದಿರುವ ಹಿರಿಯ ಶಾಸಕರಿಗೆ ಅವಕಾಶ ನೀಡಬೇಕು ಎಂದು ನಾವು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇವೆ. ಹೈಕಮಾಂಡ್ ಸೂಚನೆಯಂತೆ ಎರಡೂವರೆ ವರ್ಷಗಳ ನಂತರ ಮಂತ್ರಿಮಂಡಲ ಬದಲಾವಣೆ ಮಾಡುವ ತೀರ್ಮಾನವನ್ನು ನೆನಪಿಸಿದ್ದೇವೆ. ಉಪಚುನಾವಣೆಯ ಬಳಿಕ ಈ ಬಗ್ಗೆ ವರಿಷ್ಠರೊಂದಿಗೆ ಚರ್ಚಿಸುವುದಾಗಿ ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ," ಎಂದರು.

**ಸಚಿವರ ನಡೆಗೆ ಅಸಮಾಧಾನ?**

ಸ್ಪೀಕರ್ ಯು.ಟಿ. ಖಾದರ್ ಅವರು ಸಚಿವರ ನಡೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಬಾಲಕೃಷ್ಣ, "ಆ ಅನುಭವ ನಮಗೂ ಆಗಿದೆ, ಅದಕ್ಕಾಗಿಯೇ ನಾವು ಬದಲಾವಣೆ ಬಯಸುತ್ತಿದ್ದೇವೆ. ಆದರೆ ಇದು ನಾಲ್ಕು ಗೋಡೆಗಳ ಮಧ್ಯೆ ಚರ್ಚಿಸುವ ವಿಚಾರವಾಗಿದ್ದು, ಬೀದಿಯಲ್ಲಿ ಹೇಳಲಾಗದು," ಎಂದು ಮಾರ್ಮಿಕವಾಗಿ ನುಡಿದರು.

ಕಾರ್ಯಕ್ರಮದಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್. ನಟರಾಜ್ ಗಾಣಕಲ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎಲ್. ಚಂದ್ರಶೇಖರ್, ಕೆಪಿಸಿಸಿ ಸದಸ್ಯ ಬ್ಯಾಟಪ್ಪ, ವಂಡರ್‌ಲಾ ವ್ಯವಸ್ಥಾಪಕ ರುದ್ರೇಶ್ ಸೇರಿದಂತೆ ಪುರಸಭೆ ಹಾಗೂ ಗ್ರಾಪಂ ಸದಸ್ಯರು ಭಾಗವಹಿಸಿದ್ದರು.

# ಕೆಂಪಮ್ಮ- ಪ್ಲೇಗಿನಮ್ಮ ಭಕ್ತಿ ಜಾತ್ರೆ ಆರಂಭ

ತಿಪಟೂರು

ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯ ಹಾಲ್ಕುರಿಕೆ ಗ್ರಾಮದಲ್ಲಿ ನೆಲೆಸಿರುವ ಶಕ್ತಿ ದೇವತೆಗಳಾದ ಶ್ರೀ ಕೆಂಪಮ್ಮ ದೇವಿ ಮತ್ತು ಶ್ರೀ ಪ್ಲೇಗಿನಮ್ಮ ದೇವಿಯ ವಾರ್ಷಿಕ ಜಾತ್ರಾ ಮಹೋತ್ಸವವು ಆರಂಭಗೊಂಡು ಇದೇ 23 ರವರೆಗೆ ಅತ್ಯಂತ ವೈಭವದಿಂದ ಜರುಗಲಿದೆ.

ಜಾತ್ರೆಯ ಪೂರ್ವಭಾವಿಯಾಗಿ ಈಗಾಗಲೇ ಇದೇ 18 ಮತ್ತು 19 ರಂದು ಅಮ್ಮನವರ ಮದವಣಗಿತ್ತಿ ಶಾಸ್ತ್ರ ಹಾಗೂ ಕಂಕಣಧಾರಣೆ ವಿಧಿವಿಧಾನಗಳು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರಿವೆ.

**ಜಾತ್ರಾ ಮಹೋತ್ಸವದ ಧಾರ್ಮಿಕ ಕಾರ್ಯಕ್ರಮಗಳ ವಿವರ:** ಶುಕ್ರವಾರ ಶ್ರೀ ಅಮ್ಮನವರ ಸನ್ನಿಧಿಯಲ್ಲಿ ಭಕ್ತಿಯ 'ಆರತಿಬಾನ' ಸಮರ್ಪಣೆ. ಶನಿವಾರ ದೇವಿಯರಿಗೆ



ಗಂಗಾಸ್ನಾನದ ನಸುಕಿನ ಸೇವೆ. ಸಂಜೆ ವಿಶೇಷ ಪುಷ್ಪಾಲಂಕೃತ ದೇವತೆಗಳ ಉತ್ಸವ ನಡೆಯಲಿದ್ದು, ಕೋಲಾಟ, ತಮಟೆ ವಾದ್ಯ, ಕೀಲುಕುದುರೆ ನರ್ತನ ಹಾಗೂ ವಿವಿಧ ಜಾನಪದ ಕಲಾತಂಡಗಳ ಮೆರವಣಿಗೆ ಮೆರುಗು ನೀಡಲಿವೆ. ರಾತ್ರಿ ಪ್ರಖ್ಯಾತ ಕಲಾವಿದರಿಂದ ರಸಮಂಜರಿ (ಆರ್ಕೆಸ್ಟ್ರಾ) ಕಾರ್ಯಕ್ರಮ ಆಯೋಜಿಸಲಾಗಿದೆ.

ಭಾನುವಾರ ಮಧ್ಯಾಹ್ನ ಶ್ರೀ ಅಮ್ಮನವರ ಭವ್ಯ ರಥೋತ್ಸವ ಜರುಗಲಿದೆ. ತದನಂತರ ಬನ್ನಿಮರ ಹತ್ತಿಸುವ ಶಾಸ್ತ್ರ, ಭದ್ರಕಾಳಿ ಕುಣಿತ ಮತ್ತು ಚಿಟ್ಟಿ ಮೇಳದೊಂದಿಗೆ ಮಣೆವು ಕಾರ್ಯಕ್ರಮ ನಡೆಯಲಿದೆ. ಆಗಮಿಸುವ ಭಕಾಧಿಗಳಿಗೆ ಬೃಹತ್ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದೆ.

ಸೋಮವಾರ ಜಾತ್ರೆಯ ಸಮಾರೋಪದ ಅಂಗವಾಗಿ ರೋಚಕ 'ಸಿಡಿ ಉತ್ಸವ' ಹಮ್ಮಿಕೊಳ್ಳಲಾಗಿದೆ.

ಗ್ರಾಮದ ಇತಿಹಾಸ ಪ್ರಸಿದ್ಧ ಈ ಜಾತ್ರಾ ಮಹೋತ್ಸವಕ್ಕೆ ಸುತ್ತಮುತ್ತಲ ಗ್ರಾಮಸ್ಥರು ಹಾಗೂ ಸಾವಿರಾರು ಭಕ್ತಾಧಿಗಳು

## ಬಹಿಷ್ಕೃತ ವರ್ಗಗಳ ಸಬಲೀಕರಣವೇ ಕಾನ್ಶಿರಾಮ್ ಗುರಿ: ವೆಂಕಟೇಶ್

ದೊಡ್ಡಬಳ್ಳಾಪುರ

"ಬಹುಜನರು ರಾಜಕೀಯ ಅಧಿಕಾರ ಪಡೆಯಬೇಕೆಂಬ ಹೆಬ್ಬಯಕೆಯಿಂದ ಕಾನ್ಶಿರಾಮ್ ಅವರು ಬಿಎಸ್‌ಪಿ ಪಕ್ಷವನ್ನು ಸ್ಥಾಪಿಸಿದರು. ಶೋಷಿತ ವರ್ಗಗಳ ಏಳಿಗೆಗಾಗಿ ಅವರ ಕೊಡುಗೆ ಅಪಾರ," ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದಿಗುಂದ ಪಿ. ವೆಂಕಟೇಶ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾಗಿದ್ದ ಬಹುಜನ ನಾಯಕ ಮಾನ್ಯ ಕಾನ್ಶಿರಾಮ್ ಅವರ 92ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

**ತತ್ವಗಳಲ್ಲಿ ರಾಜಿ ಮಾಡಿಕೊಳ್ಳದ ಮಹಾನಾಯಕ:** ಕಾನ್ಶಿರಾಮ್ ಅವರು 1978ರಲ್ಲಿ ಬಿಎಎಂಸಿಇಎಫ್ (BAMCEF) ಹಾಗೂ 1984ರಲ್ಲಿ ಬಹುಜನ ಸಮಾಜ ಪಕ್ಷವನ್ನು ಸ್ಥಾಪಿಸುವ ಮೂಲಕ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ರಾಜಕೀಯ ಅಸ್ತಿತ್ವ ತಂದುಕೊಟ್ಟರು. ಮಹಾತ್ಮ ಗಾಂಧಿ ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಅವರಂತೆ ಕಾನ್ಶಿರಾಮ್ ಅವರು ಎಂದಿಗೂ ತಮ್ಮ ತತ್ವಗಳಲ್ಲಿ ರಾಜಿ ಮಾಡಿಕೊಳ್ಳಲಿಲ್ಲ ಎಂದು ಸ್ಮರಿಸಿದರು.

**ಖಾಸಗೀಕರಣದ ವಿರುದ್ಧ ಧ್ವನಿ ಮತ್ತು ಚುನಾವಣಾ ಸಿದ್ಧತೆ:** "ಕೇಂದ್ರ ಸರ್ಕಾರದ ನೂತನ ನೀತಿಗಳಿಂದ ಸರ್ಕಾರಿ ಸಂಸ್ಥೆಗಳು ಖಾಸಗೀಕರಣಗೊಳ್ಳುತ್ತಿವೆ. ಇಂತಹ ಸಂಸ್ಥೆಗಳ ಉದ್ಯೋಗಗಳಲ್ಲಿ ಮೀಸಲಾತಿ ಜಾರಿಯಾಗಬೇಕು. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನಮ್ಮ ಪಾರ್ಟಿಯಿಂದ ಪ್ರತಿಯೊಂದು ಕ್ಷೇತ್ರದಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ಅಧಿಕಾರ ವಹಿಸಿಕೊಂಡವರ ದಬ್ಬಾಳಿಕೆ ಮತ್ತು ಭ್ರಷ್ಟಾಚಾರವನ್ನು ತೊಲಗಿಸುವುದೇ ನಮ್ಮ ಉದ್ದೇಶ," ಎಂದು ವೆಂಕಟೇಶ್ ಆರೋಪಿಸಿದರು. ರಾಷ್ಟ್ರೀಯ ಪಕ್ಷಗಳು ಹಣ ಮತ್ತು ಮದ್ಯ ಹಂಚಿ ಮತದಾರರನ್ನು ದಾರಿ ತಪ್ಪಿಸುತ್ತಿವೆ ಎಂದು ಅವರು ಇದೇ ಸಂದರ್ಭದಲ್ಲಿ ದೂರಿದರು.

**"ರಾಜಕೀಯ ಅಧಿಕಾರವೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ":** ಕಾರ್ಯಕ್ರಮದಲ್ಲಿ ಮಾತನಾಡಿದ ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ತಾಲ್ಲೂಕು ಅಧ್ಯಕ್ಷ ನಂಜೇಶ, "ರಾಜಕೀಯ ಅಧಿಕಾರವು ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂಬುದು ಕಾನ್ಶಿರಾಮ್ ಅವರ ಮೂಲ ಮಂತ್ರವಾಗಿತ್ತು. ಶೋಷಿತ ವರ್ಗಗಳನ್ನು ಬೆಳಕಿನೆಡೆಗೆ ತಂದು, ಅವರ ಹಕ್ಕುಗಳನ್ನು ಕೊಡಿಸಲು ಶ್ರಮಿಸಿದವರು ಅವರು," ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಕಾರ್ಯದರ್ಶಿಗಳಾದ ಮುನಿಕೃಷ್ಣಪ್ಪ, ನಾಗರಾಜು, ಬಸವರಾಜು, ಜಿಲ್ಲಾಧ್ಯಕ್ಷ ಮಹದೇವ, ಜಿಲ್ಲಾ ಖಜಾಂಚಿ ಹೇಮಾ ಚಕ್ರಪಾಣಿ

# ಸಂವಿಧಾನ ಶಿಲ್ಪಿಯ ಆದರ್ಶ ಪಾಲಿಸಲು ಕರೆ



ಶ್ರೀನಿವಾಸಪುರ

"ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಾವೆಲ್ಲರೂ ಸಾಗಬೇಕಿದೆ. ಆದರೆ, ತಾಲ್ಲೂಕು ಕೇಂದ್ರದಲ್ಲಿರುವ ಅಂಬೇಡ್ಕರ್ ಪ್ರತಿಮೆಯನ್ನು ನವೀಕರಿಸುವಲ್ಲಿ ತಾಲ್ಲೂಕು ಆಡಳಿತ ನಿರ್ಲಕ್ಷ್ಯ ತೋರುತ್ತಿರುವುದು ಖೇದಕರ," ಎಂದು ASSK ಸಂಸ್ಥಾಪಕ ಅಧ್ಯಕ್ಷ ಕೆ.ಎಂ. ಸಂದೇಶ್ ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕಿನ ತಾಡಿಗೋಳ್ ಕ್ರಾಸ್‌ನಲ್ಲಿ ಸ್ಥಳೀಯ ದಲಿತ ಮುಖಂಡರು ಒಗ್ಗಟ್ಟಾಗಿ ನಿರ್ಮಿಸಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

**ಗಡುವು ನೀಡಿದ ASSK ಅಧ್ಯಕ್ಷರು:** "ತಾಲ್ಲೂಕು ಕೇಂದ್ರದಲ್ಲಿರುವ ಅಂಬೇಡ್ಕರ್ ಪ್ರತಿಮೆಯನ್ನು ಗೌರವಯುತವಾಗಿ ರಕ್ಷಿಸುವುದು ಆಡಳಿತದ ಜವಾಬ್ದಾರಿ. ಬರುವ ಏ. 14ರ (ಅಂಬೇಡ್ಕರ್ ಜಯಂತಿ) ಒಳಗಾಗಿ ತಾಲ್ಲೂಕು ಆಡಳಿತವು ಪ್ರತಿಮೆಯ ನವೀಕರಣ ಕಾರ್ಯವನ್ನು ಪೂರ್ಣಗೊಳಿಸಬೇಕು. ಒಂದು ವೇಳೆ ವಿಫಲವಾದಲ್ಲಿ, ನಮ್ಮ ಸಂಘಟನೆಯ ವತಿಯಿಂದಲೇ ನಾವೆಲ್ಲರೂ ಸೇರಿ ಈ ಜಾಗದ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಿದ್ದೇವೆ," ಎಂದು ಅವರು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

**ಗಡುವು ನೀಡಿದ ASSK ಅಧ್ಯಕ್ಷರು:** "ತಾಲ್ಲೂಕು ಕೇಂದ್ರದಲ್ಲಿರುವ ಅಂಬೇಡ್ಕರ್ ಪ್ರತಿಮೆಯನ್ನು ಗೌರವಯುತವಾಗಿ ರಕ್ಷಿಸುವುದು ಆಡಳಿತದ ಜವಾಬ್ದಾರಿ. ಬರುವ ಏ. 14ರ (ಅಂಬೇಡ್ಕರ್ ಜಯಂತಿ) ಒಳಗಾಗಿ ತಾಲ್ಲೂಕು ಆಡಳಿತವು ಪ್ರತಿಮೆಯ ನವೀಕರಣ ಕಾರ್ಯವನ್ನು ಪೂರ್ಣಗೊಳಿಸಬೇಕು. ಒಂದು ವೇಳೆ ವಿಫಲವಾದಲ್ಲಿ, ನಮ್ಮ ಸಂಘಟನೆಯ ವತಿಯಿಂದಲೇ ನಾವೆಲ್ಲರೂ ಸೇರಿ ಈ ಜಾಗದ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಿದ್ದೇವೆ," ಎಂದು ಅವರು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

**ಗೋಪಲ್ಲಿ ಗ್ರಾಮದ ಸಮಸ್ಯೆಗಳ ಬಗ್ಗೆ ಚರ್ಚೆ:** ಇದೇ ಸಂದರ್ಭದಲ್ಲಿ ಚಿಂತಾಮಣಿ ತಾಲ್ಲೂಕಿನ ಗೋಪಲ್ಲಿ ಗ್ರಾಮದಲ್ಲಿ ಎದುರಾಗಿರುವ ವಿವಿಧ ನಾಗರಿಕ ಸಮಸ್ಯೆಗಳ ಬಗ್ಗೆಯೂ ಕೆ.ಎಂ. ಸಂದೇಶ್ ಚರ್ಚಿಸಿ, ಸಂಬಂಧಪಟ್ಟವರ ಗಮನ ಸೆಳೆಯುವ ಭರವಸೆ ನೀಡಿದರು. ತಾಡಿಗೋಳ್ ಕ್ರಾಸ್‌ನಲ್ಲಿ ದಲಿತ ಮುಖಂಡರು ಸ್ವಯಂಪ್ರೇರಿತರಾಗಿ ಪುತ್ಥಳಿ ಸ್ಥಾಪಿಸಿರುವುದನ್ನು ಅವರು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಗೊಲ್ಲಹಳ್ಳಿ ಎಂ. ಮುನಿರಾಜು, ಕುರುಮಾಕಲಹಳ್ಳಿ ಮೂರ್ತಿ, ಯಲಹಂಕ ಮಂಜು, ಗೋಪಲ್ಲಿ ಮಂಜುನಾಥ್, ಕೋಲಾರ ಚಲಪತಿ, ವೆಂಕಟಾಚಲಪತಿ, ಶ್ರೀಧರ್, ಅನಿಲ್ ಕುಮಾರ್, ಶಶಿಕಲಾ ನರಸಿಂಹರಾಜು, ಹಲಸೂರು ರವಿ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಎಲ್‌ಪಿಜಿ ದುರ್ಬಳಕೆ: 30 ಸಿಲಿಂಡರ್ ವಶ

ಚಿಕ್ಕಬಳ್ಳಾಪುರ

*ಜಿಲ್ಲೆಯಾದ್ಯಂತ ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಅಕ್ರಮವಾಗಿ ಬಳಸುತ್ತಿದ್ದ ಹೋಟೆಲ್ ಮತ್ತು ಬೇಕರಿಗಳ ಮೇಲೆ ಆಹಾರ ಇಲಾಖೆ ಹಾಗೂ ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ, ಒಟ್ಟು 30 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿದೆ.*

***ದಿಢೀರ್ ದಾಳಿ ಹೋಟೆಲ್, ಬಾರ್‌ಗಳಲ್ಲಿ ಅಕ್ರಮ ಪತ್ತೆ:*** *ಜಿಲ್ಲಾಧಿಕಾರಿ ಜಿ. ಪ್ರಭು ಅವರ ನಿರ್ದೇಶನದಂತೆ ನಡೆದ ಈ ಕಾರ್ಯಾಚರಣೆಯಲ್ಲಿ ತಂಡವು ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಟೀ ಅಂಗಡಿಗಳು, ಬೇಕರಿಗಳು, ಕಾಂಡಿಮೆಂಟ್ಸ್ ಹಾಗೂ ಬಾರ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ದಿಢೀರ್ ದಾಳಿ ನಡೆಸಿತು. ಈ ವೇಳೆ ಗೃಹ ಬಳಕೆಗೆ ಮೀಸಲಿಟ್ಟ ಸಿಲಿಂಡರ್‌ಗಳನ್ನು, ಲಾಭದ ಉದ್ದೇಶಕ್ಕಾಗಿ ವಾಣಿಜ್ಯ ಬಳಕೆಗೆ ಬಳಸುತ್ತಿರುವುದು ಕಂಡುಬಂದಿದೆ.*

***ಕಠಿಣ ಕಾನೂನು ಕ್ರಮ:*** *ಅಕ್ರಮವಾಗಿ ಸಿಲಿಂಡರ್ ಬಳಸುತ್ತಿದ್ದವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ–1955 ಹಾಗೂ ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್ (ಸರಬರಾಜು ಮತ್ತು ವಿತರಣೆ ನಿಯಂತ್ರಣ) ಆದೇಶ 2000 ರನ್ವಯ ಪ್ರಕರಣಗಳನ್ನು ದಾಖಲಿಸಲಾಗಿದೆ. ವಶಪಡಿಸಿಕೊಂಡ ಸಿಲಿಂಡರ್‌ಗಳನ್ನು, ಸರ್ಕಾರದ ಸುಪರ್ದಿಗೆ ಪಡೆಯಲಾಗಿದೆ.*

***ಜಿಲ್ಲಾಧಿಕಾರಿಗಳ ಕಟ್ಟುನಿಟ್ಟಿನ ಎಚ್ಚರಿಕೆ:*** *"ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳನ್ನು, ವಾಣಿಜ್ಯ ಉದ್ದೇಶಗಳಿಗಾಗಿ ಬಳಸುವುದು ಕಾನೂನುಬಾಹಿರ. ಸಾರ್ವಜನಿಕರು ಮತ್ತು ವ್ಯಾಪಾರಿಗಳು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ನಿಯಮ ಮೀರಿ ಅಕ್ರಮ ಎಸಗುವವರ ವಿರುದ್ಧ ಮುಂದಿನ ದಿನಗಳಲ್ಲೂ ಇಂತಹ ಕಾರ್ಯಾಚರಣೆ ಮುಂದುವರಿಯಲಿದ್ದು, ಕಠಿಣ ಕ್ರಮ ಜರುಗಿಸಲಾಗುವುದು," ಎಂದು ಜಿಲ್ಲಾಧಿಕಾರಿ ಜಿ. ಪ್ರಭು ಎಚ್ಚರಿಸಿದ್ದಾರೆ.*

# ಅದಾಲತ್‌ನಲ್ಲಿ 1,223 ಪ್ರಕರಣಗಳಿಗೆ ಮುಕ್ತಿ

ಶಿಡ್ಲಘಟ್ಟ

ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಆವರಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿಯಿಂದ ಆಯೋಜಿಸಲಾಗಿದ್ದ 'ರಾಷ್ಟ್ರೀಯ ಲೋಕ ಅದಾಲತ್' (ಜನತಾ ನ್ಯಾಯಾಲಯ) ಅಭೂತಪೂರ್ವ ಯಶಸ್ಸು ಕಂಡಿದ್ದು, ಒಟ್ಟು 1,223 ವಿವಿಧ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಲಾಯಿತು.

ಈ ಬಾರಿಯ ಲೋಕ ಅದಾಲತ್‌ನಲ್ಲಿ ಆಸ್ತಿ ವಿಭಾಗ, ಹಣಕಾಸಿನ ವ್ಯವಹಾರ ಸೇರಿದಂತೆ ಒಟ್ಟು 1,899 ಪ್ರಕರಣಗಳನ್ನು ಸಂಧಾನಕ್ಕಾಗಿ ಕೈಗೆತ್ತಿಕೊಳ್ಳಲಾಗಿತ್ತು. ಇದರಲ್ಲಿ 1,223 ಪ್ರಕರಣಗಳು ಯಶಸ್ವಿಯಾಗಿ ಇತ್ಯರ್ಥಗೊಂಡಿದ್ದು, ಒಟ್ಟು 3 ಕೋಟಿ 17 ಲಕ್ಷ 36 ಸಾವಿರ 928 ರೂಪಾಯಿಗಳನ್ನು ವಿವಿಧ ಪ್ರಕರಣಗಳ ಪರಿಹಾರದ ರೂಪದಲ್ಲಿ ಪಾವತಿಸಲಾಗಿದೆ.

"ನ್ಯಾಯಾಲಯದ ಅಲೆದಾಟ ತಪ್ಪಿಸಲು ಮತ್ತು ಸಮಯ ಉಳಿಸಲು ಲೋಕ ಅದಾಲತ್ ಅತ್ಯುತ್ತಮ ವೇದಿಕೆಯಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡಿದ್ದಾರೆ," ಎಂದು ಕಾನೂನು ಸೇವಾ ಸಮಿತಿ ತಿಳಿಸಿದೆ.

# ಗಗನಕ್ಕೇರಿದ ಮಾಂಸದ ದರ; ಹಬ್ಬದೂಟಕ್ಕೆ ವರ್ಷದೊಡಕುಗೆ ತಂದಿತು ಬೆಲೆ ಏರಿಕೆ ಕಂಟಕ!



ವಿಜಯಪುರ

ಯುಗಾದಿ ಮತ್ತು ರಂಜಾನ್ ಹಬ್ಬಗಳ ಸಡಗರದ ನಡುವೆ ವರ್ಷದೊಡಕು ಆಚರಣೆಗೆ ಸಜ್ಜಾದ ಜನರಿಗೆ ಮಾಂಸದ ಬೆಲೆ ಏರಿಕೆ ದೊಡ್ಡ ಹೊಡೆತ ನೀಡಿದೆ. ಕುರಿ, ಮೇಕೆ ಹಾಗೂ ಕೋಳಿ ಮಾಂಸದ ದರ ದಿಢೀರ್ ಏರಿಕೆಯಾಗಿದ್ದು, ಹಬ್ಬದೂಟ ಸವಿಯುವ ಗ್ರಾಹಕರು ಮಾರುಕಟ್ಟೆಯಲ್ಲಿ ಕಿಸೆ ಖಾಲಿ ಮಾಡಿಕೊಳ್ಳುವಂತಾಗಿದೆ.

ದರ ಏರಿಕೆ ವಿವರ: ಕಳೆದ ವಾರವಷ್ಟೇ ಕೆ.ಜಿ.ಗೆ 700 ರೂಪಾಯಿ ಇದ್ದ ಕುರಿ ಮತ್ತು ಮೇಕೆ ಮಾಂಸದ ಬೆಲೆ ಇಂದು 800 ರೂಪಾಯಿಗೆ ಜಿಗಿದಿದೆ. ಇನ್ನು ಕೋಳಿ ಮಾಂಸದ ಬೆಲೆ ಕೆ.ಜಿ.ಗೆ 240 ರಿಂದ 280 ರೂಪಾಯಿಗೆ ಏರಿಕೆಯಾಗಿದೆ. ಮುನಿದ್ಯಾವರ ಆಚರಣೆ, ವರ್ಷದೊಡಕು ಹಾಗೂ ರಂಜಾನ್ ಹಿನ್ನೆಲೆಯಲ್ಲಿ ಮಾಂಸಕ್ಕೆ ಭಾರೀ ಬೇಡಿಕೆ ಬಂದಿರುವುದು ಈ ಬೆಲೆ ಏರಿಕೆಗೆ ಮುಖ್ಯ ಕಾರಣ ಎನ್ನಲಾಗಿದೆ.

ಕುರಿಗಳ ತೀವ್ರ ಕೊರತೆ: "ಹಳ್ಳಿಗಳಲ್ಲಿ ಕುರಿ, ಮೇಕೆ ಸಾಕಾಣಿಕೆ ಕಡಿಮೆಯಾಗಿರುವುದರಿಂದ ಕುರಿಗಳು ಸಿಗುತ್ತಿಲ್ಲ. ಬಯಲಿನಲ್ಲಿ ಮೇಯುವ ಕುರಿಗಳ ಸಂಖ್ಯೆ ಕ್ಷೀಣಿಸಿದ್ದು, ಪಂಜರದಲ್ಲಿ ಸಾಕುವ ಕುರಿಗಳಿಂದ ಗುಣಮಟ್ಟದ ಮಾಂಸ ಸಿಗುತ್ತಿಲ್ಲ. ಒಂದೂವರೆ ತಿಂಗಳು ಅಲೆದಾಡಿ ಕೇವಲ 30 ಕುರಿಗಳನ್ನು ಮಾತ್ರ ಖರೀದಿಸಿದ್ದೇವೆ. ನಮಗೇ ಹೆಚ್ಚಿನ ದರಕ್ಕೆ ಕುರಿಗಳು ಸಿಗುತ್ತಿರುವುದರಿಂದ ಮಾಂಸದ ಬೆಲೆ ಏರಿಸುವುದು ಅನಿವಾರ್ಯವಾಗಿದೆ," ಎಂದು ಮಾಂಸದ ವ್ಯಾಪಾರಿ ಶ್ರೀರಾಮಪ್ಪ ಅಳಲು ತೋಡಿಕೊಂಡಿದ್ದಾರೆ.

"ಕೂಲಿ ಮಾಡುವವರಿಗೆ ಮಾಂಸ ಗಗನಕುಸುಮ": ಮಾರುಕಟ್ಟೆಗೆ ಬಂದಿದ್ದ ಗ್ರಾಹಕ ಮುನಿಶಾಮರೆಡ್ಡಿ ಮಾತನಾಡಿ, "ನಾವು ದಿನಕ್ಕೆ 500 ರೂಪಾಯಿ ಕೂಲಿ ಮಾಡುವವರು. ಇಷ್ಟು ಹಣ ಕೊಟ್ಟು ಮಾಂಸ ಖರೀದಿಸುವುದು ಕಷ್ಟವಾಗಿದೆ. ಹಾಗಾಗಿ ಅನಿವಾರ್ಯವಾಗಿ ಕೆ.ಜಿ.ಗೆ 450 ರೂಪಾಯಿ ನೀಡಿ ಕುರಿ ತಲೆ ಮತ್ತು ಕಾಲುಗಳನ್ನಷ್ಟೇ ಖರೀದಿಸುತ್ತಿದ್ದೇವೆ," ಎಂದು ತಮ್ಮ ಸಂಕಷ್ಟ ಹಂಚಿಕೊಂಡಿದ್ದಾರೆ.

ತಂಪು ಪಾನೀಯಗಳಿಗೂ ಡಿಮ್ಯಾಂಡ್: ಮಾಂಸದ ಮಾರುಕಟ್ಟೆಯ ಬಳಿ ತಂಪು ಪಾನೀಯಗಳ ವ್ಯಾಪಾರವೂ ಜೋರಾಗಿ ನಡೆದಿದ್ದು, ಅಲ್ಲಿಯೂ ಬೆಲೆ ಏರಿಕೆ ಬಿಸಿ ತಟ್ಟಿದೆ. 70 ರೂಪಾಯಿ ಇದ್ದ 2 ಲೀಟರ್ ಪಾನೀಯವನ್ನು 80 ರೂಪಾಯಿಗೆ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ.

# ಮಹಿಳಾ ಸಬಲೀಕರಣಕ್ಕೆ ಶಿಕ್ಷಣವೇ ಅಡಿಪಾಯ: ಡಾ. ಜಯಲಕ್ಷ್ಮಿ

ಕೋಲಾರ

"ನಾರಿಯೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನಾಣ್ಣುಡಿಯಂತೆ, ಶಿಕ್ಷಣದಿಂದ ಮಾತ್ರ ಮಹಿಳೆಯರ ನೈಜ ಸಬಲೀಕರಣ ಸಾಧ್ಯ" ಎಂದು ಕೋಲಾರ ತೋಟಗಾರಿಕಾ ಮಹಾವಿದ್ಯಾಲಯದ ಕೃಷಿ ವಿಸ್ತರಣಾ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಜಯಲಕ್ಷ್ಮಿ ಬಿ. ಪವಾರ್ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಉಪ್ಪುಕುಂಟೆ ಗ್ರಾಮದಲ್ಲಿ ಗ್ರಾಮೀಣ ತೋಟಗಾರಿಕಾ ಕಾರ್ಯಾನುಭವ ಶಿಬಿರದ ಅಂಗವಾಗಿ, ಅಂತಿಮ ವರ್ಷದ ವಿದ್ಯಾರ್ಥಿಗಳು (ಅಭ್ಯುದಯ-64 ಬ್ಯಾಚ್) ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ವಾವಲಂಬಿ ಬದುಕಿಗೆ ಶಿಕ್ಷಣವೇ ಆಸರೆ: ಆಧುನಿಕ ಯುಗದಲ್ಲಿ ಹೆಣ್ಣುಮಕ್ಕಳು ಶಿಕ್ಷಣ ಪಡೆದು ಸ್ವಾವಲಂಬಿಗಳಾಗಬೇಕು. ಇದರಿಂದ ಸಮಾನ ಹಕ್ಕು ಮತ್ತು ಗೌರವ ಪಡೆಯುವುದರ ಜೊತೆಗೆ ದೇಶದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯಲ್ಲಿ ಮಹತ್ತರ ಬದಲಾವಣೆ ತರಲು ಸಾಧ್ಯ ಎಂದು ಅವರು ಆಶಯ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಕೀಟಶಾಸ್ತ್ರ ವಿಭಾಗದ ಸಹ-ಪ್ರಾಧ್ಯಾಪಕ ಡಾ. ಗಂಗಾಧರ ನರಬೆಂಚಿ, "ಕುಟುಂಬ ನಿರ್ವಹಣೆಯ ಜೊತೆಗೆ ದೇಶದ ಅಭಿವೃದ್ಧಿಯಲ್ಲೂ ಮಹಿಳೆಯರ ಪಾಲು ಗಮನಾರ್ಹವಾಗಿದೆ" ಎಂದರು. ಸಹಾಯಕ ಪ್ರಾಧ್ಯಾಪಕ ಡಾ. ಜಗದೀಶ ನಾಯ್ಕ ಮಾತನಾಡಿ, ಮಹಿಳೆಯರ ಸೃಜನಶೀಲತೆ ಮತ್ತು ಅಂತರಾತ್ಮಿಕ ಶಕ್ತಿಯನ್ನು ಗುರುತಿಸಲು ಇಂತಹ ಕಾರ್ಯಕ್ರಮಗಳು ಪೂರಕ ಎಂದು ವಿದ್ಯಾರ್ಥಿಗಳ ಪ್ರಯತ್ನವನ್ನು ಶ್ಲಾಘಿಸಿದರು.

ಕಾರ್ಯಕ್ರಮದ ಅಂಗವಾಗಿ ಗ್ರಾಮದ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ ಹಾಗೂ ಮ್ಯೂಸಿಕಲ್ ಚೇರ್ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿಶೇಷವಾಗಿ ಶಾಲಾ ಮಕ್ಕಳು ಓಬವ್ವ, ಸಾವಿತ್ರಿಬಾಯಿ ಫುಲೆ, ಕಿತ್ತೂರು ಚೆನ್ನಮ್ಮ ಸೇರಿದಂತೆ ಐತಿಹಾಸಿಕ ಮಹಿಳಾ ಮಣಿಗಳ ವೇಷಭೂಷಣ ಧರಿಸಿ ಎಲ್ಲರ ಗಮನ ಸೆಳೆದರು.

ಈ ಸಂದರ್ಭದಲ್ಲಿ ಉರಗಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೇದಾವತಿ, ಶ್ರೀಮತಿ ಮುನಿರತ್ನಾ ಹಾಗೂ ಗ್ರಾಮದ ಮಹಿಳೆಯರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪಾಲಿಶ್ ಕಳ್ಳರು: 30 ಗ್ರಾಂ ಚಿನ್ನದೊಂದಿಗೆ ಪರಾರಿ

ವಿಜಯಪುರ

ಪಾತ್ರೆ ಹಾಗೂ ಒಡವೆಗಳನ್ನು ಪಾಲಿಶ್ ಮಾಡಿಕೊಡುವ ನೆಪದಲ್ಲಿ ಮನೆಗೆ ಬಂದ ಕಳ್ಳರು, ಮಹಿಳೆಯೊಬ್ಬರನ್ನು ನಂಬಿಸಿ ಸುಮಾರು 30 ಗ್ರಾಂ ತೂಕದ ಚಿನ್ನಾಭರಣಗಳನ್ನು ದೋಚಿಕೊಂಡು ಪರಾರಿಯಾಗಿರುವ ಘಟನೆ ಪಟ್ಟಣದ 17ನೇ ವಾರ್ಡಿನಲ್ಲಿ ಶುಕ್ರವಾರ ನಡೆದಿದೆ.

ನಡೆದಿದ್ದೇನು?: ಪಟ್ಟಣದ ಪಂಚಮುಖಿ ಗಣಪತಿ ದೇವಾಲಯದ ರಸ್ತೆಯಲ್ಲಿರುವ ಮುಸ್ಲಿಂ ಸಮುದಾಯದ ಮನೆಯೊಂದಕ್ಕೆ ಬಂದ ಇಬ್ಬರು ಅಪರಿಚಿತರು, "ನಮ್ಮಲ್ಲಿ ಪಾತ್ರೆ ತೊಳೆಯುವ ವಿಶೇಷ ಪೌಡರ್ ಇದೆ" ಎಂದು ನಂಬಿಸಿದ್ದಾರೆ. ಮೊದಲಿಗೆ ಪಾತ್ರೆಯನ್ನು ಶುಭ್ರವಾಗಿ ತೊಳೆದು ತೋರಿಸಿದ ಕಳ್ಳರು, ನಂತರ ಮಹಿಳೆಯ ಕಾಲಿನ ಬೆಳ್ಳಿ ಚೈನುಗಳನ್ನು ಪಾಲಿಶ್ ಮಾಡಿಕೊಟ್ಟು ವಿಶ್ವಾಸ ಗಳಿಸಿದ್ದಾರೆ.

ಬಳಿಕ, "ಚಿನ್ನದ ಒಡವೆಗಳನ್ನೂ ಹೊಳೆಯುವಂತೆ ಮಾಡುತ್ತೇವೆ" ಎಂದು ಪುಸಲಾಯಿಸಿ, ಮಹಿಳೆಯ ಬಳಿಯಿದ್ದ ಚಿನ್ನದ ಚೈನು, ಡಾಲರ್, ಓಲೆ ಹಾಗೂ ಜುಮುಕಿ ಸೇರಿದಂತೆ ಒಟ್ಟು 30 ಗ್ರಾಂ ಬಂಗಾರವನ್ನು ಪಡೆದುಕೊಂಡಿದ್ದಾರೆ.

ಐದು ನಿಮಿಷದ 'ಮ್ಯಾಜಿಕ್' ಕವರ್: ಒಡವೆಗಳನ್ನು ಪಾಲಿಶ್ ಮಾಡಿದಂತೆ ನಟಿಸಿದ ಕಳ್ಳರು, ಒಂದು ಕವರ್ ನೀಡಿ "ಇದನ್ನು 5 ನಿಮಿಷ ಬಿಟ್ಟು ತೆರೆಯಿರಿ, ನಾವು ಮುಂದಿನ ವಾರ ಮತ್ತೆ ಬರುತ್ತೇವೆ" ಎಂದು ಹೇಳಿ ಅಲ್ಲಿಂದ ಕಾಲ್ಕಿತ್ತಿದ್ದಾರೆ. ಅವರು ಹೋದ ಐದು ನಿಮಿಷದ ನಂತರ ಮಹಿಳೆ ಕುತೂಹಲದಿಂದ ಕವರ್ ಬಿಚ್ಚಿ ನೋಡಿದಾಗ, ಅದರಲ್ಲಿ ಚಿನ್ನದ ಬದಲಿಗೆ ಕೇವಲ ಪೌಡರ್ ತುಂಬಿದ್ದ ಡಬ್ಬಿ ಇರುವುದನ್ನು ಕಂಡು ಬೆಚ್ಚಿಬಿದ್ದಿದ್ದಾರೆ.

ಸ್ಥಳಕ್ಕೆ ಪೊಲೀಸರ ಭೇಟಿ: ಮಹಿಳೆಯ ಚೀರಾಟ ಕೇಳಿ ಓಡಿ ಬಂದ ಸ್ಥಳೀಯರು ತಕ್ಷಣ 112 ಸಹಾಯವಾಣಿಗೆ ಕರೆ ಮಾಡಿದ್ದಾರೆ. ಪೊಲೀಸರು ಬರುವಷ್ಟರಲ್ಲಿ ಕಳ್ಳರು ಪರಾರಿಯಾಗಿದ್ದರು. ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ಒಡವೆಗಳನ್ನು ಹೊಸದರಂತೆ ಕಾಣುವಂತೆ ಮಾಡಲು ಹೋಗಿ, ಇದ್ದ ಬಂಗಾರವನ್ನೆಲ್ಲಾ ಕಳೆದುಕೊಂಡ ಮಹಿಳೆಯ ಆಕ್ರಂದನ ಮುಗಿಲು ಮುಟ್ಟಿದೆ. ವಿಜಯಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಕಳ್ಳರ ಪತ್ತೆಗೆ ಜಾಲ ಬೀಸಿದ್ದಾರೆ.

# ವರುಣನ ಅಬ್ಬರಕ್ಕೆ ನೆಲಸಮವಾದ ಬಾಳೆ ತೋಟ: ರೈತರು ಕಂಗಾಲು!



ದೊಡ್ಡಬಳ್ಳಾಪುರ

ಹಿಂದೂಗಳ ಹೊಸ ವರ್ಷ ಯುಗಾದಿ ಹಬ್ಬಕ್ಕೆ ನಾಡು ಸಜ್ಜಾಗುತ್ತಿರುವ ಬೆನ್ನಲ್ಲೇ, ಬುಧವಾರ ರಾತ್ರಿ ಸುರಿದ ಭಾರೀ ಬಿರುಗಾಳಿ ಸಹಿತ ಮಳೆಯು ದೊಡ್ಡಬಳ್ಳಾಪುರ ತಾಲ್ಲೂಕಿನಾದ್ಯಂತ ಭಾರೀ ಅವಾಂತರ ಸೃಷ್ಟಿಸಿದೆ. ಬಿರುಗಾಳಿಯ ಅಬ್ಬರಕ್ಕೆ ನೂರಾರು ಮರಗಳು ಹಾಗೂ ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಹೆದ್ದಾರಿಗಳಲ್ಲಿ ಟ್ರಾಫಿಕ್ ಜಾಮ್: ರಾಜ್ಯ ಹೆದ್ದಾರಿಯ ತಪಸೀಹಳ್ಳಿ ಬಳಿ ಬೃಹತ್ ಮರಗಳು ರಸ್ತೆಗೆ ಉರುಳಿದ ಪರಿಣಾಮ ವಾಹನ ಸಂಚಾರ ಗಂಟೆಗಳ ಕಾಲ ಸ್ಥಗಿತಗೊಂಡಿತ್ತು. ಮದುರೆ-ನೆಲಮಂಗಲ ಮುಖ್ಯರಸ್ತೆಯಲ್ಲೂ ಮರಗಳು ಬಿದ್ದಿದ್ದರಿಂದ ನೂರಾರು ವಾಹನಗಳು ಸಾಲಾಗಿ ನಿಂತಿದ್ದವು. ನಗರದ ಜಾಲಪ್ಪ ಕಾಲೇಜು ರಸ್ತೆ ಹಾಗೂ ನಗರಸಭೆ ಕಚೇರಿ ರಸ್ತೆಯಲ್ಲೂ ಮರಗಳು ಬಿದ್ದು ಸಂಚಾರಕ್ಕೆ ಅಡಚಣೆ ಉಂಟಾಯಿತು.

ಕತ್ತಲಲ್ಲಿ ಹಬ್ಬದ ಸಿದ್ಧತೆ: ಘಾಟಿ ಸುಬ್ರಹ್ಮಣ್ಯ ಮಾರ್ಗದಲ್ಲಿ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಇದರಿಂದಾಗಿ ಹಾಡೋನಹಳ್ಳಿ, ನಾಗೇನಹಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಗ್ರಾಮಸ್ಥರು ಕತ್ತಲಲ್ಲೇ ಯುಗಾದಿ ಹಬ್ಬದ ಸಿದ್ಧತೆ ಮಾಡುವಂತಾಗಿದೆ. ಅರಳು ಮಲ್ಲಿಗೆ ಬಾಗಿಲಿನ ಪ್ರಸನ್ನ ಆಂಜನೇಯಸ್ವಾಮಿ ದೇವಾಲಯದ ಕಾಂಪೌಂಡ್ ಮೇಲೆ ಮರ ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ರೈತರಿಗೆ ಬರಸಿಡಿಲು: ತಾಲ್ಲೂಕಿನ ಗ್ರಾಮಾಂತರ ಭಾಗದಲ್ಲಿ ರೈತರು ಬೆಳೆದಿದ್ದ ಬಾಳೆ ತೋಟಗಳು ಧರೆಗುರುಳಿವೆ. ಮಾವು ಹಾಗೂ ಹಲಸಿನ ಮರದ ಕೊಂಬೆಗಳು ಮುರಿದು ಬಿದ್ದಿದ್ದು, ವರ್ಷಪೂರ್ತಿ ಬೆಳೆಯ ನಿರೀಕ್ಷೆಯಲ್ಲಿದ್ದ ರೈತರು ಈಗ ಕೈಚೆಲ್ಲಿ ಕುಳಿತುಕೊಳ್ಳುವಂತಾಗಿದೆ. ಮೇಷ್ಟ್ರು ಮನೆ ಕ್ರಾಸ್‌ನಿಂದ ನೇರಳಘಟ್ಟ ಗ್ರಾಮದವರೆಗೂ ಮರಗಳು ಬಿದ್ದು ಸಂಚಾರ ಸ್ಥಗಿತಗೊಂಡಿದೆ.

ನಗರಸಭೆ ವಿರುದ್ಧ ಆಕ್ರೋಶ: ಅರಳು ಮಲ್ಲಿಗೆ ಬಾಗಿಲ ಪ್ರೌಢಶಾಲೆ ಪಕ್ಕದ ರಾಜಕಾಲುವೆ ತುಂಬಿ ಹರಿದು ರಸ್ತೆ ಕೆರೆಯಂತಾಗಿತ್ತು. ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಸಾರ್ವಜನಿಕರು ನಗರಸಭೆ ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಮಾ. 25 ರವರೆಗೆ ಮಳೆ ಮುನ್ನೆಚ್ಚರಿಕೆ: ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಹಿನ್ನೆಲೆಯಲ್ಲಿ ಮಾರ್ಚ್ 25 ರವರೆಗೆ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಗುಡುಗು ಸಹಿತ

# ಮಕ್ಕಳಿಗೆ ಮೊಬೈಲ್ ನೀಡಬೇಡಿ, ಹಳೆಯ ಆಟಗಳನ್ನು ಕಲಿಸಿ: ಬಿಇಓ



ಬಂಗಾರಪೇಟೆ

"ಪೋಷಕರು ಮಕ್ಕಳಿಗೆ ಟಿವಿ ಮತ್ತು ಮೊಬೈಲ್‌ಗಳನ್ನು ನೀಡಬಾರದು. ಮೊಬೈಲ್ ವ್ಯಾಮೋಹದಿಂದಾಗಿ ತಾಯಿ ಮತ್ತು ಮಗುವಿನ ನಡುವಿನ ಭಾವನಾತ್ಮಕ ಸಂಬಂಧವೇ ಅಳಿಸಿಹೋಗುತ್ತಿರುವ ನಿದರ್ಶನಗಳಿವೆ," ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಕೆ. ಶಶಿಕಲಾ ಕಳವಳ ವ್ಯಕ್ತಪಡಿಸಿದರು.

ತಾಲ್ಲೂಕಿನ ಮಾರುತಿ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮಾರುತಿ ಯುವಕರ ಬಳಗ ಹಾಗೂ ಗ್ರಾಮಸ್ಥರು ಹಮ್ಮಿಕೊಂಡಿದ್ದ ಶಿಕ್ಷಕ ಎಂ.ಆರ್. ಆಂಜನೇಯಗೌಡ ಅವರ ವರ್ಗಾವಣೆ ನಿಮಿತ್ತ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಗಮನವನ್ನು ಮೊಬೈಲ್‌ನಿಂದ ಬೇರೆಡೆಗೆ ಸೆಳೆಯಲು ಪೋಷಕರು ಅವರಿಗೆ ಹಳೆಯ ಗ್ರಾಮೀಣ ಆಟಗಳನ್ನು ಕಲಿಸಬೇಕು. ಮೂಲಭೂತ ಸೌಲಭ್ಯಗಳಿರುವ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕು ಎಂದು ಅವರು ಕಿವಿಮಾತು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿಕ್ಷಕ ಎಂ.ಆರ್. ಆಂಜನೇಯಗೌಡ, "ನನ್ನ 25 ವರ್ಷಗಳ ಸೇವಾವಧಿಯಲ್ಲಿ ಶಾಲೆಯ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ. ದಾಸಪ್ಪನವರ ಕುಟುಂಬದವರು ನೀಡಿದ 10 ಗುಂಟೆ ಜಮೀನಿನಲ್ಲಿ ಗ್ರಾಮಸ್ಥರ ಸಹಕಾರದಿಂದ ಶಾಲಾ ಕಟ್ಟಡ ಹಾಗೂ ಅಡುಗೆ ಮನೆ ನಿರ್ಮಾಣವಾಗಿದೆ," ಎಂದು ಸ್ಮರಿಸಿದರು.

ಜಿಲ್ಲಾ ಗೆಳೆಯರ ಬಳಗದ ಅಧ್ಯಕ್ಷ ನಾರಾಯಣಸ್ವಾಮಿ ಮಾತನಾಡಿ, ಆಂಜನೇಯ ಗೌಡರು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ನಾಯಕತ್ವದ ಗುಣದೊಂದಿಗೆ ಶಾಲೆಗಳನ್ನು ಉಳಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವರ್ಗಾವಣೆಗೊಂಡ ಶಿಕ್ಷಕ ಎಂ.ಆರ್. ಆಂಜನೇಯಗೌಡ ಹಾಗೂ ಅವರ ಧರ್ಮಪತ್ನಿ ಶಿಕ್ಷಕಿ ನಾಗರತ್ನ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಶಿಕ್ಷಕ ಮುಖಂಡರಾದ ಸಂಜೀವಪ್ಪ, ಗನ್ನೇರಹಳ್ಳಿ ಶ್ರೀನಿವಾಸ್, ನಿವೃತ್ತ ಶಿಕ್ಷಕ ಬಿ.ಎಂ. ಚಂದ್ರಪ್ಪ, ವಿಶಾಲಾಕ್ಷಿ, ಮಂಜುನಾಥ್ ಹಾಗೂ ಮಾರುತಿ ಗೆಳೆಯರ ಬಳಗದ ಕಾಂತರಾಜು, ಬಸವರಾಜು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# 180ಕ್ಕೂ ಹೆಚ್ಚು ಕಲ್ಯಾಣಿಗಳಿಗೆ ಕಾಯಕಲ್ಪ

ಚಿಕ್ಕಬಳ್ಳಾಪುರ

ಬಯಲು ಸೀಮೆಯ ದಾಹ ತೀರಿಸಲು ಜಿಲ್ಲಾ ಪಂಚಾಯಿತಿ ವತಿಯಿಂದ ಬೃಹತ್ ಯೋಜನೆ ರೂಪಿಸಲಾಗಿದ್ದು, ಇದೇ 23 ರಿಂದ ಮುಂದಿನ ಮೂರು ತಿಂಗಳ ಅವಧಿಯಲ್ಲಿ ಜಿಲ್ಲೆಯಾದ್ಯಂತ ಇರುವ ಪುರಾತನ ಕೆರೆ, ಕುಂಟೆ ಹಾಗೂ ಕಲ್ಯಾಣಿಗಳನ್ನು ಶ್ರಮದಾನದ ಮೂಲಕ ಸ್ವಚ್ಛಗೊಳಿಸುವ ಅಭಿಯಾನಕ್ಕೆ ಚಾಲನೆ ನೀಡಲಾಗುವುದು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ. ವೈ.ನವೀನ್ ಭಟ್ ತಿಳಿಸಿದ್ದಾರೆ.

ಮಳೆಗಾಲಕ್ಕೂ ಮುನ್ನ ಸಿದ್ಧತೆ: ನದಿ ಮೂಲಗಳಿಲ್ಲದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜಲಮೂಲಗಳ ಸಂರಕ್ಷಣೆ ಅತ್ಯಂತ ಅವಶ್ಯಕವಾಗಿದೆ. ಜೂನ್ ತಿಂಗಳಿನಿಂದ ಮಳೆಗಾಲ ಆರಂಭವಾಗಲಿದ್ದು, ಅದಕ್ಕೂ ಮುನ್ನವೇ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸುಮಾರು 180ಕ್ಕೂ ಹೆಚ್ಚು ಕಲ್ಯಾಣಿಗಳನ್ನು ಸ್ವಚ್ಛಗೊಳಿಸಿ, ಮಳೆ ನೀರು ಸಂಗ್ರಹಣೆಗೆ ಸಿದ್ಧಪಡಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ.

ಸಾರ್ವಜನಿಕರ ಸಹಭಾಗಿತ್ವಕ್ಕೆ ಕರೆ: "ನೀರು ಜೀವಸಂಕುಲದ ಮೂಲಾಧಾರ. ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಹಾಗೂ ಸಮೃದ್ಧ ಅಂತರ್ಜಲ ಬಿಟ್ಟು ಹೋಗುವುದು ನಮ್ಮೆಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿರುವ ಸ್ವಚ್ಛತಾ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಸಾರ್ವಜನಿಕರು, ಸಂಘ-ಸಂಸ್ಥೆಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಎನ್.ಎಸ್.ಎಸ್ ಹಾಗೂ ಎನ್.ಸಿ.ಸಿ ತಂಡಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು," ಎಂದು ಸಿಇಒ ಮನವಿ ಮಾಡಿದರು.

ಅಭಿಯಾನದ ಪ್ರಮುಖಾಂಶಗಳು:

ಆರಂಭ: ಇದೇ 23, 2026 ರಿಂದ.

ಅವಧಿ: ಮುಂದಿನ 3 ತಿಂಗಳುಗಳ ಕಾಲ ನಿರಂತರ ಶ್ರಮದಾನ.

ಗುರಿ: 180ಕ್ಕೂ ಹೆಚ್ಚು ಪುರಾತನ ಕಲ್ಯಾಣಿಗಳ ಹೂಳೆತ್ತುವುದು ಮತ್ತು ಸ್ವಚ್ಛತೆ.

ಉದ್ದೇಶ: ಅಂತರ್ಜಲ ಮಟ್ಟ ಹೆಚ್ಚಳ ಹಾಗೂ ಮಳೆ ನೀರು ಇಂಗುವಿಕೆ.

# ಸರ್ಕಾರದ ವಿಳಂಬ ನೀತಿಗೆ ಮುರುಗೇಶ್ ಆಕ್ರೋಶ

ಬಂಗಾರಪೇಟೆ

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 200 ಮೀಟರ್ ಎತ್ತರದ ಬೃಹತ್ ಪುತ್ಥಳಿಯನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿ, ಇದೇ ತಿಂಗಳ 23ರ ಸೋಮವಾರದಂದು ಹೊಸಕೋಟೆಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ವರೆಗೆ 'ಮೂರನೇ ಹಂತದ ಸ್ವಾಭಿಮಾನಿಗಳ ಕಾಲ್ನಡಿಗೆ ಜಾಥಾ' ಹಮ್ಮಿಕೊಳ್ಳಲಾಗಿದೆ ಎಂದು ಭೀಮ್ ಪ್ರಜಾ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ವೈಟ್ ಫೀಲ್ಡ್ ಮುರುಗೇಶ್ ತಿಳಿಸಿದ್ದಾರೆ.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆದ ಸಂಘಟನೆಯ ನೂತನ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರದ ಮೌನಕ್ಕೆ ತೀವ್ರ ಬೇಸರ ವ್ಯಕ್ತಪಡಿಸಿದರು.

ದೇಶದಲ್ಲಿ ಅತಿ ಎತ್ತರದ ಪುತ್ಥಳಿ ಅದು ಬಾಬಾ ಸಾಹೇಬ್ ಅಂಬೇಡ್ಕರ್ ಅವರದೇ ಆಗಿರಬೇಕು. ನಮ್ಮ ಈ ನ್ಯಾಯಯುತ ಬೇಡಿಕೆ ಈಡೇರುವವರೆಗೂ ಹೋರಾಟ ಕೈಬಿಡುವುದಿಲ್ಲ ಎಂದು ವೈಟ್ ಫೀಲ್ಡ್ ಭೀಮ್ ಪ್ರಜಾ ಸಂಘದ ರಾಜ್ಯಾಧ್ಯಕ್ಷರು ಮುರುಗೇಶ್ ತಿಳಿಸಿದರು.

ಹೋರಾಟದ ಹಾದಿ: ಈಗಾಗಲೇ ಸಂಘಟನೆಯ ವತಿಯಿಂದ ಎರಡು ಬೃಹತ್ ಪಾದಯಾತ್ರೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಮೊದಲ ಹಂತ: ಬೀದರ್‌ನಿಂದ ಬೆಂಗಳೂರಿನವರೆಗೆ ಸುಮಾರು 1,035 ಕಿ.ಮೀ ಪಾದಯಾತ್ರೆ ನಡೆಸಿದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ.

ಎರಡನೇ ಹಂತ: ಕೋಲಾರದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ವರೆಗೆ ಬೃಹತ್ ಜಾಥಾ ನಡೆಸಲಾಗಿತ್ತು.

"ಎರಡು ಬಾರಿ ರಾಜ್ಯದ ಗಮನ ಸೆಳೆದರೂ ಸರ್ಕಾರದಿಂದ ಯಾವುದೇ ಸ್ಪಂದನೆ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಮೂರನೇ ಹಂತದ ಹೋರಾಟವನ್ನು 23ನೇ ತಾರೀಕು ಹೊಸಕೋಟೆಯಿಂದ ಆರಂಭಿಸುತ್ತಿದ್ದೇವೆ" ಎಂದು ಅವರು ವಿವರಿಸಿದರು.

ಭಾಗವಹಿಸಲು ಮನವಿ: ಭಾರತದ ಉನ್ನತ ಎತ್ತರದಲ್ಲಿ ಅಂಬೇಡ್ಕರ್ ಅವರ ಪ್ರತಿಮೆಯನ್ನು ಕಾಣುವುದು ಪ್ರತಿಯೊಬ್ಬ ಅಭಿಮಾನಿಯ ಆಶಯವಾಗಿದೆ. ಆದ್ದರಿಂದ ರಾಜ್ಯಾದ್ಯಂತ ಇರುವ ಅಂಬೇಡ್ಕರ್ ಅನುಯಾಯಿಗಳು, ಬಹುಜನ ನಾಯಕರು ಮತ್ತು ಸಂವಿಧಾನದ ಆಶಯಗಳನ್ನು ಗೌರವಿಸುವ ಪ್ರತಿಯೊಬ್ಬರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಜಾಥಾವನ್ನು ಯಶಸ್ವಿಗೊಳಿಸಬೇಕೆಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಭೀಮ್ ಪ್ರಜಾ ಸಂಘಟನೆಯ ಜಿಲ್ಲಾಧ್ಯಕ್ಷ ಶಿವಾನಂದ, ಉಪಾಧ್ಯಕ್ಷ ಹರೀಶ್, ಪ್ರಧಾನ ಕಾರ್ಯದರ್ಶಿ ಜ್ಯೋತಿಷ್, ಮಹಿಳಾ ಘಟಕದ ಅಧ್ಯಕ್ಷೆ ನಾಗರತ್ನ, ಜಿಲ್ಲಾ ಕಾರ್ಮಿಕ ಘಟಕದ ಶ್ರೀನಿವಾಸ್, ಸೈಯದ್ ಪಾಷಾ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

# ಮಹಿಳೆಯ ಸರ ಕಿತ್ತಿದ್ದವನು ಈಗ ಜೈಲುಪಾಲು

ವಿಜಯಪುರ


*ದೇವಸ್ಥಾನಕ್ಕೆ ಹೋಗುತ್ತಿದ್ದ ಮಹಿಳೆಯ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಅಪಹರಿಸಿ ಪರಾರಿಯಾಗಿದ್ದ ಆರೋಪಿಯನ್ನು ವಿಜಯಪುರ ಪೊಲೀಸರು ಸಿನಿಮೀಯ ಶೈಲಿಯಲ್ಲಿ ಬೆನ್ನಟ್ಟಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತನನ್ನು, ಬೆಂಗಳೂರಿನ ಡಿ.ಜೆ. ಹಳ್ಳಿಯ ನಿವಾಸಿ ಆರೀಫ್ ಖಾನ್ (25) ಎಂದು ಗುರುತಿಸಲಾಗಿದೆ.*

*ಇದೇ 17ರಂದು ಪದ್ಮಾವತಿ ಎಂಬುವವರು ತಮ್ಮ ದ್ವಿಚಕ್ರ ವಾಹನದಲ್ಲಿ ಮುನೇಶ್ವರ ದೇವಸ್ಥಾನಕ್ಕೆ ಪೂಜೆಗಾಗಿ ತೆರಳುತ್ತಿದ್ದರು. ಈ ವೇಳೆ ಆವತಿ ಬಳಿಯ ರಾಷ್ಟ್ರೀಯ ಹೆದ್ದಾರಿ-44 ರಲ್ಲಿ ಹಿಂಬದಿಯಿಂದ ಬೈಕ್‌ನಲ್ಲಿ ಬಂದ ಆರೋಪಿ, ಪದ್ಮಾವತಿ ಅವರ ಕತ್ತಿನಲ್ಲಿದ್ದ ಸುಮಾರು 5 ಲಕ್ಷ ರೂಪಾಯಿ ಮೌಲ್ಯದ 55 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಅತಿ ವೇಗವಾಗಿ ಪರಾರಿಯಾಗಿದ್ದನು. ಈ ಸಂಬಂಧ ವಿಜಯಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.*

*ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ವಿ. ಚಂದ್ರಕಾಂತ್ ಹಾಗೂ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ವಿಶೇಷ ತಂಡವನ್ನು ರಚಿಸಲಾಗಿತ್ತು. ವಿಜಯಪುರ ಪೊಲೀಸ್ ನಿರೀಕ್ಷಕ ಪ್ರಶಾಂತ್ ಎಸ್. ನಾಯಕ್ ನೇತೃತ್ವದ ತಂಡವು ತಾಂತ್ರಿಕ ಮಾಹಿತಿ ಹಾಗೂ ಖಚಿತ ಬಾತ್ಮಿಯ ಮೇರೆಗೆ ಬೆಂಗಳೂರಿನ ಡಿ.ಜೆ. ಹಳ್ಳಿಯಲ್ಲಿ ಆರೋಪಿಯನ್ನು ವಶಕ್ಕೆ ಪಡೆದಿದೆ.*

*ಆರೋಪಿಯಿಂದ ಕಳವು ಮಾಡಲಾಗಿದ್ದ 55 ಗ್ರಾಂ ಚಿನ್ನದ ಮಾಂಗಲ್ಯ ಸರ ಹಾಗೂ ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಯಶಸ್ವಿ ಕಾರ್ಯಾಚರಣೆಯಲ್ಲಿ ಪಿಎಸ್ಐ ಸುನೀಲ್ ಕುಮಾರ್ ಆರ್., ಸಿಬ್ಬಂದಿಗಳಾದ ಮಹಮ್ಮದ್ ಮುಕ್ತಿಯಾರ್, ಮಧುಕುಮಾರ್, ರಾಮಾಂಜಿ, ಪ್ರವೀಣ್, ಮಂಜುನಾಥ್, ಮಧುಚಂದ್ರ ಹಾಗೂ ನಾಗೇಶ್ ಅವರು ಪಾಲ್ಗೊಂಡಿದ್ದರು. ಪೊಲೀಸರ ಈ ತ್ವರಿತ ಕ್ರಮಕ್ಕೆ ಸಾರ್ವಜನಿಕ ವಲಯದಲ್ಲಿ ಶ್ಲಾಘನೆ ವ್ಯಕ್ತವಾಗಿದೆ.*

# ಅದ್ದೂರಿಯಾಗಿ ಜರುಗಿದ ಮೇಲ್ ದೀಪ ಉತ್ಸವ



ಬಂಗಾರಪೇಟೆ

ಪಟ್ಟಣದ ಗಾಂಧಿನಗರದಲ್ಲಿ ನೆಲೆಸಿರುವ ಇತಿಹಾಸ ಪ್ರಸಿದ್ಧ ಶಕ್ತಿ ದೇವತೆ ಶ್ರೀ ಗಂಗಮ್ಮ ದೇವಾಲಯದಲ್ಲಿ ಗುರುವಾರ ರಾತ್ರಿ 'ಮೇಲ್ ದೀಪ' ಉತ್ಸವವು ಅತ್ಯಂತ ಶ್ರದ್ಧಾಭಕ್ತಿಯಿಂದ ಹಾಗೂ ಅದ್ದೂರಿಯಾಗಿ ನೆರವೇರಿತು.

ಪಟ್ಟಣದ 'ಊರು ಗಂಗಮ್ಮ' ಎಂದೇ ಭಕ್ತರಿಂದ ಕರೆಸಿಕೊಳ್ಳುವ ಈ ದೇವಾಲಯದಲ್ಲಿ ಪ್ರತಿವರ್ಷ ಯುಗಾದಿ ಹಬ್ಬದ ಸಂದರ್ಭದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ವಾಡಿಕೆ. ಅದರಂತೆ ಈ ವರ್ಷವೂ ದೇವಿಗೆ ಮುಂಜಾನೆಯಿಂದಲೇ ಅಭಿಷೇಕ ಹಾಗೂ ವಿಶೇಷ ಅಲಂಕಾರಗಳನ್ನು ಮಾಡಲಾಗಿತ್ತು. ದೇವಿಯನ್ನು ವಿವಿಧ ಬಗೆಯ ಪುಷ್ಪಗಳಿಂದ ಸೃಜನಾತ್ಮಕವಾಗಿ ಅಲಂಕರಿಸಿದ್ದು ಭಕ್ತರ ಕಣ್ಮನ ಸೆಳೆಯಿತು.

ಗಾಂಧಿನಗರ ಹಾಗೂ ಕುಂಬಾರ ಪಾಳ್ಯದ ಗ್ರಾಮಸ್ಥರು ಒಗ್ಗೂಡಿ ನಡೆಸುವ ಈ 'ಮೇಲ್ ದೀಪ' ಉತ್ಸವದಲ್ಲಿ ನೂರಾರು ಭಕ್ತಾದಿಗಳು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು. ಉತ್ಸವದ ಅಂಗವಾಗಿ ದೇವಾಲಯದ ಆವರಣದಲ್ಲಿ ಜೈಕಾರಗಳು ಮೊಳಗಿದವು. ಪೂಜಾ ಕೈಂಕರ್ಯಗಳ ನಂತರ ಆಗಮಿಸಿದ್ದ ಭಕ್ತರಿಗೆ ದೇವಾಲಯದ ವತಿಯಿಂದ ತೀರ್ಥ ಪ್ರಸಾದ ವಿನಿಯೋಗವನ್ನು ಮಾಡಲಾಯಿತು. ಕುಂಬಾರ ಪಾಳ್ಯ ಮತ್ತು ಗಾಂಧಿನಗರದ ಪ್ರಮುಖರು ಹಾಗೂ ಸ್ಥಳೀಯ ನಿವಾಸಿಗಳು ಈ ಧಾರ್ಮಿಕ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದರು.

# ಪೋತಲುರಾಜರ ನೃತ್ಯಕ್ಕೆ ಮಾರುಹೋದ ಗ್ರಾಮಸ್ಥರು!



ವೈ.ಎನ್. ಹೊಸಕೋಟೆ

ಗ್ರಾಮದ ಶ್ರೀಮಂತ ಇತಿಹಾಸದ ನಂಟು ಹೊಂದಿರುವ, ಯಲ್ಲಪ್ಪನಾಯಕನ ಹೊಸಕೋಟೆ ಸಂಸ್ಥಾನದ ಪಾರಂಪರಿಕ ಗುರಿಕಾರರ ಜ್ಯೋತಿ ಉತ್ಸವವು ಯುಗಾದಿಯ ಮರುದಿನವಾದ ಶುಕ್ರವಾರದಂದು ಅತ್ಯಂತ ಸಡಗರ-ಸಂಭ್ರಮದಿಂದ ಜರುಗಿತು.

ಸಂಸ್ಥಾನದ ಗುರಿಕಾರರಾದ ದೊಡ್ಡಲಿಂಗಮಯ್ಯ ಮತ್ತು ಸಣ್ಣಲಿಂಗಮಯ್ಯ ಅವರ ವಂಶಸ್ಥರು ಜ್ಯೋತಿಗಳನ್ನು ಹೊತ್ತು ಪುರಮೆರವಣಿಗೆ ನಡೆಸುವ ಮೂಲಕ ಹಿರಿಯರ ಸ್ಮರಣೆ ಮಾಡಿದರು. ಸಾಂಪ್ರದಾಯಿಕ ಉಡುಗೆ ತೊಟ್ಟ ಪೋತಲುರಾಜರು ವಾದ್ಯಮೇಳದ ಲಯಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಮೆರವಣಿಗೆಯ ಆಕರ್ಷಣೆಯ ಕೇಂದ್ರಬಿಂದುವಾದರು.

ಗ್ರಾಮದ ನಿಡಗಲ್ಲು ಮಾರಮ್ಮ ದೇವಾಲಯದಿಂದ ಆರಂಭವಾದ ಈ ಭವ್ಯ ಮೆರವಣಿಗೆಯು ಬೆಸ್ತರಹಳ್ಳಿ ರಸ್ತೆಯ ಮೂಲಕ ಸಾಗಿ, ಗ್ರಾಮದೇವತೆ ಗೌರಸಮುದ್ರ ಮಾರಮ್ಮ ದೇವಾಲಯ ತಲುಪಿತು. ಅಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಸಂತೆ ಊರುಬಾಗಿಲು, ದೊರೆಗಳ ಮನೆ, ಗಿಡ್ಡ ಆಂಜನೇಯಸ್ವಾಮಿ ರಸ್ತೆ ಹಾಗೂ ಕುವೆಂಪು ವೃತ್ತದ ಮೂಲಕ ಹಾದು ಬಂದಿತು.

ಮೆರವಣಿಗೆಯು ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ ಮುಂದಿರುವ ದಳವಾಯಿಗಳ ಸಮಾಧಿಗಳ ಬಳಿ ಸಮಾರೋಪಗೊಂಡಿತು. ಈ ಸಂದರ್ಭದಲ್ಲಿ ಸಮಾಧಿಗಳಿಗೆ ವಿಶೇಷ ಪೂಜೆ ಸಲ್ಲಿಸಿ, ಸಾಂಪ್ರದಾಯಿಕವಾಗಿ ಚಾಟಿ ಹಾಕಿಕೊಳ್ಳುವ ವಿಶಿಷ್ಟ ಆಚರಣೆ ನಡೆಯಿತು. "ಆಧುನಿಕತೆಯ ಅಬ್ಬರದಲ್ಲಿ ಹಳೆಯ ಸಂಪ್ರದಾಯಗಳು ನಶಿಸುತ್ತಿರುವ ಇಂದಿನ ಕಾಲಘಟ್ಟದಲ್ಲಿ, ದಳವಾಯಿಗಳ ಸ್ಮರಣಾರ್ಥ ಈ ಉತ್ಸವವನ್ನು ಇಂದಿಗೂ ಜೀವಂತವಾಗಿರಿಸಿರುವುದು ಗ್ರಾಮದ ಸಾಂಸ್ಕೃತಿಕ ಪರಂಪರೆಗೆ ಸಾಕ್ಷಿಯಾಗಿದೆ."

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy